(SRI KADIDAL MANJAPPA.)

published in the *Mysore Gazette Extraordinary* dated 23rd March 1953, under Rule 48 of the Rules of Procedure in the Mysore Legislative Assembly.

Sri J. MOHAMED IMAM (Jagalur).—When will these Bills be taken up, Sir ?

Sri K. HANUMANTHAIYA.—(Leader of the House).—Tomorrow.

Sri J. MOHAMED IMAM.—I think the Appropriation Bill will be taken up tomorrow.

Mr. SPEAKER.—The Appropriation Bill will be taken up day after tomorrow. Other Bills will be taken up tomorrow.

BUDGET FOR 1953-54 DEMANDS FOR GRANTS.

Mr. SPEAKER.—Now we will take up voting of demands for grants for 1953-54. Demand Nos. 37 to 45.

DEMAND No. 37.
WARKING EXPENSES—IRRIGATION WORKS.

XVII. I.N.E. & D. WORKS FOR WHICH CAPITAL ACCOUNTS ARE KEPT.

Mr. SPEAKER.—Motion moved :

"That a sum not exceeding Rs. 27,05,000 be granted to the Government to defray the charges which will come in course of payment during the year ending 31st day of March 1954, in respect of 'I.N.E.D. Works for which capital accounts are kept—Working Expenses'."

Sri J. MOHAMED IMAM.—Sir, I submit that we may devote a major part of the time for discussion on the electricity schemes.

Mr. SPEAKER.—That is Demand No. 38.

Sri J. MOHAMED IMAM.—Demands Nos. 38 and 42. I submit we may devote an hour and a half for tehse two demands. On Irrigation covered under Demands Nos. 37 and 40, we may spend one hour. We have got at our disposal 2½ hours. We may therefore concentrate this time on these two important Demands.

Mr. SPEAKER.—For Demands Nos. 37 and 40, you are suggesting that one hour may be allotted.

Sri J. MOHAMED IMAM.—Yes, Sir.

Mr. SPEAKER.—Demand No. 40 may be discussed under 37, so that, 40 may be put to guillotine. So under 37, we will devote one hour. For 38 and 42 we will devote an hour and a half.

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ಸಂಸ್ಥಾನದಲ್ಲಿ ದೊಡ್ಡ ಜಲಾಶಯಗಳ ನಿರ್ಮಾಣಕಾರ್ಯವನ್ನು ಸರ್ಕಾರದವರು ಕೈಕೊಂಡಿದ್ದಾರೆ. ಆದರೆ ಕಾರ್ಯಸಾಧನೆಯಾಗುತ್ತಿರುವುದು ನಿಧಾನವಾಗಿದೆಯೆಂಬುದು ಗಮನಕ್ಕೆ ಬಂದಿದೆ. ಈ ದೊಡ್ಡ ಯೋಜನೆಗಳನ್ನು ಕೈಕೊಂಡಿದ್ದೇವೆಂದು ಸುಮ್ಮನೆ ಕುಳಿತುಕೊಳ್ಳುವುದಕ್ಕಿಂತ ಅಲ್ಲಲ್ಲಿ ನಮಗೆ ದೊರೆಯುವ ಪ್ರಾಕೃತಿಕ ಅನುಕೂಲಗಳನ್ನು ಉಪಯೋಗಿಸಿಕೊಂಡು ಸಣ್ಣಸಣ್ಣ ಜಲಾಶಯಗಳನ್ನು ಕಲ್ಪಿಸಿದರೆ ನಮ್ಮ ಆಹಾರ ಕೊರತೆ ಕಡಮೆಯಾಗುವುದರಲ್ಲಿ ಸಂಶಯವಿಲ್ಲ. ನಾನು ನಮ್ಮ ತಾಲ್ಲೂಕಿನಲ್ಲಿ ಸಂಚಾರಮಾಡಿ ನೋಡುವಾಗ ಭದ್ರಾವತಿ ತಾಲ್ಲೂಕಿನ ಅರಸನಘಟ್ಟ, ಉಡಂಗಾಲ್ ಎಂಬ ಗ್ರಾಮಗಳ ಹತ್ತಿರ ಎರಡು ಸಣ್ಣ ಕೆರೆಗಳನ್ನು ಕಟ್ಟಲು ಶ್ಲಾಘ್ಯವಾದ ಸ್ಥಳಗಳಿವೆ. ಈ ಕೆರೆಗಳನ್ನು ಕಟ್ಟಿದರೆ ಎರಡು ಸಾವಿರ ಎಕರೆಗಳಷ್ಟು ಜಮೀನನ್ನು ತರೀ ಸಾಗುವಳಿಗೆ ತರಲು ಅನುಕೂಲವಾಗುತ್ತದೆ. ಇಂಜಿನಿಯರುಗಳು ಕೂಡ ಸರ್ವೆ ನಡೆಸಲು ತಯಾರಾಗಿದ್ದಾರೆ, ಹೀಗೆ ಸಣ್ಣ ಸಣ್ಣ ಜಲಾಶಯಗಳ ನಿರ್ಮಾಣವನ್ನು ಕೈಕೊಂಡರೆ ಅನ್ನಾಭಾವವನ್ನು ನಿವಾರಿಸಲು ಅನುಕೂಲವಾಗುತ್ತದೆ. ಆದುದರಿಂದ ಭದ್ರಾವತಿ ತಾಲ್ಲೂಕಿನಲ್ಲಿ ಈ ಎರಡು ಪ್ರದೇಶಗಳನ್ನು ಸೂಕ್ತ ಪರೀಕ್ಷೆ ನಡೆಸಿ ಕಾಮಗಾರಿಗಳನ್ನು ಕೈಕೊಂಡು ಅಲ್ಪ ವೆಚ್ಚದಲ್ಲಿ ಕಟ್ಟಿಸಿದರೆ ಸಂಸ್ಥಾನಕ್ಕೆ ಬಹಳ ಅನುಕೂಲವಾಗುತ್ತದೆ ಎಂದು ಸೂಚನೆಮಾಡಿ ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ ಅನುಸೂಚಿತ ಜಾತಿಗಳು).—ಮಾನ್ಯ ಸಭಾಪತಿಯವರೆ, ಈಗ ನೀರಾವರಿ ಕಾಮಗಾರಿಗಳನ್ನು ಅಭಿವೃದ್ಧಿ ಪಡಿಸಬೇಕು, ತನ್ಮೂಲಕ ಬೇಸಾಯದ ಅಭಿವೃದ್ಧಿ ಸಾರೋದ್ಧಾರವಾಗಿ ನಡೆಯಬೇಕು ಎಂಬುದು ಸರ್ಕಾರದ ಒಂದು ಘನವಾದ ಉದ್ದೇಶವಾಗಿದೆ. ಆದರೆ ಈ ಕೆಲಸಗಳು ಎಷ್ಟು ದಿವಸಗಳಿಂದ ನಡೆದುಕೊಂಡು ಬರುತ್ತಿದ್ದರೂ ಕೂಡ ಕೆರೆಗಳು, ಕಾಲುವೆಗಳು ಇವುಗಳನ್ನು ಯಾವ

---

* Indicates that the speech has not been revised by the Member concerned.

ಒಂದು ಕ್ರಮದಲ್ಲಿ, ಒಂದು ಶಿಸ್ತಿನಲ್ಲಿ ನಡೆಸಿಕೊಂಡು ಹೋಗಬೇಕೆಂಬ ಬಗ್ಗೆ ಇನ್ನೂ ಹೆಚ್ಚು ನಿರ್ದಿಷ್ಟವಾದ ಒಂದು ಕ್ರಮವನ್ನು ಅನುಸರಿಸತಕ್ಕದ್ದು ಸೂಕ್ತ. ಕೆರೆಗಳ ರಿಪೇರಿ ಬಗ್ಗೆ ಮೇಜರ್ ಕೆರೆಗಳು, ಮೈನರ್ ಕೆರೆಗಳು ಎಂದು ಎರಡು ಭಾಗಗಳನ್ನು ಮಾಡಿಕೊಂಡು ರಿಪೇರಿ ಮಾಡುತ್ತಾರೆ. ಹಣದ ಅಭಾವದಿಂದ ಎಷ್ಟುಮಟ್ಟಿಗೆ ಸಾಧ್ಯವೋ ಅಷ್ಟುಮಟ್ಟಿಗೆ ಮಾಡುತ್ತೇವೆ ಎನ್ನುವುದೇನೋ ಅನಿವಾರ್ಯ. ಆದರೆ ಈ ಕೆರೆಗಳ ರಿಪೇರಿ ಮಾಡುವ ಬಗ್ಗೆ ಒಂದು 'ಪ್ರಯಾರಿಟಿ' ಪಟ್ಟಿಯನ್ನು ಹಾಕಿಕೊಂಡು ಅದನ್ನು ಖಚಿತವಾಗಿ ಇಲಾಖೆಯವರು ಅನುಸರಿಸುತ್ತಾರೆಂಬ ನಂಬಿಕೆ ನನಗಿಲ್ಲ. ಸ್ಥಳದ ವಿದ್ಯಮಾನಗಳಿಗನುಸಾರವಾಗಿ ನಡೆಯುತ್ತಿರುವಂತೆ ಕಾಣುತ್ತದೆ. ಜನರು ಬಂದು ಇಂಥ ಕೆಲಸಮಾಡಿ, ಇದು ಮಾಡಬೇಡಿ ಎಂದು ಹೇಳಿದ್ದರಿಂದ ತೆಗೆದುಕೊಂಡೆವು, ಜನರಿಂದ ಒತ್ತಾಯವಿಲ್ಲದ್ದನ್ನು ಬಿಟ್ಟೆವು ಎಂದು ಹೇಳುತ್ತಾರೆ. ಕೆರೆಗಳನ್ನು ರಿಪೇರಿ ಮಾಡಲು, ಕಾಲುವೆಗಳಲ್ಲಿರುವ ಹೂಳು ತೆಗೆಯಲು ಎಷ್ಟೆಷ್ಟು ಖರ್ಚಾಗುತ್ತದೆ, ಎಷ್ಟೆಷ್ಟು ನಡೆಸಬಹುದು ಎಂಬುದನ್ನು ನಿರ್ಧಾರಮಾಡಿಕೊಂಡು ಒಂದು ಗೊತ್ತಾದ ಕ್ರಮವನ್ನಿಟ್ಟುಕೊಂಡು ಶಿಸ್ತಿನಿಂದ ಮಾಡಿಕೊಂಡು ಹೋಗುವುದು ಉಚಿತ. ಈಗ ಒಂದು ಕೆರೆಯ ಕೆಲಸವನ್ನು ಪಟ್ಟಿಯಲ್ಲಿಟ್ಟಿರುತ್ತಾರೆ, ಸಂಬಂಧಪಟ್ಟ ರೈತರು ತಮ್ಮ ಕೆರೆಯ ಕೆಲಸವನ್ನು ಮಾಡಿಸುತ್ತಾರೆಂಬ ನಿರೀಕ್ಷೆಯಲ್ಲಿರುತ್ತಾರೆ. ಆದರೆ ಇದ್ದಕ್ಕಿದ್ದ ಹಾಗೆ ಬೇರೊಂದು ಕೆಲಸವನ್ನು ತೆಗೆದುಕೊಳ್ಳುತ್ತಾರೆ. ಏನೋ ಇರುತ್ತದೆ, ಮತ್ತೇನೋ ಕಾರಣ ಕೊಡುತ್ತಾರೆ. ಇರುತ್ತದೆ. ಆದರೆ ಇದು ಸಮರ್ಪಕವಾದ ಮಾರ್ಗವಲ್ಲ. ಯಾವ ಅಡ್ಡಿ ಆತಂಕವೂ ಇಲ್ಲದೆ, ರೈತರಿಗೆ ಯಾವ ಯಾವುದು ಅನುಕೂಲವಾಗುತ್ತದೆಂದು ನೋಡಿಕೊಂಡು ಒಂದು ಕ್ರಮವನ್ನನುಸರಿಸಿ ಮಾಡದೆ ಅವರು ಹೇಳಿದುದರಿಂದ ಮುಂಚೆ ಮಾಡುವುದು ಇವರು ಹೇಳಿದುದರಿಂದ ಮುಂಚೆ ಮಾಡಿದೆವೆನ್ನುವುದರಿಂದ, ಒಂದು ನೀತಿಯನ್ನನುಸರಿಸಿ ಮಾಡದೇ ಇರುವುದರಿಂದ ಅನೇಕ ತೊಡಕುಗಳು ಬರುತ್ತವೆ. ಈಗ ರೈತರು ಎಷ್ಟೋ ಸಂದರ್ಭಗಳಲ್ಲಿ ಸಣ್ಣ ಪುಟ್ಟ ಕೆರೆಗಳ ಕೆಲಸಗಳನ್ನು ಮಾಡಿಸಿಕೊಡಬೇಕೆಂದೂ ಅದಕ್ಕೆ ತಗಲುವ ಖರ್ಚನ್ನು ತಾವು ಕೊಡುವುದಾಗಿಯೂ ಒತ್ತಾಯಪಡಿಸಿ ಆ ಕೆಲಸಗಳನ್ನು ಮಾಡಿಸಿಕೊಡಬೇಕೆಂದು ಕೇಳುತ್ತಲೇ ಇದ್ದಾರೆ. ಅಂತಹ ಕೆಲಸಗಳ ಬಗ್ಗೆ ಕ್ರಮವಾಗಿ ಯಾವ ಒಂದು ಪಟ್ಟಿಯನ್ನೂ ತಯಾರಿಸಿಲ್ಲ. ಆದಕಾರಣ ಒಂದು ಕ್ರಮದಲ್ಲಿ ಕೆಲಸಗಳನ್ನು ನಡೆಸಲು ಚ್ಯುತಿ ಬಂದಿದೆ. ಖಂಡಿತವಾಗಿಯೂ ಕಾಮಗಾರಿಗಳ ಒಂದು ಪ್ರಯಾರಿಟಿ ಲಿಸ್ಟನ್ನನುಸರಿಸಿ ಪಟ್ಟಿಯನ್ನು ತಯಾರಿಸಿ ಅದರಂತೆ ಕೆಲಸಮಾಡಿಸಬೇಕೆಂದು ನನ್ನ ಸಲಹೆ.

ಇನ್ನೊಂದು ವಿಷಯವೇನೆಂದರೆ, ಒಂದೊಂದು ಸಣ್ಣ ಕೆಲಸವಾದರೂ ವರ್ಷಗಟ್ಟಲೆ ಆಗುತ್ತದೆ. ಕೆಲಸಗಳು ಜಾಗ್ರತೆ ನಡೆಯಬೇಕು. ಹಣ ಸದುಪಯೋಗವಾಗಬೇಕು. ರಸ್ತೆಗಳಿಗೆ ಬ್ಲೈಂಡೇಜ್ ಎಂದು ರಸ್ತೆಯ ಮೇಲೆ ಸ್ವಲ್ಪ ಮಣ್ಣು ಹಾಕುತ್ತಾರೆ, ನಾಲೆಗಳ ಹೂಳು ತೆಗೆಯುತ್ತಾರೆ. ಎರಡುಮೂರುಸಾರಿ ಕೆಲಸ ಮಾಡಿಸಿದಂತೆ ಲೆಕ್ಕದಲ್ಲಿ ಹಣ ಖರ್ಚು ಬಿದ್ದಿರುತ್ತದೆ, ಆದರೆ ಕೆಲಸ ಮಾತ್ರ ಸಮರ್ಪಕವಾಗಿ ನಡೆದಿರುವುದಿಲ್ಲ, ಹಣ ಸದುಪಯೋಗವಾಗಿರುವುದಿಲ್ಲ; ಇಂಥಾ ಸಂದರ್ಭಗಳಿವೆ. ಇದನ್ನು ಕೂಲಂಕಶವಾಗಿ ಪರಿಶೀಲನೆಮಾಡಬೇಕು.

'ಗ್ರೋಮೋರ್‌ಫುಡ್' ಯೋಜನೆಯಲ್ಲಿ ಹೆಚ್ಚು ಹಣವಿಲ್ಲವೆಂಬ ವಾದಕ್ಕೆ ಬೆಂಬಲ ಕೊಡಬಹುದಾದರೂ ಸಣ್ಣ ಖರ್ಚಿನಲ್ಲಿ ಆಗುವ ರಿಪೇರಿ ಕೆಲಸಗಳನ್ನು ಅದರಲ್ಲೂ ವಿಶೇಷವಾಗಿ ಕೆರೆಗಳ ತೂಬಿನ ರಿಪೇರಿ ಕೆಲಸಗಳನ್ನು ಬೇಗ ಬೇಗ ಮಾಡಿಸಬೇಕು, ಇಲ್ಲದಿದ್ದರೆ ನಷ್ಟವಾಗುತ್ತದೆ. ಸಣ್ಣಪುಟ್ಟ ರಿಪೇರಿ ಕೆಲಸಗಳನ್ನು ಮೊದಲು ಮಾಡಿ, ಹಣದ ಅಭಾವ ಕಡಮೆಯಾದ ಹಾಗೆ ದೊಡ್ಡ ದೊಡ್ಡ ಕೆಲಸಗಳನ್ನು ತೆಗೆದುಕೊಂಡು ಕೆರೆಗಳ ಮತ್ತು ನಾಲೆಗಳ ಕಾಮಗಾರಿಗಳನ್ನು ಖಚಿತವಾದ ನೀತಿಯನ್ನನುಸರಿಸಿಕೊಂಡು ಹೋಗುತ್ತ ಮಾಡಬೇಕು. ವಿದ್ಯುಚ್ಛಕ್ತಿಗೇ ಬೇರೆ ಇಂಜನೀಯರು, ಕಟ್ಟಡಕ್ಕೆ, ರಸ್ತೆಗಳಿಗೆ ಬೇರೆ ಬೇರೆ ಇರುವ ಹಾಗೆ, ನೀರಾವರಿಗೇ ಬೇರೆ ಅಧಿಕಾರಿಗಳನ್ನು ನೇಮಿಸಿ, ಅವರಿಗೆ ಕಟ್ಟಡಗಳ ಜವಾಬ್ದಾರಿಯಿಲ್ಲದೇ ಇದಕ್ಕೆ ಹೆಚ್ಚು ಗಮನ ಕೊಡುವಂತೆ ಏರ್ಪಾಡು ಮಾಡಬೇಕು. ನೀರಾವರಿಯ ಕಾಮಗಾರಿ ವಿಷಯ ಎಂಬುದು ಶಂಕರ ಲಿಂಗೇಗೌಡರಿಗೆ ಬಹಳ ಪ್ರಿಯವಾದ ವಿಷಯ. ಪಾಪ! ಅವರು ಇಲ್ಲವಾದರು! ಆದರೂ ನಾವು ನಮ್ಮ ಸತ್ಪ್ರಯತ್ನಗಳನ್ನು ಬಿಡುವ ಹಾಗಿಲ್ಲ. ದೇಶದ ಮುಂದಿರತಕ್ಕ ಮಹಾ ಸಮಸ್ಯೆ ಆಹಾರ. ಇದಕ್ಕೆ ನೀರಾವರಿ ಬಹುಮುಖ್ಯ. ಈಗ ನಾವು ಹೆಚ್ಚು ಶ್ರದ್ಧೆಯಿಂದ ಕೆಲಸಮಾಡುವುದು ಅವಶ್ಯಕ. ಹೆಚ್ಚು ಬೆಳೆ ಬೆಳೆದು, ಆಹಾರ ಪರಿಸ್ಥಿತಿ ಸುಧಾರಿಸಿ ಬೇಸಾಯ ಇನ್ನೂ ಉನ್ನತಮಟ್ಟಕ್ಕೇರಬೇಕಾದರೆ ನೀರಾವರಿ ಕೆಲಸ ಚೆನ್ನಾಗಿ ಬೇಗ ಬೇಗ ನಡೆಯಬೇಕಾದುದು ಅನಿವಾರ್ಯ. ನಮ್ಮ ದೇಶದ ನೀರಾವರಿ ಕೆಲಸ, ಬೇಸಾಯದ ಕೆಲಸ ಇನ್ನೂ ಶಾಸ್ತ್ರೀಯವಾಗಿ ನಡೆಯುವ ಮಟ್ಟಕ್ಕೆ ಬಂದಿಲ್ಲವೆಂದು ಎಲ್ಲರಿಗೂ ಗೊತ್ತಿದೆ. ಇಂಜನಿಯರಿಂಗ್ ಇಲಾಖೆಯಲ್ಲಿ, ಕೆರೆಗಳ ಪಟ್ಟಿಯಿದೆ, ಬೇಕಾದಷ್ಟು ಕೆರೆಗಳಿವೆ, ಜೀರ್ಣೋದ್ಧಾರವಾಗಬೇಕಾದ ಕೆರೆಗಳೆಷ್ಟೋ ಇವೆ. ನಮ್ಮ ಕೆರೆಗಳನ್ನು ನಾವು ಸರಿಯಾಗಿಟ್ಟುಕೊಂಡರೆ ಎಷ್ಟೋ ಉಪಯೋಗವಾಗುತ್ತದೆ. ಈಗ ಕೆರೆಗಳಿಂದ ಹೂಳು ತೆಗೆಯುವ ಕೆಲಸವನ್ನು ಆಗಾಗ ಮಾಡುತ್ತಾರೆ. ಏರಿಗಳಿಗೆ ಮಣ್ಣು ಹಾಕುತ್ತಾರೆ. ಸಾಮಾನ್ಯವಾಗಿ ಗ್ರಾಮಗಳಲ್ಲಿ ಪ್ರತಿಮನೆಯಿಂದಲೂ ಜನರನ್ನು ಕರೆದು ಕೆಲಸ ಮಾಡಿಸುತ್ತಾರೆ. ಈ ಕೆಲಸ ಅಷ್ಟು ಸಮರ್ಪಕವಾಗಿ ನಡೆಯುತ್ತಿಲ್ಲ. ಇನ್ನೂ ಚೆನ್ನಾಗಿ ನಡೆಯಬೇಕು. ಆಯಾ ಕೆರೆಯ ಅಚ್ಚುಕಟ್ಟುದಾರರ ಮೇಲೆ ಜವಾಬ್ದಾರಿ ಹಾಕಿ, ಕೆರೆಗಳನ್ನು ಉಪಯೋಗಿಸುವವರು ನೀವು, ಅದರ ಫಲ ಪಡೆಯುವವರು ನೀವು, ಕೆರೆಯನ್ನು ಚೆನ್ನಾಗಿಟ್ಟುಕೊಳ್ಳುವ ಜವಾಬ್ದಾರಿ ನಿಮ್ಮದು, ಎಂದು ಹೇಳಿ; ಅವರ ಮೇಲೆ ಒತ್ತಾಯ ತಂದರೂ ತಪ್ಪಾಗಲಾರದು. ಕೆರೆಗಳ ಏರಿ ಮೇಲಿನ ಹುಲ್ಲನ್ನು ಗ್ರಾಮದ ಜನರು ಉಪಯೋಗಿಸುತ್ತಾರೆಂಬುದರ ಮೇಲೆ ಅಲ್ಲಿಯ ಜನರು ಕೆಲಸಮಾಡಬೇಕೆಂಬ ತತ್ವವನ್ನು ಒಪ್ಪಬಹುದಾದರೂ ಕೆರೆಯ ಅಚ್ಚುಕಟ್ಟುದಾರರ ಜವಾಬ್ದಾರಿ ಇನ್ನೂ ಜಾಸ್ತಿಯಿದೆ. ಹೂಳು ತೆಗೆಯುವ ಜವಾಬ್ದಾರಿಯನ್ನೂ ಅಚ್ಚುಕಟ್ಟುದಾರರ ಮೇಲೆ ಹೊರಿಸಿ ಕಡ್ಡಾಯವಾಗಿ ಮಾಡಿಸಿದರೆ ಹೆಚ್ಚು ಕೆರೆಗಳನ್ನು ಒಳ್ಳೆಯ ಸ್ಥಿತಿಯಲ್ಲಿಡಬಹುದು. ನಮ್ಮ ಕೆರೆಗಳ ಪಟ್ಟಿಯನ್ನು ನೋಡಿದರೆ ಒಡೆದುಹೋಗಿರುವ ಎಷ್ಟೋ ಕೆರೆಗಳು ಜೀರ್ಣೋದ್ಧಾರವಾಗದೆ ಅನೇಕ ವರ್ಷಗಳಿಂದ ನಿಂತಿವೆ. ಇದು ಬಹಳ ಶೋಚನೀಯವಾದ ಸಂಗತಿ. ಹತ್ತಾರು ಏಕೆ, ನೂರಾರು ವರ್ಷಗಳಿಂದ ರಿಪೇರಿ ಮಾಡಿಲ್ಲ. ಈ ಕೆರೆಗಳ ಚರಿತ್ರೆಯನ್ನು ನೋಡಿದರೆ ಕೇಳುವವರೇ ಇಲ್ಲದೆ, ನೋಡುವ

(ಶ್ರೀ ಕೆ. ಪ್ರಭಾಕರ್.)

ವರೇ ಇಲ್ಲದೆ ಈ ಸ್ಥಿತಿಯಲ್ಲಿವೆಯೆಂದು ಭಾಸವಾಗುತ್ತದೆ. ಖಚಿತವಾಗಿ ಇವುಗಳು ಹಣದ ಅಭಾವದಿಂದ ಹೀಗಿವೆ ಯೆಂದು ಹೇಳುವ ಹಾಗಿಲ್ಲ. ಅಂತೂ ನಮ್ಮ ಕೆರೆಗಳ ಚರಿತ್ರೆ ಬಹಳ ಶೋಚನೀಯವಾಗಿದೆ. ಆಯಾ ಸ್ಥಳೀಯ ಸಬ್‌ಡಿವಿಜನ್ ಅಧಿಕಾರಿಗಳಿಂದ ಅಲ್ಲಿ ಎಷ್ಟು ನೀರಾವರಿ ಕಾಮಗಾರಿಗಳು ನಡೆಯಬೇಕಾಗಿದೆಯೆಂಬುದನ್ನು ಪರಿಶೀಲಿಸಿ ವರದಿಗಳನ್ನು ತರಿಸಿಕೊಂಡು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕೂಡಲೇ ಒಂದು ವ್ಯವಸ್ಥಿತ ರೀತಿಯಲ್ಲಿ ಕೆರೆಗಳ ಮತ್ತು ನಾಲೆಗಳ ಕೆಲಸಗಳು ಜರೂರಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಟ್ಟು ಸಣ್ಣಪುಟ್ಟ ತೊಡಕುಗಳನ್ನು ಪರಿಹಾರ ಮಾಡುತ್ತಾರೆಂದು ನಂಬಿದ್ದೇನೆ. ಸಾಧ್ಯವಾದಷ್ಟು ಮಟ್ಟಿಗೆ ಜೀರ್ಣೋದ್ಧಾರದ ಕೆಲಸಗಳನ್ನು ಉದಾರವಾಗಿ ಸರ್ಕಾರದವರೇನೋ ಮಾಡುತ್ತಿದ್ದಾರೆ. ಆದರೆ ಒಂದೊಂದು ವೇಳೆ ಒಂದು ಕೆಲಸ ಆಗಬೇಕೆ ಅಥವಾ ಬೇಡವೇ ಎಂಬ ವಿಚಾರದಲ್ಲಿ ಸಂಬಂಧಪಟ್ಟ ರೈತರ ಅಭಿಪ್ರಾಯವನ್ನು ಸರಿಯಾಗಿ ಪಡೆಯದೆ, ಪರಿಸ್ಥಿತಿಯು ಪಕ್ಷ ರಾಜಕೀಯ ಪ್ರಭಾವಕ್ಕೊಳಗಾಗಿ, ಅಧಿಕಾರಿಗಳಲ್ಲ ಕಲವರು ಹೋಗಿ ಒತ್ತಾಯಮಾಡಿದುದರ ಪರಿಣಾಮವಾಗಿ ಮಾರ್ಗ ಬದಲಾವಣೆ ಮಾಡಿ ಕೆಲಸ ಮಾಡುತ್ತಾರೆ. ಇದರಿಂದ ಡೆಪ್ಯುಟೀ ಕಮಿಷನರುಗಳ ಹತ್ತಿರ ದೂರುಗಳು ಹೋಗಿ, ಕೋರ್ಟುಗಳವರೆಗೂ ಹೋಗಿ ಅನೇಕ ತೊಡಕುಗಳು ಬರುತ್ತವೆ. ಇದನ್ನು ತಡೆಗಟ್ಟಬೇಕಾದರೆ, ನಾನು ಈಗಾಗಲೇ ಹೇಳಿದಂತೆ ಒಂದು ಕ್ರಮವನ್ನನುಸರಿಸಿ ನಿರ್ದಿಷ್ಟವಾಗಿ ಮುಂದುವರಿಯಬೇಕು. ಯಾರು ಮುಂದೆ ಹೋಗಿ ಕೂಗುತ್ತಾರೋ, ಒತ್ತಾಯಪಡಿಸುತ್ತಾರೋ, ಅದನ್ನು ಮಾಡೋಣ, ಎಂಬ ಮನೋಭಾವವಿರಬಾರದು. ಆ ಪಕ್ಷ ಈ ಪಕ್ಷ ಎಂಬ ಯಾವ ಕಾರಣವನ್ನೂ ಇಟ್ಟುಕೊಳ್ಳದೆ, ರೈತರ ಹಿತವನ್ನು ಮಾತ್ರ ಗುರಿಯಾಗಿಟ್ಟುಕೊಂಡು ಕೆಲಸಮಾಡಿದರೆ ಎಲ್ಲವೂ ಸರಿಹೋಗುತ್ತದೆಂದು ಹೇಳಿ ಮುಗಿಸುತ್ತೇನೆ.

ರೈತರು ಎಷ್ಟೋಸಲ ಸಣ್ಣ ಪುಟ್ಟ ಕೆಲಸಗಳಿಗಾಗಿ ಅರ್ಜಿ ಕೊಟ್ಟು ಅವರು ನೂರಾರು ರೂಪಾಯಿಗಳನ್ನು ಖರ್ಚುಮಾಡಿಕೊಂಡಿದ್ದರೂ ಆ ಕೆಲಸಗಳಾಗಿರುವುದಿಲ್ಲ. ಪಟ್ಟಿಯಲ್ಲಿ ಅವರ ಹೆಸರುಗಳಿದ್ದರೂ ಅವರಿಗೆ ಉಪಯೋಗವಿಲ್ಲದಂತಾಗಿದೆ. ಅಂದರೆ ಕೆಲಸಗಳು ಆ ಪಟ್ಟಿಯ ಪ್ರಕಾರ ನಡೆಯುತ್ತಿಲ್ಲ. ಅದಕ್ಕಾಗಿ ತಾವು ಒಂದು ಸರ್ಕ್ಯುಲರನ್ನು ಕೊಟ್ಟು ಅವರು ಅಪ್ರೂವ್ಡ್ ಪಟ್ಟಿಯ ಪ್ರಕಾರವೇ ಕೆಲಸ ಮಾಡುವಂತೆ ಮಾಡಬೇಕು. ಕೆಲಸಗಳು ಬಹಳ ನಿಧಾನವಾಗಿ ಆಗುತ್ತಿವೆ. ಇದಕ್ಕೆ ಯಾರು ಕಾರಣ ಎಂಬುದನ್ನು ಸರ್ಕಾರದವರು ವಿಚಾರಿಸಬೇಕು, ಅವುಗಳನ್ನೆಲ್ಲಾ ಪರಿಶೀಲನೆಮಾಡಿ ಈ ಇರಿಗೇಷನ್ ಬಾಬಿನಲ್ಲಿರತಕ್ಕ ರೋಗ ರುಜಿನಗಳನ್ನು ತಪ್ಪಿಸಬೇಕು. ಇದಕ್ಕಾಗಿ ಒಂದು ಸಮಿತಿಯ ರಿಪೋರ್ಟು ಅವಶ್ಯಕ.

*ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಈ ಜಿ. ಎಂ. ಎಫ್. ಯೋಜನೆಯ ಬಗ್ಗೆ ಹಲವಾರು ಪ್ರದೇಶಗಳಿಗೆ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೆ ಎಲ್ಲಿ ಹಲವಾರು ನಾಲೆಗಳಿವೆಯೋ, ಮತ್ತು ಎಲ್ಲಿ ಭತ್ತದ ಬೆಳೆಯನ್ನು ಚೆನ್ನಾಗಿ ಬೆಳೆಯಲು ಅವಕಾಶವಿದೆಯೋ ಅಂಥ ಕಡೆಗಳಿಗೆ ಅವರು ಸಾಕಷ್ಟು ನಿಗಾ ಕೊಟ್ಟಿಲ್ಲವೆಂಬ ಅಂಶವನ್ನು ನಾನೀಗ ಸರ್ಕಾರದವರ ಗಮನಕ್ಕೆ ತರಬೇಕಾಗಿದೆ.

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಸರ್ವಮಾನ್ಯ ಮಹದೇವಪುರವೆಂಬ ಒಂದು ಗ್ರಾಮವಿದೆ. ಅಲ್ಲಿ ಒಂದು ಬಹಳ ಪುರಾತನ ನಾಲೆ ಇದೆ. ಬಹುಶಃ ಈ ದೇಶದಲ್ಲಿ ಸರ್ಕಾರ ಒಂದು ಸುವ್ಯವಸ್ಥೆಗೆ ಬರುವುದಕ್ಕಿಂತಲೂ ಮೊದಲೇ ಆ ನಾಲೆಯನ್ನು ತೆಗೆದಿರುವಂತೆ ತೋರುತ್ತದೆ. ಆದರೆ ಈ ಮೈಸೂರು ಆಗ ಇಂದು ಇರುವ ಸ್ಥಿತಿಯಲ್ಲಿತ್ತೋ ಇರಲಿಲ್ಲವೋ ಅದು ತಿಳಿಯದು. ಆ ಗ್ರಾಮ ಜಹಗೀರು ಗ್ರಾಮ. ಆ ಜಹಗೀರುದಾರರು ಅದನ್ನು ಬೇರೆಯವರಿಗೆ ಮಾರಿಕೊಂಡುಬಿಟ್ಟಿದ್ದಾರೆ. ಈಗ ಅಲ್ಲಿ ದೇವಾದಾಯ, ಧರ್ಮದಾಯ ಮತ್ತು ಬ್ರಹ್ಮಾದಾಯ ಎಂಬ ಮೂರು ತರದ ವೃತ್ತಿದಾರರಿದ್ದಾರೆ. ಆದರೆ ಇಂದು ಆ ನಾಲೆಯೆಲ್ಲಾ ಪೂರ್ತಿಯಾಗಿ ಹೂತು ಹೋಗಿದೆ. ಆ ಗ್ರಾಮ ಕಾವೇರಿ ನದಿಯ ದಡದಲ್ಲಿದೆ. ರೈತರು ಗುತ್ತಿಗೆ ಕೊಟ್ಟುಕೊಂಡು ಅಲ್ಲಿರತಕ್ಕ ಜಮೀನುಗಳನ್ನು ವ್ಯವಸಾಯಮಾಡುತ್ತಿದ್ದಾರೆ. ಆ ನಾಲೆಯನ್ನು ಸರಿಪಡಿಸಿದರೆ ಸುಮಾರು ಅಲ್ಲಿ ಎಕರೆಗೆ 25—30 ಪಲ್ಲ ಭತ್ತ ಬೆಳೆಯಬಹುದು. ಆ ನಾಲೆ ರಿಪೇರಿಮಾಡಿಕೊಡಿ ಎಂದು ಸರ್ಕಾರದವರನ್ನು ಕೇಳಿದರೆ, ಅವರು ನಾವು ಮಾಡಿಸುವುದಕ್ಕಾಗುವುದಿಲ್ಲ, ಅದು ಸರ್ವಮಾನ್ಯ ಗ್ರಾಮ, ನೀವು ವೃತ್ತಿದಾರರಿಂದ ಅದನ್ನು ಸರಿಮಾಡಿಸಿಕೊಳ್ಳಬೇಕೆಂದು ಹೇಳುತ್ತಾರೆ. ವೃತ್ತಿದಾರರನ್ನು ಕೇಳಿದರೆ ಅವರು ಒಬ್ಬರನ್ನೊಬ್ಬರು ತೋರಿಸುತ್ತಿದ್ದಾರೆ. ಅಲ್ಲಿ ಈಗ ಸುಮಾರು 100 ಜನ ವೃತ್ತಿದಾರರಿದ್ದಾರೆ. ಹೀಗೆ ಒಂದು ಅನಾಯಕತ್ವದಿಂದ ಈ ದಿವಸ ಅಲ್ಲಿ ಸುಮಾರು ಒಳ್ಳೆಯ ಫಲವತ್ತಾದ 150 ಎಕರೆ ಜಮೀನು ಪಾಳುಬಿದ್ದಿದೆ. ಸರ್ಕಾರದವರು ಮನಸ್ಸುಮಾಡಿದರೆ ಅದನ್ನು ರಿಪೇರಿಮಾಡಿಸುವುದಕ್ಕೆ ಈಗಲೂ ಅವಕಾಶವಿದೆ. ವೃತ್ತಿದಾರರು ಅದನ್ನು ಸರಿಪಡಿಸದೇ ಇದ್ದರೆ ಸರ್ಕಾರ ಅದನ್ನು ಮುಟ್ಟುಗೋಲುಹಾಕಿಕೊಂಡು, ನಾಲೆ ರಿಪೇರಿಮಾಡಿಸಿದರೆ ಭತ್ತದ ಬೆಳೆಗೆ ತುಂಬಾ ಅನುಕೂಲವಾಗುತ್ತದೆ. ಈ ವಿಚಾರವನ್ನು ಸರ್ಕಾರದವರ ಗಮನಕ್ಕೆ ಅನೇಕ ವರ್ಷಗಳಿಂದಲೂ ತರುತ್ತಲೇ ಇದ್ದೇನೆ. ಆದರೆ ಅವರು ಇನ್ನೂ ಇದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ತಾವು ಹೇಳಬಹುದು ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ನಾಲೆಗಳು ಜಾಸ್ತಿ ಇವೆ, ಜನರು ಸುಖವಾಗಿದ್ದಾರೆ ಎಂದು. ಆದರೆ ಅಲ್ಲಿ ಎಷ್ಟೋ ಗ್ರಾಮಗಳಲ್ಲಿ ಜನರಿಗೆ ಕುಡಿಯುವುದಕ್ಕೆ ನೀರೇ ಇಲ್ಲ. ಅಂಥ ಕಡೆ ಜನರ ತೊಂದರೆಯನ್ನು ಹೇಳತೀರದಾಗಿದೆ. ಇಂಥ ತೊಂದರೆಗೀಡಾಗಿರುವಂಥ ಗ್ರಾಮಗಳು ಅಲ್ಲಿ ಅನೇಕವಾಗಿವೆ. ಅವು ನಾಗಮಂಗಲ ತಾಲ್ಲೂಕಿಗಿಂತಲೂ ಬಹಳ ಕೀಳಾಗಿವೆ. ಇಂಥ 10-15 ಗ್ರಾಮಗಳು ಅಲ್ಲಿ ಇವೆ. ಆ ಗ್ರಾಮಗಳೆಲ್ಲಾ ವಿಶ್ವೇಶ್ವರಯ್ಯ ನಾಲೆಯ ದಡದಲ್ಲಿದ್ದರೂ ಆ ಜನರಿಗೆ ನೀರಿನ ಸೌಕರ್ಯವಿಲ್ಲ. ಅವರಿಗೆ ಒಂದು ಕಾಲುವೆಯನ್ನು ಮಾಡಿಸಿಕೊಟ್ಟಿಲ್ಲ. ಈ ಮೊದಲೇ ಅಲ್ಲಿ ಒಂದಾವರ್ತಿ ಸರ್ವೆ ಪರಿಶೀಲನೆಗಳಾಗಿ, ಅಂದಾಜ ಕೂಡ ಈ ಬಗ್ಗೆ ತಯಾರಾಗಿದ್ದವು. ಏತಕ್ಕೋ ಏನೋ ಅದನ್ನು ಇತ್ತೀಚೆಗೆ ಸರ್ಕಾರದವರು ಕೈಬಿಟ್ಟು ಬಿಟ್ಟಿದ್ದಾರೆ. ಸರ್ಕಾರದವರು ಹೇಳಬಹುದು, ಈಗ ಹಾಲೀ ವಿಶ್ವೇಶ್ವರಯ್ಯ ನಾಲೆಯ ಆಸರೆಯಲ್ಲಿರತಕ್ಕ ಜಮೀನುಗಳಿಗೆ ನೀರು ಸಾಕಾಗುತ್ತಿಲ್ಲ. ಆದಕಾರಣ ಇನ್ನು ಹೊಸದಾಗಿ ಅಚ್ಚುಕಟ್ಟುಮಾಡಿ, ಆ ಜಮೀನುಗಳಿಗೆ ನೀರನ್ನು ಸರಬರಾಯಿಮಾಡುವುದಕ್ಕಾಗುವುದಿಲ್ಲ ಎಂದು. ಆದರೆ ಈ ನಾಲೆಗೆ ಸುಮಾರು ಒಂದು ಒಂದೂವರೆ ಮೈಲಿ ದೂರದಲ್ಲೇ ನಾಲ್ಕಾರು ಕೆರೆಗಳಿವೆ. ಅಲ್ಲಿ ಮಳೆಯಾಗದೆ, ಕೆರೆ ತುಂಬುತ್ತಿಲ್ಲ. ವರ್ಷದಲ್ಲಿ ಒಂದು ಬೆಳೆ ಕೂಡ ಆಗುತ್ತಿಲ್ಲ.

10 A. M.

ಈ ಮೂರು ಕೆರೆಗಳಿಗಾದರೂ ನೀರು ಒದಗಿಸಿ, ಮಳೆ ತುಂಬಿದಾಗ ಬೇಕಾಗಿಲ್ಲ: ಮಳೆಯಿಲ್ಲದೆ ಫಸಲಿಲ್ಲದಿರುವ ಸಂದರ್ಭದಲ್ಲಿ ನೀರನ್ನೊದಗಿಸುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಮಾತ್ರ ನಾನು ಕೇಳುತ್ತೇನೆ. ಇದಕ್ಕೆ ಬೇಕಾದರೆ ನಾವು ಕಂದಾಯ, ಕಂಟ್ರಿಬ್ಯೂಷನ್ ಏನನ್ನಾದರೂ ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ರೈತರೇ ಸರ್ಕಾರದವರನ್ನು ಈ ರೀತಿ ಕೇಳಿದಮೇಲೆ, ಸರ್ಕಾರದವರೂ ಇತ್ತೀಚೆಗೆ ಈ ಬಗ್ಗೆ ಒಂದು ಎಸ್ಟಿಮೇಟನ್ನು ಸಹ ತಯಾರುಮಾಡಿಸಿದ್ದಾರೆ. ಕೇವಲ 90 ಸಾವಿರ ರೂಪಾಯಿಗಳು ಆಗುತ್ತವೆ. ಇದನ್ನು ದಯವಿಟ್ಟು ಈ ವರ್ಷವೇ ಕೈಕೊಂಡು ಖಂಡಿತವಾಗಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ರಾಯನಾಲಾ ಮತ್ತು ಅರೆಕೆರೆ left Bank ನಾಲಾಗಳನ್ನಂತು ಶೀಘ್ರವಾಗಿ ಕೈಕೊಳ್ಳಬೇಕೆಂದು ಪ್ರಾರ್ಥಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

(SRI K. V. SHANKARA GOWDA in the Chair).

*ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಅಧ್ಯಕ್ಷರೇ, ದೊಡ್ಡ ದೊಡ್ಡ ರಿಸರ್ವಾಯರ್‌ಗಳನ್ನು ಕಟ್ಟಿಸುವುದು ಎಷ್ಟು ಅವಶ್ಯಕವೋ ಅಷ್ಟೇಮಟ್ಟಿಗೆ ಕೆರೆಗಳನ್ನು ದುರಸ್ತುಮಾಡುವುದೂ ಅವಶ್ಯಕ. ಶ್ರೀಮಾನ್ ಪ್ರಭಾಕರ್‌ರವರು ಒಂದು ವಿಷಯವನ್ನು ತಮ್ಮ ಭಾಷಣದಲ್ಲಿ ಸೂಚಿಸಿದ್ದಾರೆ. ಅದು ಬಹಳ ಗಮನಾರ್ಹವಾದದ್ದು. ಅವರು ಹೇಳಿದರು, ಇವೊತ್ತು ಯಾರು ಸ್ವಲ್ಪ ಪ್ರಭಾವಶಾಲಿಗಳಾಗಿರುತ್ತಾರೋ ಅವರು ಬಂದು ಹೇಳಿತೆಂದರೆ ಎಷ್ಟೇ ಮುಖ್ಯವಾದ ಬೇರೆ ಜೀರ್ಣೋದ್ವಾರದ ಕೆಲಸವಿದ್ದರೂ ಅದನ್ನು ತೆಗೆದುಕೊಳ್ಳದೆ ಅವರಿಗೆ ಬೇಕಾದ್ದನ್ನು ಜೀರ್ಣೋದ್ಧಾರಮಾಡಿಸಿಕೊಡುವ ಸಂದರ್ಭಗಳಿವೆ, ಈ ಬಗ್ಗೆ ಒಂದು ನಿರ್ದಿಷ್ಟವಾದ ಪಟ್ಟಿಯಿಲ್ಲವೆಂದು ಆಕ್ಷೇಪಿಸಿದರು.

ಈಗ ಏನಾಗಿದೆಯೆಂದರೆ, ಈಚೆಗೆ 1950ನೆಯ ಇಸವಿಯಲ್ಲಿ ತಾವೊಂದು ಸ್ಕೀಮನ್ನು ಮಂಜೂರುಮಾಡಿದ್ದೀರಿ. ಅದು ಯಾವುದೆಂದರೆ, A Scheme for the accelerated restoration of minor tanks ಎಂಬುದು. ಆ ಸ್ಕೀಮಿನಲ್ಲಿ, 100 ರೂಪಾಯಿಗೆ ಮೇಲ್ಪಟ್ಟು ಕಂದಾಯ ಕೊಡತಕ್ಕ ಕೆರೆಗಳು ಸುಮಾರು 5,000 ಇವೆಯೆಂತಲೂ ಒಂದು ಪಟ್ಟಿ ತಯಾರಾಗಿ, ಆ ಕೆರೆಗಳನ್ನು ವರ್ಷಕ್ಕೆ ಐನೂರರಂತೆ ಮುಖ್ಯವಾಗಿ ರೆಸ್ಟೋರ್ ಮಾಡಬೇಕೆಂದು ಗೊತ್ತುಮಾಡಿಕೊಂಡು, ಅದಕ್ಕೆ ವರ್ಷಕ್ಕೆ 2 ಕೋಟಿ 50 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಮಾಡಿದರು. ಆದರೆ ಏನು ಕಾರಣವೋ ಗೊತ್ತಿಲ್ಲ, ಆ ಬಗ್ಗೆ ಕಾರ್ಯಗಳು ತ್ವರಿತವಾಗಿ ನಡೆಯಲಿಲ್ಲ. ಕ್ರಮೇಣ ಮೈನರ್ ಟ್ಯಾಂಕ್ ರೆಸ್ಟೋರೇಷನ್ ರೇಂಜುಗಳು ಎಂದು ಹೇಳಿ ಮೈನರ್ ಟ್ಯಾಂಕ್‌ಗಳು ಎಲ್ಲಿ ಜಾಸ್ತಿಯಿವೆಯೋ ಅಲ್ಲಿ ಈ ರೀತಿ ರೇಂಜುಗಳನ್ನು ಸ್ಥಾಪನೆಮಾಡಿ, ಅದನ್ನು ಕೈಕೊಳ್ಳಬೇಕೆಂದು ಒಂದು ಯೋಜನೆ ಮಾಡಿತ್ತು. ಕಾರಣಾಂತರದಿಂದ ಆ ಯೋಜನೆ ಬಿಟ್ಟುಹೋಯಿತು. ಈಚೆಗೇನೋ ರೆಸ್ಟೋರ್‌ಮಾಡುವ ಬಗ್ಗೆ ಬಹಳ ಹೆಚ್ಚಿಗೆ ಹಣ ಖರ್ಚಾಗುತ್ತಿದೆ. ಮೊದಲು ಆಗುತ್ತಿದ್ದುದಕ್ಕಿಂತಲೂ ಹೆಚ್ಚಿಗೆಯೇ ಆಗುತ್ತಿದೆ, ನಿಜ. ಆದರೆ ನಿರ್ದಿಷ್ಟವಾಗಿ ಒಂದು ಕಾರ್ಯ ಪಟ್ಟಿಯ ಪ್ರಕಾರ ಯಾವುದೂ ಕೆಲಸವಾಗುತ್ತಿಲ್ಲ. ಅದ್ದರಿಂದ ಒಂದು ಪಟ್ಟಿ ತಯಾರಿಸಿಕೊಂಡು ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರು, ಎಗ್ಜಿಕ್ಯೂಟಿವ್ ಎಂಜಿನಿಯರು ಮತ್ತು ಆಯಾ ಡಿಸ್ಟ್ರಿಕ್ಟಿನ ಶಾಸನಸಭಾ ಸದಸ್ಯರುಗಳನ್ನೊಳಗೊಂಡ ಒಂದು ಕಮಿಟಿ ಮಾಡಿ ಅವರು ತಮ್ಮ ತಮ್ಮ ಡಿಸ್ಟ್ರಿಕ್ಟಿನಲ್ಲಿ ಪ್ರೈಯಾರಿಟಿ ಪ್ರಕಾರ ಯಾವ ಯಾವ ಕೆಲಸಗಳನ್ನು ಕೈಕೊಳ್ಳಬೇಕೆಂದು ಒಂದು Programme ಮಾಡಿಕೊಳ್ಳುವುದು ಒಳ್ಳೆಯದು. ಆ ಸ್ಕೀಮು ತಮಗೆ ಒಪ್ಪಿಗೆಯಾದರೆ, ಅದರಂತೆ ತಾವು ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ.

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಅಧ್ಯಕ್ಷರೇ, ಮೈಸೂರು ಸಂಸ್ಥಾನದಲ್ಲಿ ನೀರಾವರಿ ಕಾಂಗಾರಿಗಳಿಗಾಗಿ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಎರಡೆರಡು ತಾಲ್ಲೂಕಿಗೆ ಒಬ್ಬೊಬ್ಬ ಅಸಿಸ್ಟೆಂಟ್ ಇಂಜಿನಿಯರನ್ನು ಇಡುವುದರ ಮೂಲಕ ನೀರಾವರಿಗಾಗಿ ಬಹಳ ದಿವಸಗಳಿಂದ ಇದ್ದ ತೊಂದರೆಯನ್ನು ತಪ್ಪಿಸಿ ತುಂಬ ಸೌಕರ್ಯವನ್ನು ಮಾಡಿಕೊಡುತ್ತಾ ಬಂದಿರುವುದು ತುಂಬ ಶ್ಲಾಘನೀಯವಾಗಿದೆ. ಈ ಸಂದರ್ಭದಲ್ಲಿ ತಿಪ್ಪಗೊಂಡನಹಳ್ಳಿಯಿಂದ ರಾಮನಗರದವರೆಗೂ ಹೋಗುವ wasteweirಗೆ ತುಪ್ಪನಹಳ್ಳಿ ಬಳಿ ಒಂದು ಅಣೆಕಟ್ಟು ಹಾಕಿ ಅನುಕೂಲ ಮಾಡಿಕೊಡಬೇಕೆಂದು ಆ ಪ್ರಾಂತ್ಯದ ಜನರ ಬೇಡಿಕೆ ಸರ್ಕಾರದವರ ಮುಂದಿದೆ. ಈ ಬಗ್ಗೆ ಎಸ್ಟಿಮೇಟ್ ತಯಾರಾಗಿ ಸರ್ಕಾರದ ಮಂಜೂರಾತಿಗೆ ಬಂದು ಸರ್ಕಾರದಲ್ಲಿ ಸಾವಧಾನವಾಗಿದೆ. ಈ ಭಾಗದಲ್ಲಿನ ಜನರಿಗೆ ಸದ್ಯಕ್ಕೆ ಖುಷ್ಕಿಯಿಂದಲೇ ಜೀವನ ಮಾಡಬೇಕಾದ ಗತಿಯಿದ್ದು ಬಹಳ ಕಷ್ಟದೆಶೆಯಲ್ಲಿದ್ದಾರೆ. ಆದ್ದರಿಂದ ಈ ಕಷ್ಟ ನಿವಾರಣೆಯ ಬಗ್ಗೆ ಸರ್ಕಾರದವರು ಕಾರ್ಯಕ್ರಮ ಕೈಕೊಳ್ಳುವುದಲ್ಲದೆ, ಮಾಗಡಿ ತಾಲ್ಲೂಕು ಏರಿಗೇಹಳ್ಳಿಯ ಹತ್ತಿರ ಒಂದು ಅಣೆಕಟ್ಟು ಹಾಕುವುದರಿಂದ ಮಾಡಬಾಳು ಪೂರ್ತ ಇರುವ ಸುಮಾರು 20-30 ಗ್ರಾಮಗಳ ಬರೀ ಖುಷ್ಕಿ ಜಮೀನುಗಳನ್ನಿಟ್ಟುಕೊಂಡು ಕಷ್ಟ ಜೀವನ ನಡೆಸುತ್ತಿರುವವರಿಗೆ ಅನುಕೂಲಮಾಡಿಕೊಟ್ಟಂತಾಗುತ್ತದೆಂದು ಹೇಳುತ್ತೇನೆ.

ಮೊದಲಿನಿಂದಲೂ ತಾಲ್ಲೂಕ್ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಒಂದೊಂದು ಕಮಿಟಿಯಿದ್ದು ಕೆರೆಗಳ ವ್ಯವಸ್ಥೆ ಬಗ್ಗೆ ಏರ್ಪಾಡಿತ್ತು. ತಾಲ್ಲೂಕಿನಲ್ಲಿ ಅಮಲ್ದಾರರ ಅಧ್ಯಕ್ಷತೆಯಲ್ಲಿ, ಡಿಸ್ಟ್ರಿಕ್ಟಿನಲ್ಲಿ ಡೆಪ್ಯುಟಿಕಮಿಷನರ ಅಧ್ಯಕ್ಷತೆಯಲ್ಲಿ ಈ ಕಮಿಟಿಗಳು ಆಗಾಗ್ಗೆ ಸಭೆ ಸೇರಿ ಸರ್ಕಾರಕ್ಕೆ ವರದಿ ಕಳುಹಿಸಿಕೊಟ್ಟು ತನ್ಮೂಲಕ ಸಣ್ಣ ಕೆಲಸವಾಗಲಿ, ದೊಡ್ಡ ಕೆಲಸವಾಗಲಿ ಬೇಗ ಬೇಗ ಮಾಡಿಸಿಕೊಟ್ಟು ನೀರಾವರಿ ಅನುಕೂಲಮಾಡಿಕೊಡುತ್ತಿದ್ದರು. ಈಗ ಒಂದು ತೂಬು ಹೋದರೂ ಅದನ್ನು ಸರಿಮಾಡಿಸುವುದಕ್ಕೆ ನಿಧಾನವಾಗಿ ಹಳ್ಳಿಯಜನರಿಗೆ ಫಸಲು ಸಿಕ್ಕುವುದೇ ಕಷ್ಟವಾಗಿದೆ. ಆದ್ದರಿಂದ ಸರ್ಕಾರದವರು ನೀರಾವರಿ ಯೋಜನೆಯ ಸಂದರ್ಭದಲ್ಲಿ ಮಾನ್ಯ ಸಿದ್ದಪ್ಪನವರು ಹೇಳಿದಹಾಗೆ ಒಂದು ವ್ಯವಸ್ಥಿತವಾದ ಕಮಿಟಿ ಮಾಡಿ ನೀರಾವರಿ ಸೌಕರ್ಯಗಳನ್ನು ಬೇಗ ಬೇಗ ಮಾಡಿಕೊಟ್ಟರೆ, ಸರ್ಕಾರದವರು ಈಗ 8-10 ವರ್ಷಗಳಿಂದಲೂ ಆಹಾರಧಾನ್ಯಗಳಿಗಾಗಿ ಖರ್ಚುಮಾಡುತ್ತಿರುವ ಒಂದು ಕೋಟಿ ರೂಪಾಯಿಗಳು ಉಳಿದು ದೇಶದಲ್ಲಿ ಸುಭಿಕ್ಷವುಂಟಾಗಿ ಹತೋಟಿಯ ತೊಂದರೆಯಿಂದ ಜನರನ್ನು ಪಾರುಗೊಳಿಸಲಿಕ್ಕೆ ಸಾಧ್ಯವಾಗುತ್ತದೆ. ದೇಶದಲ್ಲಿ ಬಹಳ ಪ್ರಾಮುಖ್ಯವಾದ ವ್ಯವಸ್ಥೆಯೆಂದರೆ ನೀರಾವರಿ ಸೌಕರ್ಯವೆಂಬುದನ್ನು ತಾವು ತಿಳಿಯಬೇಕು. ಇದನ್ನು ಮಾಡಿಕೊಟ್ಟರೆ ಈಗ ಸದಸ್ಯರು ಕೇಳುತ್ತಿರತಕ್ಕ ಅನೇಕ ಬೇಡಿಕೆಗಳೇ ಉದ್ಭವಿಸುವುದಿಲ್ಲ. ಸರ್ಕಾರದವರಿಗೆ ವರ್ಷೇ ವರ್ಷೇ ಆಗುತ್ತಿರುವ ಆಹಾರದ ಹತೋಟಿ ಖರ್ಚು ನಿಲ್ಲುತ್ತದೆ. ಸರ್ಕಾರದವರಿಗೆ ನೀರಾವರಿ

(ಶ್ರೀ ಎಸ್. ಸಿದ್ದಪ್ಪ)

ಯೋಜನೆಗಳೇ ಒಂದು ಆಸ್ತಿಯಾಗಿ ಪರಿಣಮಿಸುತ್ತವೆ. ಈ ಆಸ್ತಿಯನ್ನು ರೂಢಿಸುವುದು ಪ್ರಭುತ್ವದವರ ಕರ್ತವ್ಯವೆಂಬುದನ್ನು ನಾನು ಹೇಳಬೇಕಾಗಿಲ್ಲ. ಹೀಗಿರುವಲ್ಲಿ ನಮ್ಮ ಮಾಗಡಿ ತಾಲ್ಲೂಕಿನಲ್ಲಿರುವ 220 ಕೆರೆಗಳನ್ನೇ ನೋಡುವುದಾದರೆ, ಅವುಗಳಲ್ಲಿ 120 ಕೆರೆಗಳು ದುರಸ್ತಾಗಿ ಇನ್ನೂ 100 ಕೆರೆಗಳು ತೂಬು, ಕೋಡಿ ಮುಂತಾದುವು ಕೆಟ್ಟು ನಿಂತಿವೆ. ನಮ್ಮ ಮಾಗಡಿ ತಾಲ್ಲೂಕಿನಲ್ಲಿ ಶ್ರೀಮಾನ್ ಮರಿಯಪ್ಪನವರು ಮಂತ್ರಿಗಳಾಗಿದ್ದಾಗ ಮೆಷಿನರಿಗಳ ಸಹಾಯದಿಂದ ಮೂರೇ ತಿಂಗಳಿನಲ್ಲಿ ದುರಸ್ತು ಮಾಡಿಸಿಕೊಟ್ಟ ಕೆರೆ ಈಗ ಎಷ್ಟು ಫಲದಾಯಕವಾಗಿದೆಯೆಂಬುದನ್ನು ನೀವೇ ನೋಡಿ. ಅಲ್ಲಿ ಒಂದು ಕಾಳು ಬತ್ತವೂ ಆಗದಿದ್ದಂಥ ಸಂದರ್ಭದಲ್ಲಿ 280 ಎಕರೆಗಳಿಗೆ ನೀರಿನ ಆಸರೆ ಸಿಕ್ಕಿ ಆ ಸುತ್ತ ಮುತ್ತಲ ಪ್ರದೇಶ ಇಂದು ಸುಭಿಕ್ಷದಿಂದಿದೆ. ಹೀಗೆ ಮೆಷಿನರಿಗಳ ಸಹಾಯದಿಂದ, ಎರಡು ಮೂರು ವರ್ಷಗಳಲ್ಲೂ ಆಗದಂಥ ಕೆಲಸಗಳು ಕೇವಲ 6-7 ತಿಂಗಳುಗಳಲ್ಲಾಗಿ ತನ್ಮೂಲಕ ರೈತರಿಗೆ ಸುಖ ಸಂಪತ್ತು ದೊರಕುವಂತಾಗಿದೆ. ದೇಶದಲ್ಲಿ ಇಂಥ ಅನುಕೂಲತೆಗಳನ್ನು ಹೆಚ್ಚು ಹೆಚ್ಚಾಗಿ ಮಾಡಿಕೊಡಬೇಕಾದದ್ದು ಅವಶ್ಯಕ.

ಎಕ್ಕಲು ಮಣ್ಣನ್ನು ತೆಗೆಯುವ ಕಡೆಗೂ ತಾವು ಹೆಚ್ಚು ಗಮನ ಕೊಡಬೇಕು. ಏರಿಗಳನ್ನು ಎತ್ತರಿಸಿದಮಾತ್ರಕ್ಕೇ ಕೆರೆಗಳನ್ನು ದುರಸ್ತುಮಾಡಿಸಿದಂತಾಗುವುದಿಲ್ಲ; ಮತ್ತೆ 6-8 ತಿಂಗಳಲ್ಲೇ ಎಕ್ಕಲು ತುಂಬಿಕೊಂಡು ಏರಿ ಕೊಚ್ಚಿ ಹೋಗುತ್ತದೆ. ಇದುವರೆಗೂ ಒಂದುಕೋಟಿ ರೂಪಾಯಿಗಳನ್ನು ಬುಲ್‌ಡೋಸರುಗಳಿಗೂ ಟ್ರಾಕ್ಟರುಗಳಿಗೂ ಹಾಕಿ ಎಕ್ಕಲನ್ನು ತೆಗೆಯಿಸಿ ದೇಶಕ್ಕೆ ಸೌಲಭ್ಯ ಇನ್ನೂ ದೊರಕಿಸಿಕೊಡಲಾಗಿಲ್ಲ. ಇನ್ನಾದರೂ ಬುಲ್‌ಡೋಸರುಗಳ ಸಹಾಯದಿಂದ ಬೇಗ ಬೇಗ ಎಕ್ಕಲು ತೆಗೆಯಿಸಲಿಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಇಷ್ಟನ್ನು ಮಾತ್ರ ಅರಿಕೆಮಾಡಿಕೊಂಡು, ಸರ್ಕಾರದವರು ನೀರಾವರಿ ಯೋಜನೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಮಾನ್ಯ ಅಧ್ಯಕ್ಷರೆ, ಕೆರೆಗಳ ವಿಚಾರದಲ್ಲಿ ಮಾತನಾಡಬೇಕೆಂದರೆ, ಚಿತ್ರದುರ್ಗ ಜಿಲ್ಲೆಯಲ್ಲಿ, ಅದರಲ್ಲಿಯೂ ದಾವಣಗೆರೆ ತಾಲ್ಲೂಕಿನಲ್ಲಿ ಕೆರೆಗಳ ಅನುಕೂಲ ಬಹಳಕಡಮೆ. ಇತರ ಜಿಲ್ಲೆಗಳಿಗೆ ಹೋಲಿಸಿದರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಕೆರೆಗಳು ಇಲ್ಲವೇ ಇಲ್ಲ ಎಂದು ಹೇಳಬಹುದು. ಇರುವ ಕೆಲವು ಕೆರೆಗಳೂ ಕೂಡ ಹೂಳುಬಿದ್ದು, ನಾಲೆಗಳು ಕೆಟ್ಟುಹೋಗಿ, ಆ ಕೆರೆಗಳ ಕೆಳಗಿನ ಜಮೀನುಗಳಲ್ಲಿ ಬೆಳೆಯಾಗದೇಯಿದ್ದರೂ ಸರ್ಕಾರದವರು ಆ ರೈತರಿಂದ ಕಂದಾಯ ವಸೂಲುಮಾಡುತ್ತಿದ್ದಾರೆ. ಇದನ್ನು ಸಮರ್ಥಿಸಲು ಬೇಕಾದರೆ ನಾನು ಲೆಕ್ಕವನ್ನು ಶೇಖರಿಸಿಕೊಡುತ್ತೇನೆ. ಹಿಂದೆ ಒಂದು ಯೋಜನೆಯನ್ನು ಮಾಡಿದ್ದರೆಂದು ಕೇಳಿದ್ದೇನೆ. ಕೃಷ್ಣರಾಜಸಾಗರದ ಕಾಲುವೆಯನ್ನು ನಮ್ಮ ದಾವಣಗೆರೆ ತಾಲ್ಲೂಕಿಗೆ ತಂದು ನೀರು ಹರಿಸುವ ಯೋಜನೆಮಾಡುತ್ತಿದ್ದಾರೆಂದು ವರ್ತಮಾನವಿದೆ.

ಶ್ರೀ ಎಲ್. ಸಿದ್ದಪ್ಪ.—ಲಕ್ಕವಳ್ಳಿ ಜಲಾಶಯದಿಂದ, ಕೃಷ್ಣರಾಜಸಾಗರದಿಂದಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇರಬೇಕು. ಅಂತೂ ಬಹಳ ದಿವಸಗಳ ಹಿಂದೆ ಈ ಸಮಾಚಾರವನ್ನು ಕೇಳಿದ್ದೆ. ಆಗ ನಾನು ಇಲ್ಲಿರಲಿಲ್ಲ. ಆ ಯೋಜನೆ ಯಾವಾಗ ಕಾರ್ಯರೂಪಕ್ಕೆ ಬರುತ್ತದೆಯೋ ಗೊತ್ತಿಲ್ಲ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಒಂದು ಶತಮಾನವಾಗಬಹುದು! ನೂರು ವರ್ಷ!

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ದಾವಣಗೆರೆ ತಾಲ್ಲೂಕು ಸರಗನಹಳ್ಳಿ ಕೆರೆ ಹೂಳು ತುಂಬಿಕೊಂಡಿದೆ, ಹೂಳು ತೆಗೆಸಿಲ್ಲ, ಇದುವರೆಗೂ ಬಹಳ ಕಾಲದಿಂದಿದ್ದ ತೂಬನ್ನೂ ಮುಚ್ಚಿದ್ದಾರೆ, ಬೇರೆ ಕಡೆ ತೂಬನ್ನು ಬಿಡಲಾಯಿಸಿದ್ದಾರೆ. ಇದನ್ನು ತೆಗೆಯದೇಯಿದ್ದರೆ ಪ್ರಯೋಜನವಾಗುವುದಿಲ್ಲ. ರೈತರಿಗೆ ಕಂದಾಯ ಹಾಕಿದರೂ ಕೊಡಲು ಸಿದ್ಧವಾಗಿದ್ದಾರೆ. ಈ ಕೆರೆಯಿಂದ ಎಷ್ಟೋ ಜನರ ಜೀವನವಾಗಬೇಕು, ಸರಿಪಡಿಸಿ ಎಂದು ಎಷ್ಟೋ ಅರ್ಜಿಗಳು ಬಂದರೂ ಅದಕ್ಕೆ ಗಮನಕೊಟ್ಟಿಲ್ಲ. ಮುಂದಾದರೂ ಈ ಕೆಲಸ ಮಾಡಿಸಿಕೊಡಬೇಕು. ಕುಂದುವಾಡದ ಕೆರೆ, ಹರತಿ ಕೆರೆಗಳಿವೆ. ಅವೂ ಸರಿಯಾದ ಸ್ಥಿತಿಯಲ್ಲಿಲ್ಲ. ಹೆಬ್ಬಾಳು ಕೆರೆಯ ಕೋಡಿ ಒಡೆದು ಹೋಗಿದೆ. ಅಲ್ಲಿಗೆ ಇಂಜಿನಿಯರು ಬಂದು ನೋಡಿ ಮರಳು ಚೀಲ ಹಾಕಿ ಎಂದು ಹೇಳಿಹೋದರು. ದೊಡ್ಡ ಮಳೆಯೇನಾದರೂ ಬಂದಿದ್ದರೆ ಆ ಊರೇ ಉಳಿಯುತ್ತಿರಲಿಲ್ಲ. ಏನೋ ಭಗವಂತನ ದಯೆಯಿಂದ ಅಷ್ಟು ದೊಡ್ಡ ಮಳೆ ಬರಲಿಲ್ಲ. ಹೀಗೆ ಇರುವ ಸ್ಥಿತಿಯನ್ನು ತಿಳಿಸಿದರೂ ಬೇಗ ಕೆಲಸ ಮಾಡುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದಪ್ಪನವರು ಹೇಳಿದ ಹಾಗೆ, ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪ, ತಿರುಪತಿ ಕೆಲಸಎಂದು ಹೇಳುವ ಹಾಗೆ ಮಾಡಬೇಡಿ. ಒಂದು ಕಡೆ ಒಂದು ಕೆಲಸವನ್ನು ಪ್ರಾರಂಭಮಾಡಿದರೆ ಅದನ್ನು ಜಾಗ್ರತೆ ಪೂರ್ತಿಮಾಡಬೇಕು. ರಸ್ತೆ ಕೆಲಸ ಮಾಡುವಂತೆ ಕೆರೆ ಕೆಲಸವನ್ನು ಪೂರ್ತಿಯಾಗಿ ಮಾಡಬೇಕು. ಅರ್ಧಮಾಡಿ ಬಿಟ್ಟು, ಬೇರೆ ಕೆಲಸ ತೆಗೆದುಕೊಂಡು ಅದನ್ನು ಮಾಡಿ ಪುನಃ ಇಲ್ಲಿಗೆ ಬರುವ ವೇಳೆಗೆ ಮಾಡಿದ ಕೆಲಸ ಹಾಳಾಗಿರುತ್ತದೆ. ಅಲ್ಲದೆ ಹೀಗೆ ಮಾಡಿದರೆ ರೈತರಿಗೂ ಬಹಳ ಕಷ್ಟವಾಗುತ್ತದೆ. ಇಷ್ಟು ಮಾತ್ರ ಸೂಚನೆ ಕೊಟ್ಟು ಅವರು ಮಾತನಾಡಿದುದಕ್ಕೆ ಪ್ರೋತ್ಸಾಹ ಕೊಡುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಮೈನರ್ ಮತ್ತು ಮೇಜರ್ ಕೆರೆಗಳ ದುರಸ್ತಿ ಈಗಿನ ಆಹಾರಾಭಾವ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೂ ರೈತರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೂ ಎಷ್ಟುಮಟ್ಟಿಗೆ ಪ್ರಾಮುಖ್ಯವಾದುದೆಂಬುದನ್ನು ನಾನೇನೂ ಒತ್ತಿ ಹೇಳಬೇಕಾಗಿಲ್ಲ. ಮುಖ್ಯವಾಗಿ, ಮೈನರ್ ಕೆರೆಗಳ ವಿಚಾರವನ್ನು ತೆಗೆದುಕೊಂಡರೆ, ನಮ್ಮ ದೇಶದಲ್ಲಿ ಒಂದು 'ನೆಟ್‌ವರ್ಕ್' ಆಗಿ ಈ ಕೆರೆಗಳಿದ್ದುದರಿಂದ ದೇಶದಲ್ಲಿ ಆಹಾರಾಭಾವವಿರಲಿಲ್ಲ ಮತ್ತು ರೈತರೂ ತಕ್ಕಮಟ್ಟಿಗೆ ವ್ಯವಸಾಯಮಾಡುತ್ತಿದ್ದರು. ಆದರೆ ಈಗ ಅನೇಕ ಕೆರೆಗಳು ನಾದುರಸ್ತಾಗಿವೆ. ವರ್ಷವೆಲ್ಲಾ ರೈತರು ಕೆಲಸಮಾಡಿದರೂ ಮಳೆ ಸಕಾಲಕ್ಕೆ ಬಾರದೇಯಿದ್ದರೆ ಆ ಕೆಲಸವೆಲ್ಲಾ ವ್ಯರ್ಥವಾಗುತ್ತದೆ. ಆದುದರಿಂದ ನೀರಾವರಿ ಅನುಕೂಲ ಕಲ್ಪಿಸುವುದು ಪ್ರಥಮ ಕರ್ತವ್ಯ. ಸಂಸ್ಥಾನದಲ್ಲಿ ಸುಮಾರು 31 ಸಾವಿರ ಕೆರೆಗಳಿವೆಯೆಂದು ಲೆಕ್ಕ ಹೇಳಿದರು. ಇವುಗಳಲ್ಲಿ ಸುಮಾರು 5,800 ಕೆರೆಗಳು ದುರಸ್ತಾಗಿವೆ. ಇನ್ನು ಮಿಕ್ಕ ಕೆರೆಗಳನ್ನು ಯಾವಾಗ ದುರಸ್ತು ಮಾಡುವುದು? ಈಗ ತಾನೇ ಶ್ರೀಮಾನ್ ಸಿದ್ದಪ್ಪನವರು ಹೇಳಿದ ಹಾಗೆ, ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸವನ್ನು ಬೇಗ ಮಾಡದಿದ್ದರೆ ಈ ಕಾರ್ಯವನ್ನು ಮುಗಿಸುವುದಕ್ಕಾಗುವುದಿಲ್ಲ. ಮೇಜರ್ ಕೆರೆಗಳಿಗೆ ಎಷ್ಟು ಗಮನ ಕೊಡುತ್ತೇವೆಯೋ ಅಷ್ಟೇ ಗಮನವನ್ನು ಮೈನರ್ ಕೆರೆಗಳಿಗೂ ಕೊಡಬೇಕಾದುದು

ಅವಶ್ಯಕ. ಎಷ್ಟೋ ದೊಡ್ಡ ಜಲಾಶಯ ಒಂದು ಪ್ರದೇಶದಲ್ಲಿದ್ದರೂ ಆ ಭಾಗದಲ್ಲಿರುವ ಜನರ ಆರ್ಥಿಕ ಸ್ಥಿತಿ ಮಾತ್ರ ಉತ್ತಮಗೊಳ್ಳುತ್ತದೆ. ದೇಶದಲ್ಲೆಲ್ಲಾ ಅನುಕೂಲವಾಗಬೇಕಾದರೆ ಮೈನರ್ ಕೆರೆಗಳಿಗೆ ಗಮನ ಕೊಡಬೇಕು. ಸಾಮಾನ್ಯವಾಗಿ ಮಲೆನಾಡಿನಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಅಲ್ಪ ಸ್ವಲ್ಪ ಖರ್ಚಿನಲ್ಲಿ ದುರಸ್ತು ಮಾಡಬಹುದು. ಮಲೆನಾಡಿನಲ್ಲಿ ಮಳೆಯಿಂದಲೇ ವ್ಯವಸಾಯವಾಗುತ್ತದೆ. ಆದರೆ ಹದಿನೈದು ದಿವಸ ಅಥವಾ ಒಂದು ತಿಂಗಳು ಮಳೆ ಬಾರದೆ ಹೋದರೆ ಕಷ್ಟವಾಗುತ್ತದೆ. ಇದಕ್ಕಾಗಿ ಅವರಿಗೆ ಕೆರೆಗಳ ಅನುಕೂಲ ಬೇಕು. ಇಂಥ ಸಾವಿರಾರು ಚಿಕ್ಕ ಕೆರೆಗಳನ್ನು ದುರಸ್ತು ಮಾಡುವುದರಿಂದ ದೇಶದಲ್ಲಿ ಆಹಾರಾಭಾವವನ್ನು ಕಡಮೆಮಾಡಬಹುದು. ಇದೇ ರೀತಿ ಕೆರೆಗಳು ಮೈದಾನ ಪ್ರದೇಶದಲ್ಲಿಯೂ ಹಿಂದಿನಿಂದಲೂ ಇವೆ. ಈಗ ಅನೇಕ ಕೆರೆಗಳು ನಾದುರಸ್ತಾಗಿವೆ, ಅವುಗಳನ್ನು ರಿಪೇರಿಮಾಡುವುದು ಅವಶ್ಯಕ. ಯಾವ ಕೆರೆಯನ್ನು ನೋಡಿದರೂ ನಾದುರಸ್ತಾಗಿರುತ್ತದೆ. ತೂಬಿರುವುದಿಲ್ಲ, ನಾಲೆಯು ಮುಚ್ಚಿಹೋಗಿರುತ್ತದೆ, ಕೋಡಿ ಒಡೆದು ಹೋಗಿರುತ್ತದೆ. ವರ್ಷ ವರ್ಷವೂ ಇಂಜಿನಿಯರುಗಳು ಇವುಗಳನ್ನು ಪರೀಕ್ಷಿಸಿ ಸರ್ಟಿಫೈಮಾಡುವ ಪದ್ಧತಿ ಇದೆಯೋ ಇಲ್ಲವೋ ಎಂದು ಅನುಮಾನವಾಗುತ್ತದೆ. ಎಗ್ಸಿಕ್ಯುಟಿವ್ ಇಂಜಿನಿಯರು ಅಲ್ಲದಿದ್ದರೆ ಅಸಿಸ್ಟೆಂಟ್ ಇಂಜಿನಿಯರಾದರೂ ಪ್ರತಿ ವರ್ಷವೂ ನೋಡುತ್ತಾರೋ ಇಲ್ಲವೋ ಗೊತ್ತಿಲ್ಲ. ವರ್ಷಕ್ಕೊಮ್ಮೆ ರೆವೆನ್ಯೂ ಅಧಿಕಾರಿಗಳಂತೆ ಇಂಜಿನಿಯರಿಂಗ್ ಇಲಾಖೆಯ ಅಧಿಕಾರಿಗಳೂ ನೋಡಿ ವಗದಿಮಾಡಲು ಕಡ್ಡಾಯವಾಗಿ ಏರ್ಪಾಡುಮಾಡಬೇಕು.

ಇನ್ನು ಸಾಲಾಬಾದು ಕಾಮಗಾರಿಗಳನ್ನು ಸರಿಯಾಗಿ ಮಾಡುತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ರೈತರು ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಮೀನು ಹಿಡಿಯುವ ಪದ್ಧತಿಯನ್ನು ಹರಾಜು ಮೂಲಕ ಕೊಡುವುದನ್ನು ಜಾರಿಗೆ ತಂದಾಗಿನಿಂದ, ಹತ್ತು ರೂಪಾಯಿಗೆ ಹರಾಜು ಮಾಡಿ ಹತ್ತು ಸಾವಿರ ರೂಪಾಯಿಗಳನ್ನು ದುರಸ್ತಿಗೆ ಖರ್ಚು ಮಾಡಿದ್ದಾರೆ. ಇದೊಂದು ನೆಪ ಸಿಕ್ಕಿದ ಹಾಗಾಯಿತು. ಹಿಂದೆ ಹಳ್ಳಿಗಳಲ್ಲಿ ಮೀನು ತಿನ್ನದೇಯಿರುವವರು ಕೂಡ ಕೆಲಸ ಮಾಡುತ್ತಿದ್ದರು. ಈಗ ಈ ಹರಾಜು ಪದ್ಧತಿ ಬಂದ ಮೇಲೆ, ಸಾಲಾಬಾದು ಸರ್ಕಾರದ ಜವಾಬ್ದಾರಿ ಎಂದು ಕೆರೆಯಲ್ಲಿ ಒಂದು ಕಲ್ಲು ಉರುಳಿದ್ದರೂ ಅದನ್ನು ಹಳ್ಳಿಯವರು ಸರಿಮಾಡುವುದಿಲ್ಲ. ಈ ರೀತಿ ಆಗುವುದಕ್ಕೆ ಸರ್ಕಾರವೇ ಕಾರಣ. ಹೊಸದಾಗಿ ಕೆರೆ ಕೆಲಸವನ್ನು ತೆಗೆದುಕೊಳ್ಳಬೇಕೆಂದರೆ ಕಾಂಟ್ರಿಬ್ಯೂಷನ್ ಕಷ್ಟವನ್ನು ಹೇಳುತ್ತಾರೆ. ಯಾವ ಊರಿನಲ್ಲಿ ಯಾರು ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಹಿಂದೆಗೆಯುತ್ತಾರೋ ಗೊತ್ತಿಲ್ಲ. ಸರ್ಕಾರ ಶ್ರದ್ಧೆವಹಿಸಿ ಕೆಲಸಮಾಡುವುದಿಲ್ಲ. ಒಂದು ಅರ್ಜಿ ಹಾಕಿದರೆ ಕೆರೆ ಜೀರ್ಣೋದ್ಧಾರಕ್ಕೆ, ಡೆಪ್ಯುಟಿ ಕಮಿಷನರು ಅದನ್ನು ಸಬ್‌ಡಿವಿಜನ್ ಆಫೀಸರಿಗೆ ಕಳುಹಿಸುವುದು, ಅವರು ಅಮಲ್ದಾರರಿಗೆ ಕಳುಹಿಸುವುದು, ಅವರು ಅದನ್ನು ರೆವೆನ್ಯೂ ಇನ್ಸ್ಪೆಕ್ಟರಿಗೆ ಕಳುಹಿಸುವುದು.

ಶ್ರೀ ಎಚ್. ಸಿದ್ಧಪ್ಪ.—ಹೊಸ ಕಾನೂನು ಪ್ರಕಾರ ಇದನ್ನು ಬದಲಾಯಿಸಿದೆ.

ಶ್ರೀ ಬಿ. ಹುಚ್ಚೇಗೌಡ.—ಯಾರ ಜಮೀನು ಹೋಗುತ್ತದೆಯೋ ಅವನು ತಕರಾರು ಮಾಡಬಹುದೇ ವಿನಾ ಮಿಕ್ಕವರಾರೂ ಮಾಡುವುದಿಲ್ಲ. ಅಧಿಕಾರಿಗಳು ಸ್ಥಳಕ್ಕೆ ಹೋಗಿ ಕೆಲಸಮಾಡಿದರೆ ಒಂದು ದಿವಸದಲ್ಲಿ ಮಾಡಬಹುದು. ಅಂಥ ಕೆಲಸಕ್ಕೆ ವರ್ಷಗಟ್ಟಲೆಯಾಗುತ್ತಿದೆ. ಹತ್ತಾರು ವರ್ಷ ಎಳೆಯುತ್ತಾರೆ. ಸಾಧಾರಣವಾಗಿ ಸಾಲಾಬಾದನ್ನು ರೈತರಿಗೇ ವಹಿಸಿದರೆ, ಜವಾಬ್ದಾರಿಯಿಂದ ತುರ್ತಾಗಿ ಕೆಲಸ ನಡೆಯುತ್ತದೆ, ಅವರವರ ಕೆಲಸವನ್ನು ಅವರೇಮಾಡಿಕೊಳ್ಳಲು ಅನುಕೂಲವಾಗುತ್ತದೆ.

ನಮ್ಮ ದೇಶದಲ್ಲಿ ಸಣ್ಣ ಪುಟ್ಟ ಕೆರೆಗಳಿಲ್ಲದಿದ್ದರೆ soil erosion, ಎಂದರೆ ಭೂಮಿ ಕೊಚ್ಚಿಹೋಗಿ ಜಮೀನಿನ ಸಾರ ಬಹಳ ಮಟ್ಟಿಗೆ ಕಡಮೆಯಾಗಿ ಹೋಗುತ್ತದೆ. ಆದುದರಿಂದ ಅಲ್ಲಲ್ಲಿ ಸಣ್ಣ ಅಣೆಗಳನ್ನು ಕಟ್ಟಿದರೆ ದೊಡ್ಡ ಕೆರೆಗಳಿಗಿಂತ ಹೆಚ್ಚು ಬೆಳೆಯನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಈಗ ನೂರಾರು ಅರ್ಜಿಗಳನ್ನು ಕೊಡುತ್ತಿದ್ದಾರೆ. ಎಲ್ಲೋ ಒಂದೆರಡು ಕಟ್ಟಿದ್ದರೂ ಅದು ಸಾಲದು. ಇದಕ್ಕೆ ಸರ್ಕಾರ ಗಮನ ಕೊಡಬೇಕು.

ಸಣ್ಣ ಸಣ್ಣ 'ಪಿಕ್-ಅಪ್' ಗಳನ್ನು ಕಟ್ಟಬೇಕು. ಅರ್ಕಾವತಿ ನದಿಯನ್ನು ನೋಡಿದ್ದೇನೆ. ಈಗ ಎಷ್ಟೋ ನೀರು ವ್ಯರ್ಥವಾಗಿ ಹೋಗುತ್ತದೆ. ಅಂಥ ಕಡೆ ಸಣ್ಣ ಪಿಕಪ್‌ಗಳನ್ನು ಕಟ್ಟಿ ಒಂದೊಂದು ಕಡೆ ನೂರು ಇನ್ನೂರು ಎಕರೆಗಳಷ್ಟು ನೀರಾವರಿಯಾದರೂ ಎಷ್ಟೋ ಅನುಕೂಲವಾಗುತ್ತದೆ. ಶಾಶ್ವತವಾದ ಅನುಕೂಲವಾಗಿ ಭೂಮಿಯಸಾರ ಹೋಗದಂತೆ ತಡೆಗಟ್ಟಲವಕಾಶವಾಗುತ್ತದೆ.

ಆ ಮೇಲೆ 'ಡೀಸಿಲ್ಟಿಂಗ್' ಕೆಲಸಕ್ಕೆ ಬುಲ್‌ಡೋಜರುಗಳನ್ನುಪಯೋಗಿಸುವುದನ್ನು ನಾನು ಒಪ್ಪುವುದಿಲ್ಲ. ಇದರಿಂದ ಬಹುಮಟ್ಟಿಗೆ ಹಣವ್ಯರ್ಥವಾಗುತ್ತದೆ. ಇದಕ್ಕೆ ಬದಲಾಗಿ ಕೆರೆಯ ಏರಿಯನ್ನು ಎತ್ತರಿಸುವುದೇ ಅನುಕೂಲ. ಬುಲ್‌ಡೋಜರುಗಳಿಂದ ಒಂದು ಕಡೆಯಿರುವ ಮಣ್ಣನ್ನು ಇನ್ನೊಂದುಕಡೆ ಹಾಕುವುದಾಗುತ್ತದೆ. ಈ ಮಣ್ಣನ್ನು ರೈತರಿಗಾದರೂ ಕೊಟ್ಟರೆ ಅನುಕೂಲವಾಗುತ್ತದೆ. ಹಾಗಿಲ್ಲದೆ ಒಳಗಿನಿಂದ ಹೊರಕ್ಕೆ ಹೊರಗಿನಿಂದ ಒಳಕ್ಕೆ ಮಣ್ಣನ್ನು ಹಾಕುವುದರಿಂದೇನು ಪ್ರಯೋಜನ? ಖರ್ಚು ನೋಡಿದರೆ ಇದಕ್ಕೆ ಒಂದು ಎಕರೆಗೆ ಎರಡುಮೂರು ಸಾವಿರ ರೂಪಾಯಿಗಳು ಬೀಳುತ್ತವೆ. ಬುಲ್‌ಡೋಜರುಗಳನ್ನು ಭೂಮಿಯನ್ನು ಮಟ್ಟಸಮಾಡಲು ಉಪಯೋಗಿಸಬಹುದೇ ವಿನಾ ಕೆರೆಯ ಮಣ್ಣು ತೆಗೆಯುವುದಕ್ಕೆ ಇದರಿಂದ ಸಾಧ್ಯವಿಲ್ಲ. ಖಂಡಿತ ಇದರಿಂದ ಮೂರುಕಾಸಿನ ಪ್ರಯೋಜನವೂ ಆಗುವುದಿಲ್ಲ.

ಈ ವರ್ಷ ಮೈನರ್ ಮತ್ತು ಮೇಜರ್ ಕೆರೆ ಕೆಲಸಗಳಿಗೆ ಹಿಂದಿನ ವರ್ಷಕ್ಕಿಂತ ಕಡಮೆ ಹಣವನ್ನು ಒದಗಿಸಿದ್ದಾರೆ. ಬಡ್ಜೆಟ್ ನೋಡಿದರೆ ನೀರಾವರಿ ಮೇಜರ್ ಕೆಲಸಗಳಿಗೆ 34 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು, ಈ ವರ್ಷ 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೊಸ ಕೆರೆಗಳನ್ನೂ ಪಿಕಪ್‌ಗಳನ್ನೂ ಕಟ್ಟುವುದಕ್ಕೆ ಹೋದ ವರ್ಷ 8 ಲಕ್ಷದ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರು, ಈ ವರ್ಷ 6 ಲಕ್ಷ 80 ಸಾವಿರಕ್ಕೆ ಇಳಿಸಿದ್ದಾರೆ. ಇದೇ ರೀತಿ ಬೇರೆ ನೀರಾವರಿ ಕೆಲಸಗಳಿಗೂ ಹೋದ ಸಾರಿ 24 ಲಕ್ಷ ಕೊಟ್ಟಿದ್ದುದನ್ನು ಈ ಸಾರಿ 16 ಲಕ್ಷದ 90 ಸಾವಿರಕ್ಕೆ ಇಳಿಸಿದ್ದಾರೆ. ನಾನು ಹೇಳುವುದಿಷ್ಟು, ಕನಿಷ್ಟಪಕ್ಷ ವರ್ಷಕ್ಕೆ 500 ಸಣ್ಣ ಕೆರೆಗಳನ್ನು ಐದು ಸಾವಿರ ಹತ್ತು ಸಾವಿರ ರೂಪಾಯಿಗಳ ಖರ್ಚಿನಲ್ಲಿ ಮಾಡಿಕೊಂಡು ಹೋದರೆ ಒಳ್ಳೆಯದು. ಇಲ್ಲದಿದ್ದರೆ ಖಂಡಿತವಾಗಿಯೂ ಜನರಿಗೆ ಅನುಕೂಲವಾಗುವುದಿಲ್ಲ. Soil erosion ಆಗುವುದನ್ನು ನಿಲ್ಲಿಸಿದರೆ ಅನುಕೂಲವಾಗುತ್ತದೆ.

(ಶ್ರೀ ಬಿ. ಹುಚ್ಚೇಗೌಡ)

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಇಲ್ಲಿಯವರೆಗೂ ಮಾತನಾಡಿರತಕ್ಕ ಅನೇಕ ಮಾನ್ಯ ಸದಸ್ಯರು ಸರ್ಕಾರಕ್ಕೆ ಅನೇಕ ಸಲಹೆಗಳನ್ನು ಈ ನೀರಾವರಿ ಕಾಮಗಾರಿಗಳ ಬಗ್ಗೆ ನೀಡಿದ್ದಾರೆ. ಆದರೆ ನಾನು ಮಲೆನಾಡಿನಲ್ಲಿರತಕ್ಕ ಕೆರೆಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮಲೆನಾಡು ಪ್ರಾಂತ್ಯದ ಕೆರೆಗಳು ಜಾಸ್ತಿ, ಅಲ್ಲಿ ಮಳೆ ಸಹ ವಿಶೇಷ. ಆದರೆ ಅಂಥ ಹೆಚ್ಚು ನೀರು ಬೀಳುವ ಅವಕಾಶವಿದ್ದರೂ, ಆ ನೀರೆಲ್ಲಾ ಈ ದಿವಸ ದೇಶಕ್ಕೆ ಯಾವ ರೂಪವಾಗಿಯೂ ಉಪಯೋಗವಾಗದೆ ಆ ಮಳೆಯಿಂದ ಬೀಳತಕ್ಕ ನೀರೆಲ್ಲಾ ನದಿಗಳಲ್ಲಿ ಹರಿದು ನಿಷ್ಪ್ರಯೋಜನವಾಗಿ ಸಮುದ್ರ ಸೇರುತ್ತಿದೆ. ಆದರೆ ಮಲೆನಾಡಿನಲ್ಲಿರತಕ್ಕವರಿಗೆ ದೊಡ್ಡ ನೀರಾವರಿ ಯೋಜನೆಗಳಿಂದ ಅಂದರೆ ಭದ್ರಾ ಅಣೆಕಟ್ಟಿನಂಥ ಯೋಜನೆಗಳಿಂದ ಏನೂ ಅನುಕೂಲವಾಗುವುದಿಲ್ಲ. ಆದುದರಿಂದ ಸಣ್ಣಸಣ್ಣ ಕೆರೆಗಳ ಅಭಿವೃದ್ಧಿಯ ಕಡೆಗೆ ತಾವು ಗಮನಕೊಡಬೇಕಾಗಿದೆಯೆಂದು ತಿಳಿಸುತ್ತೇನೆ. ತಾವು ಹೀಗೆ ಮಾಡತಕ್ಕದ್ದು ಆವಶ್ಯಕ ಮತ್ತು ಅಗತ್ಯವಾದುದೆಂಬುದನ್ನು ತಿಳಿಸಲು ಬಯಸುತ್ತೇನೆ. ಸರ್ಕಾರದವರು ಈ ಕೆರೆಗಳ ಎಂದರೆ ಮೈನರ್ ಟ್ಯಾಂಕುಗಳ ರಿಪೇರಿಯ ಬಗ್ಗೆ ಯಾವ ಒಂದು ನಿರ್ದಿಷ್ಟವಾದ ಯೋಜನೆಯನ್ನೂ ಹಾಕಿಕೊಳ್ಳದೆ ಕೆಲಸ ನಡೆಸುತ್ತಿರುವುದರಿಂದ ಇವುಗಳ ಜೀರ್ಣೋದ್ಧಾರ ಕಾರ್ಯ ತುಂಬ ನಿಧಾನವಾಗಿ ನಡೆಯುತ್ತಿದೆ. ಈ ದಿವಸ ಒಂದು ಕೆರೆ ರಿಪೇರಿ ಆಗಬೇಕೆಂದು ನಾವು ತಾಲ್ಲೂಕು ಅಮಲ್ದಾರರಿಗೆ ಒಂದು ಅರ್ಜಿಯನ್ನು ಕೊಟ್ಟರೆ ಅದು ಅಲ್ಲಿಂದ ಅಸಿಸ್ಟೆಂಟ್ ಇಂಜನಿಯರ್ ಎಗ್ಸಿಕ್ಯೂಟೀವ್ ಇಂಜನಿಯರ್ ಇವರುಗಳಿಗೆಲ್ಲ ಹೋಗಿ, ಸರ್ವೆ ಅಂದಾಜುಗಳಾಗಿ, ಮುಚ್ಚಳಿಕೆ ಗೆಜೆಟ್‌ನಲ್ಲಿ ಪ್ರಕಟನೆ ಮಂಜೂರಾತಿ ಆಗಿ, ಈ ಕೆಲಸ ಪ್ರಾರಂಭವಾಗಬೇಕಾಗಿದ್ದರೆ ಕನಿಷ್ಠಪಕ್ಷ 3–4 ವರ್ಷಗಳಾದರೂ ಬೇಕಾಗುತ್ತದೆ. ಹೀಗಾಗಿರತಕ್ಕಂಥ ನಿದರ್ಶನಗಳು ಹಲವಾರಿವೆ. ಇದನ್ನು ತಾವು ಕೂಡಲೇ ಮಾರ್ಪಾಟು ಮಾಡಬೇಕು. ಹೀಗೆ ಒಂದು ಚಿಕ್ಕ ಪುಟ್ಟ ಕೆರೆಯ ಜೀರ್ಣೋದ್ಧಾರ ಕಾರ್ಯ 3-4 ವರ್ಷಗಳಾದರೂ ಆಗದೆ ತಡವಾಗುವುದಕ್ಕೆ ಕಾರಣವೇನು, ಯಾರುಯಾರು ಇದಕ್ಕೆ ಜವಾಬ್ದಾರರಾಗಿರುತ್ತಾರೆ ಎಂಬುದನ್ನು ಕೂಲಂಕಷವಾಗಿ ವಿಮರ್ಶೆಮಾಡಿ ನೋಡಲು ಯಾರೂ ಪ್ರಯತ್ನಪಟ್ಟಿಲ್ಲ. ಸರಿಯಾದ ಒಂದು ಚೆಕಿಂಗ್ ಸಿಸ್ಟಂ ಇಲ್ಲ. ಕೇವಲ ರೈತರಿಂದ ಮುಚ್ಚಳಿಕೆ ಬರೆಸಿಕೊಳ್ಳುವುದಕ್ಕೆ 2-3 ವರ್ಷಕಾಲ ಹಿಡಿಯುತ್ತಿದೆ. ಹೀಗೆ ನಾನಾ ಮುಖನಾಗಿ ಈ ಕೆಲಸಕಾರ್ಯಗಳಿಗೆ ಅಡ್ಡಿ ಅಡಚಣೆಗಳಾಗುತ್ತಿರುವುದರಿಂದ ತಾವು ಈ ಬಗ್ಗೆ ಮಾಡಿರತಕ್ಕ ಕಾನೂನನ್ನೇ ಬದಲಾಯಿಸಿ, ಅದನ್ನು ಒಂದು ಕ್ರಮಬದ್ಧವಾದ ರೀತಿಯಲ್ಲಿ ತ್ವರಿತವಾಗಿ ನಡೆಯಲನುಕೂಲವಾಗತಕ್ಕ ರೀತಿಯನ್ನು ಹುಡುಕುವುದು ಅಗತ್ಯವಾಗಿದೆ. ಪ್ರತಿ ತಾಲ್ಲೂಕಿನಲ್ಲಿಯೂ ಒಂದು ಸಮಿತಿಯನ್ನುಮಾಡಿ ಆ ಸಮಿತಿಯವರು ತಯಾರಿಸಿ ಕೊಡತಕ್ಕ ಪಟ್ಟಿಯ ಪ್ರಕಾರ ಮುಚ್ಚಳಿಕೆ ಮೊದಲಾದ ಕ್ರಮಗಳನ್ನು ಮನ್ನಾ ಮಾಡಿ ಕೂಡಲೇ ಕೆರೆಗಳನ್ನು ರಿಪೇರಿಮಾಡತಕ್ಕ ಕ್ರಮ ಸೂಕ್ತವಾಗಿರುತ್ತದೆಯೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ಕೆರೆ, ನಾಲಾ ಪ್ರದೇಶದಲ್ಲಿರತಕ್ಕ ರೈತರು ಅವರಿಗೆ ಸೇರಿರತಕ್ಕ ಕೆರೆ ಅಥವಾ ನಾಲೆಗಳನ್ನು ರಿಪೇರಿ ಮಾಡಿಸತಕ್ಕ ಸಂದರ್ಭಗಳಲ್ಲಿ ಅವರ ಅನುಮತಿ ಕೇಳದೆ ಮುಚ್ಚಳಿಕೆ ಬರೆಸಿಕೊಳ್ಳದೆ ಕಡ್ಡಾಯವಾಗಿ ಅವರು ಕಾಂಟ್ರಿಬ್ಯೂಷನ್ ಇತ್ಯಾದಿಗಳನ್ನು ಕೊಡುವಂತೆ ಕಾನೂನಿನಲ್ಲಿ ಸರಿಯಾದ ತಿದ್ದುಪಡಿಯನ್ನು ಅತ್ಯಗತ್ಯವಾಗಿ ಮಾಡಬೇಕಾಗಿದೆ. ಆದಕಾರಣ ಈಗಿರತಕ್ಕ ಕಾನೂನು ರೀತಿಯನ್ನೇ ಬದಲಾಯಿಸಿ, ಅದನ್ನು ಅತಿ ಜಾಗ್ರತೆ ಕಡ್ಡಾಯವಾಗಿ ಆಗುವ ರೀತಿ ಮಾರ್ಪಾಟು ಮಾಡಿ ಕೆಲಸಗಳು ಬೇಗ ನೆರವೇರುವಂತೆ ಮಾಡತಕ್ಕದ್ದು ಅಗತ್ಯವಾಗಿವೆ. ಈ ಸಂಬಂಧವಾಗಿ ನಾನು ತಮಗೆ ನಮ್ಮ ತರೀಕೆರೆ ತಾಲ್ಲೂಕಿನ ಒಂದು ವಿಚಾರವನ್ನೇ ಉದಾಹರಣೆಗಾಗಿ ತಿಳಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಜಂಪದ ಹಳ್ಳಕ್ಕೆ ಒಂದು ಅಣೆಕಟ್ಟನ್ನು ಕಟ್ಟಿಸಿಕೊಡಿ ಎಂಬುದಾಗಿ ಇಲ್ಲಿಗೆ ಹತ್ತಾರು ವರ್ಷಗಳಿಂದಲೂ ಸರ್ಕಾರದವರನ್ನು ಒತ್ತಾಯಪಡಿಸುತ್ತ ಬಂದಿದ್ದೇವೆ. ಆದರೆ ಆ ಬಗ್ಗೆ ಪ್ರಯತ್ನಗಳೇನೂ ನಡೆಯದಿರುವಂತೆ ಇಂದಿಗೂ ಕಾಣುತ್ತಿಲ್ಲ. ಈ ಅಣೆಕಟ್ಟು ಮಾಡಿಸಿದರೆ ಸುಮಾರು 8 ಸಾವಿರ ಎಕರೆಗಳು ನೀರಾವರಿ ಸಾಗಿಗೆ ಬರುತ್ತವೆ. ಈಗಲಾದರೂ ಸರ್ಕಾರದವರು ಈ ವಿಚಾರದಲ್ಲಿ ಸಹಾನುಭೂತಿ ತೆಗೆದುಕೊಂಡು ಆ ಒಡ್ಡನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಲಕ್ಕವಳ್ಳಿಗೆ ಸಮೀಪದಲ್ಲೇ ಶಾಂತಿಪುರ ಅಣೆಕಟ್ಟು ಎಂಬುದೊಂದಿದೆ, ಈ ಅಣೆಕಟ್ಟಿನಿಂದ ಬರತಕ್ಕ ಛಾನಲ್ ಹೂತುಹೋಗಿ ರಿಪೇರಿಯೇ ಆಗಿಲ್ಲ. ಇದನ್ನು ಬೇಗ ರಿಪೇರಿ ಮಾಡಿಸಲು ತಾವು ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮಳೆ ಬಾರದ ಪ್ರದೇಶಗಳಲ್ಲಿ ಕೆರೆಗಳನ್ನು ಕಟ್ಟಿಸುವ ಬದಲು ಮಳೆ ಹೆಚ್ಚಾಗಿ ಬೀಳತಕ್ಕಂಥ ಮಲೆನಾಡಿನಲ್ಲಿರತಕ್ಕ ಸಣ್ಣಪುಟ್ಟ ಕೆರೆಗಳ ರಿಪೇರಿಗಳನ್ನು ಮಾಡಿಸಿದರೆ ಅದರಿಂದ ದೇಶಕ್ಕೆ ಎಷ್ಟೋ ಉಪಕಾರವಾಗುತ್ತದೆಂದು ತಿಳಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಸ್ವಾಮಿ, ಶ್ರೀ ಬಿ. ಹುಚ್ಚೇಗೌಡರು ಹೇಳಿದ ಹಾಗೆ, ಸಂಸ್ಥಾನದಲ್ಲಿ ಮೊದಲು 30 ಸಾವಿರ ಕೆರೆಗಳಿದ್ದವು. ಆದರೆ ಈಗಿನ ಲೆಕ್ಕದ ಪ್ರಕಾರ ಸಂಸ್ಥಾನದಲ್ಲಿರತಕ್ಕ ಮೇಜರ್ ಮತ್ತು ಮೈನರ್ ಕೆರೆಗಳ ಸಂಖ್ಯೆ 23 ಸಾವಿರ ಎಂದು ತಿಳಿದು ಬಂದಿದೆ. ಆದರೆ ಈ ಪೈಕಿ ಕೆಲವು ಕೆರೆಗಳು ನೂರಾರು ವರ್ಷಗಳ ಹಿಂದೆಯೇ ಕಟ್ಟಲ್ಪಟ್ಟವುಗಳಾಗಿದ್ದು, ಅವುಗಳ ರಿಪೇರಿಯನ್ನು ಕಾಲಕಾಲಕ್ಕೆ ಸರಿಯಾಗಿ ನಡೆಸದೆ ಬಂದಿರುವುದರಿಂದ ಈ ದಿವಸ ಅವುಗಳು ಅಷ್ಟು ಅವ್ಯವಸ್ಥೆಯಲ್ಲಿರುತ್ತವೆ. ಹೀಗೆ ಇಡೀ ಸಂಸ್ಥಾನದಲ್ಲಿರತಕ್ಕ ಕೆರೆಗಳನ್ನು ರಿಪೇರಿ ಮಾಡಿಸಬೇಕಾಗಿದ್ದರೆ ಸುಮಾರು $3\frac{1}{2}$ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಮೈಸೂರು ಸರ್ಕಾರ ಮೊದಲಿನಿಂದಲೂ ಈ ನೀರಾವರಿ ಕಾಮಗಾರಿಗಳ ಬಗ್ಗೆ ಹೆಚ್ಚಿನ ಒಂದು ಮೆಹನತ್ತು ಮತ್ತು ಆಸಕ್ತಿ ವಹಿಸುತ್ತಾ ಬಂದಿದೆ. ಶ್ರೀ ಮಹಮದ್ ಇಮಾಂರವರೂ ಮತ್ತು ಶ್ರೀ ಎಲ್. ಸಿದ್ದಪ್ಪನವರೂ ಈ ನೀರಾವರಿ ಕಾಮಗಾರಿಗಳ ಬಗ್ಗೆ ಅನೇಕ ದೊಡ್ಡ ಯೋಜನೆಗಳನ್ನು ಹಾಕಿ ದೇಶಕ್ಕೆ ಉಪಕಾರ ಮಾಡಿದ್ದಾರೆ. ಆ ಬಗ್ಗೆ ನಾವು ಈ ದಿವಸ ಅವರಿಗೂ ಒಂದು ''ಕ್ರೆಡಿಟ್'' ಕೊಡುತ್ತೇವೆ. ಇತ್ತೀಚೆಗೆ ಕಾಂಗ್ರೆಸ್ ಸರ್ಕಾರ ಬಂದ ಮೇಲಂತೂ ಈ ನೀರಾವರಿ ಕಾಮಗಾರಿಗಳ ಬಗ್ಗೆ ಒಂದು ಹೆಚ್ಚಿನ ಆಸಕ್ತಿಯನ್ನು ವಹಿಸಿ, ಹೆಚ್ಚಿಗೆ ಹಣವನ್ನು ಖರ್ಚುಮಾಡುತ್ತಾ ಬಂದಿದ್ದಾರೆ. ಆದರೆ ಎದುರು ಪಕ್ಷದ ಮಾನ್ಯ ನಾಯಕರು ಈ ಕಾಂಗ್ರೆಸ್ ಸರ್ಕಾರ ಅಂಥ ಅನುಕೂಲವಾದ ಯಾವ ಕೆಲಸಗಳನ್ನೂ ದೇಶಕ್ಕೆ ಮಾಡಿರುವುದಿಲ್ಲವೆಂದು ಹೇಳಿರತಕ್ಕದ್ದನ್ನು ಒಂದು ತಮಾಷೆಗೋಸ್ಕರವಾಗಿ ಹಾಗೆ ಹೇಳಿರುತ್ತಾರೆಂದು ನಾನು ಭಾವಿಸಿದ್ದೇನೆ. ಆದರೆ ಕಾಂಗ್ರೆಸ್

ಸರ್ಕಾರ ಬಂದಮೇಲೆ ಏನೇನು ಕಾರ್ಯಕ್ರಮಗಳನ್ನು ಕೈಕೊಂಡು ಎಷ್ಟೆಷ್ಟು ಹಣವನ್ನು ಖರ್ಚುಮಾಡಲಾಗಿರುತ್ತೆಂಬ ಬಗ್ಗೆ ಅಂಕಿ ಅಂಶಗಳನ್ನು ಈ ಮಾನ್ಯ ಸಭೆಯವರ ಗಮನಕ್ಕೆ ಈ ಸಂದರ್ಭದಲ್ಲಿಡತಕ್ಕದ್ದು ಉಚಿತವೆಂದು ನಾನು ಭಾವಿಸಿದ್ದೇನೆ. 1952-53ನೆಯ ಸಾಲಿನಲ್ಲಿ ಜಿ. ಎಂ. ಎಫ್. ಯೋಜನೆಯ ಹೆಡ್ಡಿನಲ್ಲಿ ಕೆರೆ ನಾಲೆ ಇತ್ಯಾದಿಗಳಿಗಾಗಿ 30ಲಕ್ಷ ರೂಪಾಯಿಗಳನ್ನೊದಗಿಸಲಾಗಿತ್ತು. ಈ ವರ್ಷ ಹೊಸದಾಗಿ 169 ಕೆಲಸಗಳನ್ನು ಕೈಗೊಳ್ಳಲಾಗಿದೆ. 1952-53ನೆಯ ಸಾಲಿನಲ್ಲಿ 1,028 ಮೈನರ್ ಕೆರೆಗಳ ಜೀರ್ಣೋದ್ಧಾರ ಕಾರ್ಯಕ್ಕಾಗಿ 12ಲಕ್ಷ ರೂಪಾಯಿಗಳನ್ನೊದಗಿಸಲಾಗಿತ್ತು. ಇನ್ನು ಕೆರೆಗಳಲ್ಲಿರತಕ್ಕ ಹೂಳು ತೆಗೆಸತಕ್ಕ ಬಗ್ಗೆ 8ಲಕ್ಷ ರೂಪಾಯಿಗಳನ್ನು ಒದಗಿಸಿದ್ದು 867 ಕೆರೆಗಳ ಕೆಲಸವನ್ನು ಕೈಗೊಳ್ಳಲಾಗಿದೆ. ಈಗ ಈ ಡೀ-ಸಿಲ್ಟಿಂಗ್ ನಡೆಯುತ್ತಿದೆ. ಅನಂತರ ಕ್ಷಾಮನಿವಾರಣೆ ಬಗ್ಗೆ ಪರಿಹಾರ ಕಾರ್ಯಕ್ರಮಗಳನ್ನೊದಗಿಸತಕ್ಕ ಸಂದರ್ಭದಲ್ಲಿ ಡೀ-ಸಿಲ್ಟಿಂಗ್, ರೆಸ್ಟೊರೇಷನ್ ಮತ್ತು ಛಾನಲ್ ರಿಪೇರಿಗಾಗಿ 17ಲಕ್ಷ ರೂಪಾಯಿಗಳನ್ನೊದಗಿಸಲಾಯಿತು. ಈಚೆಗೆ ಹೊಸದಾಗಿ 27 ದೊಡ್ಡ ಕೆರೆಗಳು ನಿರ್ಮಾಣವಾಗಿರುತ್ತವೆ. ಈ ಹಿಂದೆ ಪ್ರಾರಂಭಿಸಿ ನಿಂತುಹೋಗಿದ್ದಂಥ ದೊಡ್ಡ ಕೆರೆಗಳ ಕೆಲಸವನ್ನು ಮುಂದುವರಿಸಲು 19ಲಕ್ಷ 13 ಸಾವಿರ ರೂಪಾಯಿಗಳನ್ನೊದಗಿಸಲಾಗಿದೆ. ಈಗಾಗಲೇ ಕೆಲಸ ಸಂಪೂರ್ಣವಾಗಿರುವಂಥವುಗಳು ಎಂದರೆ ತುಪ್ಪದಹಳ್ಳಿ, ಗಡಿಮಾಕುಂಟೆ, ಸಂಗೇನಹಳ್ಳಿ, ಮುತ್ತಗದೂರು, ಪರಶುರಾಮಪುರ, ವಿಶ್ವೇಶ್ವರಯ್ಯ ನಾಲೆ ಬಡಾವಣೆ, ಉದ್ದನಹಳ್ಳಿ, ಇರ್ಕಸಂದ್ರ, ಹುಲ್ಲಹಳ್ಳಿ, ಮಾರ್ಕೋನಹಳ್ಳಿ ಬಲಗಡೆ ನಾಲೆ ಇತ್ಯಾದಿಗಳ ಕೆಲಸ. ಇನ್ನು 7 ದೊಡ್ಡ ಕೆರೆಗಳ ಕೆಲಸವನ್ನು ಮುಂದಿನ ವರ್ಷ ಕೈಗೊಳ್ಳಬೇಕೆಂದಿದ್ದೇವೆ. ಅವುಗಳು ಯಾವುವೆಂದರೆ, ಕರಿಯಾಲ ಪ್ರಾಜೆಕ್ಟು, ನಾರಣಾಪುರ ಪ್ರಾಜೆಕ್ಟು, ಸುವರ್ಣಾವತಿ ವ್ಯಾಲಿ, ಸಂಕೀಘಟ್ಟದ ಕೆರೆ, ಬೆಳಗುಂಬದ ಕೆರೆ, ಜೋಗೇನಹಳ್ಳಿ, ಜೋಡಿ ಅರ್ಬೇನಹಳ್ಳಿ ಇತ್ಯಾದಿ ಕೆರೆಗಳು. ಇವುಗಳ ಕೆಲಸವನ್ನು ಮುಂದಿನ ವರ್ಷ ಮಾಡಬೇಕೆಂದಿದ್ದೇವೆ. ಇನ್ನೂ ದೊಡ್ಡದಾದ ಕೆಲವು ಪ್ರಾಜೆಕ್ಟುಗಳನ್ನು ಮುಂದಿನ ಸಾಲಿನಲ್ಲಿ ಕೈಗೊಳ್ಳಬೇಕೆಂದಿದ್ದೇವೆ. ಆ ಪೈಕಿ ನಮ್ಮ ಶ್ರೀಮಾನ್ ಅರಸರಿಗೆ ಬೇಕಾದಂಥ ಕೆಂಚನಕೆರೆಯೂ ಸೇರಿರುತ್ತದೆ. ಇದರ ಜೊತೆಗೆ ನವಿಲೂರು ಛಾನಲ್, ಮಂಗಳ ಟ್ಯಾಂಕ್ ಅಂಬಲಿಗೊಳ ರಿಜರ್ವಾಯರ್, ತಿರುಮಣಿ ಸೀರೀಸ್ ಟ್ಯಾಂಕ್‌ಗಳು, ಇತ್ಯಾದಿ ಕೆರೆಗಳ ಕೆಲಸವನ್ನೂ ಪ್ರಾರಂಭಿಸಬೇಕೆಂದಿದ್ದೇವೆ. ಇದರ ಜೊತೆಗೆ ಕೆಲಕೆಲವು ಮೈನರ್ ಟ್ಯಾಂಕುಗಳ ರಿಪೇರಿ ಸಹ ನಡೆಸಬೇಕೆಂದಿದ್ದೇವೆ. ಅವುಗಳು ಯಾವುವೆಂದರೆ—ಗುಂಡಯ್ಯನ ಕೆರೆ, ಜಂಪದಹಳ್ಳಿ ಅಣೆಕಟ್ಟು, ಸುಣ್ಣದಹಳ್ಳಿ ಅಣೆಕಟ್ಟು, ಕಡ್ಲೆ ಒಡ್ಡು.........

ಶ್ರೀ ಎಲ್. ಸಿದ್ದಪ್ಪ.—ಅವುಗಳಲ್ಲಿ ಮಾವಿನಹೊಳೆ ಸೇರಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕುಣಿಗಲ್ ತಾಲ್ಲೂಕಿನಲ್ಲಿರುವ ಮಂಗಳ ಟ್ಯಾಂಕ್ ಸೇರಿದೆ. ಆದರೆ ಈ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಪ್ರಭಾವಶಾಲಿಗಳಾಗಿರತಕ್ಕಂಥ ರಾಜಕೀಯ ಮುಖಂಡರ ಸಲಹೆ ಮೇರೆಗೆ ಕೈಗೊಳ್ಳಬೇಕೆಂದು ಕೆಲವರು ಮತ್ತು ಶ್ರೀ ಕೆ. ಪ್ರಭಾಕರ್ ಅವರು ಒಂದು ಸಮಿತಿಯನ್ನು ನೇಮಕ ಮಾಡಿತನ್ಮೂಲಕ ಒಂದು ಪ್ರಯಾರ್ಟಿ ಲಿಸ್ಟನ್ನು ತಯಾರಿಸಿ, ಅದರ ಪ್ರಕಾರ ಈ ರಿಪೇರಿ ಕೆಲಸಕಾರ್ಯಗಳನ್ನು ಒಂದು ಕ್ರಮವಾಗಿ ನಡೆಯುವಂತೆ ಮಾಡಬೇಕೆಂದೂ ಸೂಚನೆಗಳನ್ನು ಕೊಟ್ಟಿದ್ದಾರೆ. ಆದರೆ ಈ ಸಂದರ್ಭದಲ್ಲಿ ಒಂದು ಮಾತನ್ನು ಸೂಚಿಸಲಿಚ್ಛಿಸುತ್ತೇನೆ. ಹಿಂದಿದ್ದುದು ನಾನ್ ಕಾಂಗ್ರೆಸ್ ಸರ್ಕಾರ. ಅದನ್ನು ಒತ್ತಾಯಪಡಿಸಲು ಜನರಿಗೆ ಅಷ್ಟಾಗಿ ಅವಕಾಶವಿರಲಿಲ್ಲ. ಆದರೆ ಈಗ ಕಾಂಗ್ರೆಸ್ ಸರ್ಕಾರ ಬಂದಿರುವುದರಿಂದ ಜನರು ಒತ್ತಾಯಮಾಡತಕ್ಕದ್ದು ಸ್ವಾಭಾವಿಕವಾಗಿಯೇ ಆಗಿದೆ. ಆದರೆ ಸರ್ಕಾರಕ್ಕೂ ಕೂಡ ಒಂದು ಇಕ್ಕಟ್ಟಿನ ಪರಿಸ್ಥಿತಿ ಇರುತ್ತದೆ. ಕೆಲಕೆಲವು ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಲೇ ಬೇಕಾಗುತ್ತದೆ. ಆದರೆ ತಾವು ಹೇಳುವಂಥ ಎಲ್ಲಾ ಕೆಲಸಗಳನ್ನೂ ಕೈಗೊಳ್ಳಬೇಕೆಂದರೆ ಅದು ಸಾಧ್ಯವಾಗದ ಮಾತು. ಆದರೆ ಈ ಮಾನ್ಯ ಸಭೆಯ ಸದಸ್ಯರುಗಳೆಲ್ಲಾ ಅವರವರ ಚುನಾವಣೆ ಕ್ಷೇತ್ರಗಳಲ್ಲಿ ಯಾವ ಯಾವ ಕೆಲಸವನ್ನು ಕೈಗೊಳ್ಳಬೇಕೆಂಬ ಬಗ್ಗೆ ಮತ್ತು ಅದರಲ್ಲೇ ಯಾವುದಕ್ಕೆ ಮೊದಲು ಪ್ರಾಶಸ್ತ್ಯ ಕೊಡಬೇಕೆಂಬುದನ್ನು ಸೂಚಿಸಿ, ತಾವೆಲ್ಲರೂ ಒಂದು ಪಟ್ಟಿ ತಯಾರಿಸಿಕೊಡತಕ್ಕದ್ದು ಸೂಕ್ತವಾದುದೆಂದು ನನಗೆ ತೋರುತ್ತದೆ. ತಾವು ಹಾಗೆ ಒಂದು ಪಟ್ಟಿಯನ್ನು ತಯಾರಿಸಿ ಕೊಟ್ಟ ನಂತರ ಅದನ್ನು ನಾವು ಇಲ್ಲಿ ನಮ್ಮ ಇಲಾಖಾಧಿಕಾರಿಗಳ ಒಂದು ಸಭೆ ಕರೆದು, ಈ ಪಟ್ಟಿಯನ್ನು ಅವರ ಮುಂದಿಟ್ಟು ಇವುಗಳ ಪೈಕಿ ಯಾವ ಯಾವುವು ಕೈಗೊಳ್ಳಲು ಯೋಗ್ಯವಾಗಿದೆಯೆಂಬುದನ್ನು ಪರಿಶೀಲಿಸಿ, ತದನಂತರ ಯಾವುದಕ್ಕೆ ಪ್ರಯಾರ್ಟಿ ಕೊಡಬೇಕೆಂಬ ವಿಚಾರದಲ್ಲಿ ನಾವು ಬೇಗ ಒಂದು ಇತ್ಯರ್ಥಕ್ಕೆ ಬರಲು ಅನುಕೂಲವಾಗುತ್ತದೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಎಲ್ಲಾ ಕೆರೆಗಳನ್ನೂ ದುರಸ್ತುಮಾಡುವುದು ಅವಶ್ಯಕವೆಂದು ತಾವು ಭಾವಿಸಿದ್ದೀರೋ ಅಥವಾ ಕೆಲವು ಕೆರೆಗಳನ್ನು ಮಾತ್ರ ದುರಸ್ತುಮಾಡಿಸಿದರೆ ಸಾಕೆಂದು ತಾವು ಭಾವಿಸಿದ್ದೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲ ಕೆರೆಗಳನ್ನೂ ದುರಸ್ತುಮಾಡತಕ್ಕದ್ದು ಅಗತ್ಯವೆಂದು ಹೇಳುವುದಾಗಿದ್ದರೂ, ಕೆಲವು ಲಾಭದಾಯಕವಾಗಿರುತ್ತವೆ. ಮತ್ತೆ ಕೆಲವು ಹಾಗೆ ಲಾಭದಾಯಕವಾಗಿರುವುದಿಲ್ಲ. ಅದರಮೇಲೆ, ಹಣದ ಅಭಾವ ಇರುವುದರಿಂದ, ಎಲ್ಲ ಕೆರೆಗಳನ್ನೂ ದುರಸ್ತಿ ಮಾಡಬೇಕೆಂದರೆ ಅದು ಸಾಧ್ಯವಾಗದಮಾತು.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಕೆರೆಗಳನ್ನು ಕಟ್ಟತಕ್ಕ ವಿಧಾನದಲ್ಲಿ, ಜಲಾಧಾರವಿರತಕ್ಕ ಕೆರೆಗಳನ್ನು ಕಟ್ಟುವುದಕ್ಕೂ ಮತ್ತು ಮಳೆ ನೀರಿನ ಬಗ್ಗೆ ಕಟ್ಟತಕ್ಕ ಕೆರೆಗಳಿಗೂ ಏನಾದರೂ ವ್ಯತ್ಯಾಸವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಲೆನಾಡಿನಲ್ಲಿ ಅಂಥ ಜಲ ಬರುವ ಕೆರೆಗಳಿರುತ್ತವೆ. ಆದರೆ ಅನೇಕ ವರ್ಷಗಳಿಂದ ಆ ಕೆರೆಗಳನ್ನೆಲ್ಲಾ ಉದಾಸೀನಮಾಡಿದ್ದಾರೆ. ಮಳೆ ನೀರಿನಿಂದ ತುಂಬುತ್ತಿದ್ದಂಥ ಅನೇಕ ಕೆರೆಗಳೂ ಮಲೆನಾಡಿನಲ್ಲಿ ಹೂತುಹೋಗಿವೆ. ಆದರೆ ಈಗ ಅಂಥ ಕೆರೆಗಳ ಹೂಳನ್ನು ತೆಗೆಸುವ ಬದಲು ಹೊಸ ಕೆರೆಗಳನ್ನು ಕಟ್ಟತಕ್ಕದ್ದೇ ಸುಲಭ ಮತ್ತು ಲಾಭದಾಯಕವಾದುದೆಂದು ತೀರ್ಮಾನಮಾಡಲಾಗಿದೆ. ಹಾಗೂ ಒಂದುವೇಳೆ ಮಾಡುವುದಾದರೆ, ಸಿಲ್ಟ್ ತೆಗೆಸುವುದಕ್ಕಿಂತ ಏರಿಯನ್ನು ಉಟಾವಣೆ ಮಾಡತಕ್ಕದ್ದು ಸೂಕ್ತವೆಂದು ಭಾವಿಸುತ್ತೇನೆ. ಡೀ ಸಿಲ್ಟ್ ಮಾಡುವುದರಿಂದ ಕೆರೆಗಳ ಕೆಪ್ಯಾಸಿಟಿಯೇನೂ ಉತ್ತಮಗೊಳ್ಳುವುದಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ (ಹೊನ್ನಾಳಿ).—ಜನರು ಮುಂದೆ ಬಂದು ತಾವಾಗಿಯೇ ಕಂಟ್ರಿಬ್ಯೂಷನ್ ಮೊಬಲಗನ್ನು ಕೊಡುತ್ತೇವೆಂದು ಹೇಳಿದರೆ ಅಂಥವರ ಕೆಲಸಗಳನ್ನು ಬೇಗ ಕೈಗೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದೊಂದೇ ಪ್ರಾಮುಖ್ಯವಲ್ಲ. ಇನ್ನೂ ಅನೇಕ ವಿಷಯಗಳನ್ನು ಆಲೋಚಿಸಬೇಕಾಗಿರುತ್ತದೆ.

ಇನ್ನು ಶ್ರೀ ಕೆ. ಪುಟ್ಟಸ್ವಾಮಿಯವರು ಒಂದು ಜಹಗೀರಿನ ವಿಚಾರ ನೆತ್ತಿ ಅಲ್ಲಿಗೆ ನೀರಾವರಿ ಅನುಕೂಲತೆ ಕಲ್ಪಿಸಬೇಕೆಂದು ಹೇಳಿದರು. ಆದರೆ ಅದು ಜಹಗೀರುದಾರರಿಗೆ ಸಂಬಂಧಪಟ್ಟ ವಿಷಯ. ಅವರು ಅವರ ಭಾಗದ ಕೋಟಾ ಕೊಡಲು ಮುಂದೆ ಬಂದರೆ ಆಗ ಸರ್ಕಾರದವರೂ ತಮ್ಮ ಕೋಟಾ ಕೊಡಲು ಅನುಕೂಲವಾಗುತ್ತದೆ. ಇನ್ನು ಪೀಹಳ್ಳಿಯ ಬಳಿ 6 ಕೋಟಿ ರೂಪಾಯಿಗಳ ಕೆಲಸವನ್ನು ಕೈಗೊಳ್ಳಬೇಕೆಂದಿದ್ದೇವೆ. ಈ ಸರ್ಕಾರ ನೀರಾವರಿ ಕಾಮಗಾರಿಗಳಿಗಾಗಿ ಹಣ ಖರ್ಚು ಮಾಡುತ್ತಿರುವಂತೆ ಬೇರೆ ಯಾವ ಸರ್ಕಾರವೂ ಮಾಡುತ್ತಿಲ್ಲ ಮತ್ತು ಮಾಡಿಲ್ಲ. ಕೈಗೊಳ್ಳತಕ್ಕ ಕೆಲಸ ಸಾಧ್ಯವಾದುದಾಗಿದ್ದರೆ ಅದನ್ನು ಖಂಡಿತ ಕೈಗೊಳ್ಳುತ್ತೇವೆ.

10–30 A.M.

ಶ್ರೀ ಎಸ್. ಸಿದ್ದಪ್ಪನವರು ಮಲೆನಾಡಿನಲ್ಲಿರತಕ್ಕ ಸಣ್ಣ ಕೆರೆಗಳ ಜೀರ್ಣೋದ್ಧಾರದ ವಿಷಯದಲ್ಲಿ ಹೆಚ್ಚು ಆಸಕ್ತಿವಹಿಸಬೇಕೆಂದು ಹೇಳಿದರು. ಅವರ ಕಾಲದಲ್ಲಿ ಒಂದು ಸ್ಕೀಮಿತ್ತು. ಮೈನರ್ ಟ್ಯಾಂಕ್ ರೆಸ್ಟೊರೇಷನ್ ರೇಂಜ್ ಎಂದು ಮಾಡಿಕೊಂಡು ಅದರ ಪರಿಣಾಮವಾಗಿ ಮಲೆನಾಡಿನಲ್ಲಿ ಅನೇಕ ಕೆರೆಗಳ ಜೀರ್ಣೋದ್ಧಾರದ ಕೆಲಸ ನಡೆದಿತ್ತು. ಈಗಲೂ ಆ ಸ್ಕೀಮನ್ನೇ ಅಕ್ಷರಶಃ ಪಾಲಿಸಿಕೊಂಡು ಬಾರದಿದ್ದರೂ, ಹೆಚ್ಚು ಕಡಮೆ ಅದನ್ನೇ ಗಮನದಲ್ಲಿಟ್ಟುಕೊಂಡು ಕೆಲಸವನ್ನು ನಡೆಸುತ್ತಿದ್ದೇವೆಂದು ಹೇಳಬಲ್ಲೆ.

ಶ್ರೀಮಾನ್ ಸೋಲೂರು ಸಿದ್ದಪ್ಪನವರು ಮಾಗಡಿ ತಾಲ್ಲೂಕಿನ ಕೆರೆಗಳನ್ನು ಪ್ರಸ್ತಾಪಿಸಿದರು. ಈಗ ಅವರು ಸಭೆಯಲ್ಲಿಲ್ಲ. ಸಾಕಾದಷ್ಟು ಮಟ್ಟಿಗೆ ಆ ಕೆರೆಗಳಿಗೂ ಹೆಚ್ಚು ಗಮನವನ್ನು ಕೊಡಲಾಗುತ್ತದೆಂದು ತಿಳಿಸಬಯಸುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ದಾವಣಗೆರೆಯಲ್ಲಿರತಕ್ಕ ಕೆರೆಗಳ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಆ ಕೆರೆಗಳ ವಿಚಾರದಲ್ಲೂ ಕೂಡ ಸರ್ಕಾರದವರು ಗಮನ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಒಟ್ಟಿನಲ್ಲಿ ಹೇಳುವುದಾದರೆ, ಸರ್ಕಾರದವರು ನೀರಾವರಿ ಕಾಮಗಾರಿಗಳ ವಿಷಯದಲ್ಲಿ ಈ ಸಾಲಿನಲ್ಲಿ ಹೆಚ್ಚಿನ ಆಸಕ್ತಿ ವಹಿಸಿಕೊಳ್ಳುವವರಾಗಿದ್ದಾರೆ. 1952–53ನೆಯ ಸಾಲಿಗೆ 70ಲಕ್ಷ ರೂಪಾಯಿಗಳನ್ನು ಬರೀ ಪಿ. ಎಂ. ಎಫ್. ಕಾಮಗಾರಿಗಳಿಗಾಗಿಯೇ ಸರ್ಕಾರದವರು ಒದಗಿಸಿದ್ದಾರೆ. ಇತರ ದೊಡ್ಡ ಕಾಮಗಾರಿಗಳಿಗೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ ಈ ವರ್ಷವೂ ಕೂಡ, ಇಷ್ಟೊಂದು ಹಣದ ಅಭಾವವಿದ್ದರೂ ಕೂಡ ಹೆಚ್ಚು ಹಣವನ್ನು ಸರ್ಕಾರದವರು ಒದಗಿಸಿದ್ದಾರೆ. ಸರ್ಕಾರದವರ ಗಮನ ಈ ವಿಚಾರದಲ್ಲಿ ಯಾವಾಗಲೂ ಇದ್ದೇ ಇದೆಯೆಂದು ನಾನು ಒತ್ತಿಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. CHAIRMAN (Sri K. V. SHANKARA GOWDA).—The question is :—

"That a sum not exceeding Rs. 27,05,000 be granted to the Government to defray the charges which will come in course of payment during the year ending 31st day of Mach 1954, in respect of 'I.N.E.D. Works for which capital accounts are kept—Working Expenses'."

The motion was adopted.

The House will now rise for Lunch and meet again at 11 O'clock.

The Assembly adjourned for Lunch at Thirty-three Minutes past Ten of the Clock and re-assembled at Seven Minutes past Eleven of the Clock.

[MR. DEPUTY SPEAKER (SRI R. CHENNIGARAMIAH) in the Chair.]

DEMAND No. 38—WORKING EXPENSES (ELECTRICITY SCHEMES).

XLI. RECEIPTS FROM ELECTRICITY SCHEMES.

Mr. DEPUTY SPEAKER.—Motioned moved :

"That a sum not exceeding Rs. 1,37,42,000 be granted to the Government to defray the charges which will come in course of payment during the year ending 31st day of March 1954, in respect of 'Receipts from Electricity Schemes—Working Expenses'."

ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್ (ಟಿ.-ನರಸೀಪುರ).—ಅಧ್ಯಕ್ಷರೇ, ಈ ಇಲಾಖೆಯ ವಿಷಯದಲ್ಲಿ ಈ ಸಭೆಯ ಗಮನಕ್ಕೆ ಬಹಳ ಮುಖ್ಯವಾದ ಕೆಲವು ವಿಷಯಗಳನ್ನು ತರಬೇಕೆಂದು ಬಯಸುತ್ತೇನೆ. 1953–54ನೆಯ ಸಾಲಿಗೆ ಈ ಇಲಾಖೆಯಿಂದ 222 ಲಕ್ಷ ರೂಪಾಯಿಗಳ ವರಮಾನವಾಗಿ 137·42 ಲಕ್ಷ ರೂಪಾಯಿಗಳು ಖರ್ಚಾಗಿ 84·58 ಲಕ್ಷ ರೂಪಾಯಿಗಳು ಲಾಭ ಬಂದಿದೆಯೆಂದು ತೋರಿಸಿದೆ. ವಾಸ್ತವವಾಗಿ ನೋಡಿದರೆ, ಈ ಲಾಭ ನಿಜವಾದ ಲಾಭವಲ್ಲ. ಏಕೆಂದರೆ ಈ ಇಲಾಖೆಗೆ ಬಂಡವಾಳ ಹಾಕಿರತಕ್ಕದರ ಮೇಲೆ ನ್ಯಾಯವಾಗಿ ಏನು ಬಡ್ಡಿ ಕೊಡಬೇಕೋ ಆ ಬಡ್ಡಿಯನ್ನು ಲಾಭದಲ್ಲಿ ಕಳೆದಿಲ್ಲ. ಆ ರೀತಿ ಬಡ್ಡಿಯನ್ನು ಕಳೆಯುವುದಾದರೆ ಈ ಇಲಾಖೆಯ ವ್ಯವಹಾರದಿಂದ 1953–54ನೆಯ ಸಾಲಿಗೆ ಏನೂ ಲಾಭವೇ ಬರುವುದಿಲ್ಲವೆನ್ನಬಹುದು. ಹೇಗೆಂದರೆ, 1945-46ನೆಯ ಸಾಲಿನಲ್ಲಿನ ಆಸ್ತಿಪಟ್ಟಿಯ ಪ್ರಕಾರ ಈ ಇಲಾಖೆಯಲ್ಲಿ 9 ಕೋಟಿ ರೂಪಾಯಿಗಳ ಆಸ್ತಿಯಿತ್ತು. ಈ ಆಸ್ತಿಗೆ ಆ ಸಾಲಿನಲ್ಲಿ ಸೇಕಡ 7ರಷ್ಟು ವರಮಾನ ಬರುತ್ತಿತ್ತು. 1946–47ನೆಯ ಸಾಲಿನಲ್ಲಿ 976·7 ಲಕ್ಷ ರೂಪಾಯಿಗಳ ಆಸ್ತಿಗೆ 76·24 ಲಕ್ಷ ರೂಪಾಯಿಗಳೆಂದರೆ ಸೇಕಡ 7·6 ಲಾಭವಿತ್ತು.

1947-48ರಲ್ಲಿ ಕಾಂಗ್ರೆಸ್ ರಾಜ್ಯ ಬಂದ ಕೂಡಲೆ ಅದರ ಬಂಡವಾಳ 11·6 ಕೋಟಿಗೆ ಜಾಸ್ತಿಯಾಯಿತು, ಲಾಭ ಬಂದದ್ದು ಮಾತ್ರ ಸೇಕಡ 5½ ಆಯಿತು. ಈ ವರ್ಷದ ಲಾಭವನ್ನು ನೋಡುವುದಾದರೆ ಸೇಕಡಾ 3½ ಮಾತ್ರ. ಹೀಗೆ ಸೇಕಡ 6 ಲಾಭ ಬರುತ್ತಿದ್ದುದು ಈಗ ಸೇಕಡ 3½ಗೆ ಇಳಿದಿದೆ. ಇದರಿಂದ ಈ ಇಲಾಖೆಯ ಕಾರ್ಯ ಅಷ್ಟು ಲಾಭದಾಯಕವಾಗಿಲ್ಲವೆಂದು ಹೇಳುವುದಕ್ಕೆ ಸಮರ್ಥನೆ ದೊರೆಯುತ್ತದೆ.

ಇದಕ್ಕೆ ಕಾರಣ ಇಷ್ಟೆ. ಸಿಬ್ಬಂದಿ ಖರ್ಚು ಈ ಸಾಲಿಗೆ ಸುಮಾರು ಸೇಕಡ 25 ಆಗುತ್ತದೆ. ಆದ್ದರಿಂದ ಲಾಭ ಜಾಸ್ತಿ ಬರಬೇಕಾದರೆ ಸಿಬ್ಬಂದಿ ಖರ್ಚನ್ನು ಕಡಮೆಮಾಡುವುದು ಒಂದು. ಎರಡನೆಯದಾಗಿ, ಈ ಎರಡು ಮೂರು ವಿಷಯಗಳಿಗೆ ಗಮನಕೊಡಬೇಕು. ನೀವೀಗ ಕೈಗಾರಿಕೋದ್ಯಮಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಧರ ಬಹಳ ಕಡಮೆ. ಮನೆಗೆ ಬಳಸುವ ದೀಪಕ್ಕೆ ಯೂನಿಟ್ಟಿಗೆ ನಾಲ್ಕಾಣೆ ಮಾಡಿರುವುದು ಬಹಳ ದುಬಾರಿ. ಇದನ್ನು ಒಂದಾಣೆಗೆ ಇಳಿಸಿ ಕೈಗಾರಿಕೋದ್ಯಮಗಳಿಗೆ ಕೊಡುವ ದರವನ್ನು ಯಾವ ರೀತಿ ಹೆಚ್ಚಿಸಬಹುದೋ ಅದನ್ನು ಸ್ವಲ್ಪ ಯೋಚನೆ ಮಾಡಿ ಮಾಡಿದರೆ ಈ ಇಲಾಖೆಯ ಕಾರ್ಯ ಕಲಾಪಗಳ ಚೆನ್ನಾಗಿ ನಡೆಯುವುದಲ್ಲದೆ ಒಳ್ಳೆಯ ಲಾಭವೂ ಬರುವಂತಾಗುತ್ತದೆ.

ಈ ಇಲಾಖೆಯಲ್ಲಿ ಇನ್ನೊಂದು ಅನಾನುಕೂಲವಿದೆ. ಪ್ರತಿಯೊಬ್ಬ ವಿದ್ಯುಚ್ಛಕ್ತಿ ಉಪಯೋಗಿಸುವವನೂ ತಾನು ವಿದ್ಯುಚ್ಛಕ್ತಿಯನ್ನು ಉಪಯೋಗಿಸಲು ಪ್ರಾರಂಭ ಮಾಡಿದ ದಿನದಿಂದ 2 m·m·d. ಯನ್ನು ಕೊಡಬೇಕೆಂದಿದೆ. ಇದರ ಅರ್ಥವೇನೆಂದರೆ, ಉಪಯೋಗಿಸುವವನು ಆಯಾ ತಿಂಗಳಿಗೆ ನ್ಯಾಯವಾಗಿ ಕೊಡಬೇಕಾಗುವ ಬಿಲ್ಲಿನ ಎರಡರಷ್ಟು ಮೊಬಲಗನ್ನು ಡಿಪಾಜಿಟ್ಟು ಕೊಡಬೇಕು. ಈ ಹಣಕ್ಕೆ ಯಾವ ಬಡ್ಡಿಯೂ ಕೊಡುವುದಿಲ್ಲ. ಇದೇ ಲಕ್ಷಾಂತರ ರೂಪಾಯಿಗಳು ಇಲಾಖೆಯಲ್ಲಿ ಉಳಿದಿವೆ. ಅದನ್ನು ವಾಪಸು ಪಡೆಯುವುದು ಮನೆಯ ಆಯುಸ್ಸು ಮುಗಿದ ಮೇಲೆಯೇ. ಆದ್ದರಿಂದ ಮನೆ ಎಷ್ಟು ದಿವಸ ಇರುತ್ತದೆಯೋ ಅಷ್ಟು ದಿವಸಗಳು ಈ ಹಣ ಇಲಾಖೆಯಲ್ಲೇ ಉಳಿದಿರುತ್ತದೆ. ವಿದ್ಯುಚ್ಛಕ್ತಿಯ ಉಪಯೋಗ ಹೆಚ್ಚಿದ ಹಾಗೆ ಈ ಡಿಪಾಸಿಟ್ ಮೊಬಲಗು ಕೂಡ ಹೆಚ್ಚುತ್ತಾ ಹೋಗುತ್ತದೆ. ನಮಗೆಲ್ಲಾ ಗೊತ್ತಿರುವ ಹಾಗೆ, ಈ ಇಲಾಖೆಯವರು ತಮಗೆ ಬರಬೇಕಾದ ಹಣವನ್ನು ಯಾವಾಗಲೂ ಬಿಡದೆ ಕಡ್ಡಾಯವಾಗಿ ವಸೂಲು ಮಾಡುತ್ತಾರೆ. ಒಂದು ದಿವಸ ತಡವಾದರೂ fuse ತೆಗೆದುಬಿಡುತ್ತಾರೆ. ಇಂಥ ಶಿಸ್ತಿನಿಂದ ಕೆಲಸಮಾಡುವ ಇಲಾಖೆಯಲ್ಲಿ ಈ ರೀತಿ ಮುಂಗಡ ಡಿಪಾಜಿಟ್ ಇಟ್ಟುಕೊಳ್ಳುವುದಕ್ಕೆ ಕಾರಣವೇನು? ಅದಕ್ಕೆ ಕಾರಣ ಕೊಟ್ಟಿಲ್ಲ. ಇದನ್ನು ವಾಪಸು ಮಾಡುವುದಲ್ಲದೆ ಕಮ್ಮಿದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಿ ಸಹಾಯ ಮಾಡಬೇಕಾದದ್ದು ಆವಶ್ಯಕವೆಂದು ಹೇಳುತ್ತೇನೆ.

ಎರಡನೆಯದಾಗಿ, ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಪದ್ಧತಿಯಲ್ಲಿ ಈಗ ಸರ್ಕಾರದವರು ಅನುಸರಿಸಿರುವ ರೀತಿ ಬಹಳ ಅತೃಪ್ತಿಕರ. ಕಾರಣ, ತಾವು ನೂರಕ್ಕೆ ಸೇಕಡ 7½ಯಂತೆ ಲಾಭ ಬಂದರೆ ಮಾತ್ರ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳಿ ನೂರಾರು ಎಸ್ಟಿಮೇಟುಗಳನ್ನು ಮಂಜೂರು ಮಾಡದೆ ನಿಲ್ಲಿಸಿದ್ದೀರಿ. ಇದೇ ನಿರೀಕ್ಷಣೆಯಲ್ಲಿದ್ದರೆ, ನಿಮಗೆ ಯಾವ ಗ್ರಾಮದಿಂದಲೂ ನೂರಕ್ಕೆ 7 ರೂಪಾಯಿಗಳ ಲಾಭ ಬರುವುದೇ ಇಲ್ಲ. ಏಕೆಂದರೆ, ಗ್ರಾಮಪಂಚಾಯಿತಿಯವರು ಗ್ರಾಮಕ್ಕೆ ಬೇಕಾದ 4-5 ದೀಪಗಳಿಗೆ ಮಾತ್ರ ಶಿಫಾರಸ್ಸುಮಾಡುತ್ತಾರೆ. ಇದರ ಜೊತೆಗೆ ಊರಿನಲ್ಲಿರುವ ಹತ್ತಾರು ಹಣವಂತರು ದೀಪ ತೆಗೆದುಕೊಳ್ಳುವರೇ ಹೊರತು ಬಡ ಬಗ್ಗರು ಯಾರೂ ತೆಗದುಕೊಳ್ಳುವುದಿಲ್ಲ. ಬೀದಿ ದೀಪಗಳಿಗೆ ನೀವು ಹೆಚ್ಚಿಗೆ ಸುಂಕವನ್ನೂ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನೂರಕ್ಕೆ 7½ ರೂಪಾಯಿಗಳನ್ನು ಕೊಡಬೇಕೆಂದು ಒತ್ತಾಯ ಮಾಡುತ್ತಾ ಇರುವುದಾದರೆ, ಅನೇಕ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುವುದಕ್ಕಾಗುವುದೇ ಇಲ್ಲ. ಹಿಂದೆ ಇದೇ ರೀತಿ 7½ ಕೊಡಬೇಕೆಂಬ ಒತ್ತಾಯ ಇರುತ್ತಿರಲಿಲ್ಲ. ಹಿಂದೆ ಸೇಕಡ 2, 3, ಆದಾಯ ಇರುವ ಸಂದರ್ಭಗಳಲ್ಲೂ ಕೊಟ್ಟಿದ್ದಾರೆ. ಆದ್ದರಿಂದ ತಾವೂ ಕೂಡ ಈ ರೀತಿ ಸೇಕಡ 7½ ಇರಬೇಕೆಂಬ ನಿಗದಿಯನ್ನು ತೆಗೆದುಹಾಕಿ ಗ್ರಾಮಾಂತರಗಳಿಗೆ ಹೆಚ್ಚಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುವುದಲ್ಲದೆ ದರಗಳನ್ನೂ ತಗ್ಗಿಸಬೇಕೆಂದು ಹೇಳಬೇಕಾದದ್ದು ಒಂದು ಅಂಶ.

ಅಲ್ಲದೆ, ಸ್ಥಳೀಯ ಸಂಸ್ಥೆಗಳಿಗೆ ಬೀದಿ ದೀಪಗಳಿಗಾಗಿ ವಿಧಿಸುತ್ತಿರುವ ದರಗಳು ಈಗ ಬಹಳ ಹೆಚ್ಚು. ಅವರು ಬೀದಿ ದೀಪಗಳನ್ನು ಕೇಳಿದ ಕೂಡಲೆ, ಅಗ್ರಿಮೆಂಟ್ ಪ್ರಕಾರ ನೂರಕ್ಕೆ ಹತ್ತರಂತೆ ಬರುವ ರೀತಿಯಲ್ಲಿ ದರವನ್ನು ಗೊತ್ತುಮಾಡಿದ್ದೀರಿ. ಇದು ಬಹಳ ದುಬಾರಿ. ಇದರಿಂದ ಅನೇಕ ಸ್ಥಳೀಯ ಸಂಸ್ಥೆಗಳಿಗೆ ಬಹಳ ತೊಂದರೆಯಾಗಿದೆ. ಅದೂ ಅಲ್ಲದೆ ಅಗ್ರಿಮೆಂಟ್ ಆದ ಮೇಲೆ ಅನೇಕ ಸಂದರ್ಭಗಳಲ್ಲಿ ನಾನಾ ಕಾರಣಗಳಿಂದ ವಿದ್ಯುಚ್ಛಕ್ತಿ ಸರಬರಾಯಿ ನಿಂತರೂ, ಪ್ರತಿದಿವಸವೂ ಸಹ ಗಂಟೆಗಟ್ಲೆ ನಿಂತರೂ ಸ್ಥಳೀಯ ಸಂಸ್ಥೆಗಳಿಗೆ ಯಾವ ರೀತಿಯಲ್ಲೂ ರಿಯಾಯಿತಿ ಸಿಕ್ಕುತ್ತಿಲ್ಲ. ಆದ್ದರಿಂದ ಸ್ಥಳೀಯ ಸಂಸ್ಥೆಗಳಿಂದ ಈ ರೀತಿ ಸೇಕಡ 10 ರಂತೆ ದರ ಗೊತ್ತುಮಾಡಿ ತೆಗೆದುಕೊಳ್ಳುವುದನ್ನು ತಪ್ಪಿಸಬೇಕೆಂದು ಸೂಚಿಸುತ್ತೇನೆ.

ವ್ಯವಸಾಯದ ಕೆಲಸಕ್ಕೆ ಪಂಪುಗಳನ್ನು ಕೊಡತಕ್ಕ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಅನೇಕ ಗ್ರಾಮಗಳಲ್ಲಿ ವ್ಯವಸಾಯಕ್ಕೆ ಪಂಪುಗಳನ್ನಿಡಬೇಕೆಂಬ ಕುತೂಹಲ ರೈತರಲ್ಲಿ ಬಹಳವಾಗಿದೆ. ಅದರಲ್ಲಿಯೂ ಟಿ. ನರಸೀಪುರದ ತಾಲ್ಲೂಕಿನಲ್ಲಿ ಕಾವೇರಿ, ಕಪಿಲಾ ಎರಡು ಹೊಳೆಗಳಿರುವುದರಿಂದ ಜನ ಬಾಹುಳ್ಯವಿರುವ ಹಳ್ಳಿಗಳನೇಕವಿವೆ. ವಿಶಾಲವಾದ, ಫಲವತ್ತಾದ ಜಮೀನಿದೆ. ಅನೇಕ ಕಡೆ ಮಳೆಯಿಂದ ಮಾತ್ರ ಫಸಲಾಗುತ್ತಿದೆ. ತಮಗೇ ಗೊತ್ತಿರುವ ಹಾಗೆ ಕಳೆದ ಹತ್ತಾರು ವರ್ಷಗಳಿಂದ ಮಳೆ ಕಾಲಕ್ಕೆ ಸರಿಯಾಗಿ ಬಾರದೆ ಫಸಲಿಲ್ಲದೆ ಜನರು ಕಷ್ಟಪಡುತ್ತಿದ್ದಾರೆ. ಅಂಥ ಕಡೆ ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ಪಂಪುಗಳನ್ನಿಟ್ಟು ವ್ಯವಸಾಯ ಮಾಡಲು ರೈತರು ಕುತೂಹಲದಿಂದಿದ್ದಾರೆ. ಇಂಥ ಸಂದರ್ಭದಲ್ಲಿ ಅವರಿಗೆ ಪ್ರೋತ್ಸಾಹ ಕೊಟ್ಟು ಹೆಚ್ಚು ಬೆಳೆ ಬೆಳೆಯುವುದಕ್ಕೆ ಸಹಾಯ ಮಾಡಬೇಕೆಂದು ಹೇಳುವುದು ನನ್ನ ಉದ್ದೇಶ.

*ಶ್ರೀ ಎಸ್. ಸಿದ್ದಪ್ಪ (ಮಾಗಡಿ):—ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯನ್ನು ಬಹಳ ಕಡೆ ಒದಗಿಸಿರೋಣವಾಗಿದೆ. ಆದರೆ ಮಾಗಡಿ ತಾಲ್ಲೂಕಿನಲ್ಲಿ ಮಾಗಡಿ ಟೌನ್ಬಿಟ್ಟು ಇನ್ನು ಆರು ಹೋಬಳಿಗಳಲ್ಲಿ ಈ ಸೌಲಭ್ಯ ಒದಗಿಲ್ಲ. ಅನೇಕ ಸಾರಿ ಈ ಪ್ರಶ್ನೆ ಬಂದು ಅದಕ್ಕೆ ಅಂದಾಜು ಕೂಡ ಮಂಜೂರಾಗಿ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಹರ್ತಿ, ಗುಡೇಮಾರನಹಳ್ಳಿ, ಸೋಲೂರು ಮುಂತಾದ ಹಳ್ಳಿಗಳಿಂದ

(ಶ್ರೀ ಎಸ್. ಸಿದ್ದಪ್ಪ.)

ಅನೇಕ ಅರ್ಜಿಗಳು ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಕೊಡಬೇಕೆಂದು ಬಂದಿವೆ. ಇನ್ನೂ ಒದಗಿಸಿಲ್ಲ. 1940 ನೆಯ ಇಸವಿಯಿಂದ ಸುಮಾರು ಹನ್ನೆರಡು ವರ್ಷಗಳಿಂದಲೂ ಈ ಹೋಬಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂಬ ಬೇಡಿಕೆಯನ್ನು ಸರ್ಕಾರದ ಮುಂದೆ ಇಡುತ್ತಲೇ ಇದ್ದಾರೆ. ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಈ ವಿದ್ಯುಚ್ಛಕ್ತಿಯ ಯೋಜನೆ ಪಟ್ಟಣಗಳ ಅಕ್ಕಪಕ್ಕದಲ್ಲಿ ಹೆಚ್ಚಾಗುತ್ತಿದೆಯೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಪಟ್ಟಣಗಳಿಗೆ ದೂರವಾಗಿರುವ ಗ್ರಾಮಾಂತರಗಳಲ್ಲಿ ವಾಸಮಾಡುವ ಜನರಿಗೆ ಈ ಸಹಾಯವನ್ನೊದಗಿಸುವುದು ತಮ್ಮ ಕರ್ತವ್ಯ. ಗ್ರಾಮಾಂತರದ ಜನರು ಹೆಚ್ಚು ಬೆಳೆ ಬೆಳೆದರೆ ಆಹಾರ ಸಮಸ್ಯೆ ಕಡಮೆಯಾಗುವುದೆಂಬುದನ್ನು ಎಲ್ಲರೂ ಮನಗಂಡಿದ್ದಾರೆ. ಆದುದರಿಂದ ಯಾವಯಾವ ಸಂದರ್ಭದಲ್ಲಿ ಯಾರಿಗೆ ಸಹಾಯವಾಗಬೇಕೋ ಅದನ್ನು ತಿಳಿದು ಈ ಯೋಜನೆಯನ್ನು ಕಾರ್ಯಗತ ಮಾಡಬೇಕು. ಸ್ವಾಮಿ, ನಾನು ಇನ್ನು ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಮಾಗಡಿ ತಾಲ್ಲೂಕು ಹರ್ತಿ, ಸೋಲೂರು, ಗುಡೇಮಾರನಹಳ್ಳಿ, ತಿಪ್ಪಸಂದ್ರ ಈ ಗ್ರಾಮಗಳಿಗೆ ಕೊಡಲು ಯೋಜನೆ ಸಿದ್ಧವಾಗಿದೆ; ಅವರಿಗೆ ಒದಗಿಸಬೇಕು. ನಾಲ್ಕೈದು ತಿಂಗಳ ಹಿಂದೆ ನಾನು ಕೇಳಿದಾಗ ಸಾಮಾನುಗಳು ಬಂದಿಲ್ಲವೆಂದು ಆ ಇಲಾಖೆಯವರು ಹೇಳಿದರು. ಈಗಲಾದರೂ ಸಿದ್ಧವಾಗಿರುವ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಆ ಗ್ರಾಮಗಳ ಜನರಿಗೆ ಹೆಚ್ಚು ಸೌಲಭ್ಯವನ್ನು ಕೊಡಬೇಕೆಂದು ಹೇಳಿ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

*Sri J. MOHAMED IMAM (Jagalur).—I want to make a few observations on this demand. Sir, prior to 1950, the State was getting its power from Sivasamudram and Shimsha Hydro-Electric Works. At that time, both these stations put together were generating power to the tune of 64,000 K.W. and the revenue at that time was between 70 and 80 lakhs. After the Mahatma Gandhi Hydro-Electric Works came into existence, the total amount of power generated is about 1,20,000 K.W. So, nearly the total quantity of power generated is double of what was being generated at Sivasamudram and Shimsha. When we depended only on Sivasamudram and Shimsha Hydro-Electric Works, we were getting a revenue of, on an average between 70 and 80 lakhs. Logically and naturally every body expects that with the help of Mahatma Gandhi Electric Works, our revenue should be increased to at least double this amount. But I know we are still in the initial stage and the entire power has to be made use of and made use of profitably. I understand that the power generated at Jog is likely to be exhausted when the blast furnaces at Bhadravati come into existence and when power is given to the neighbouring provinces of Madras and Bombay. Then the Hydro-Electric Works at Jog will not have any surplus power for the use of the State.

First, I would like to urge on the Government to see why we are not deriving a proportionate revenue when compared to what we were deriving before Mahatma Gandhi Hydro-Electric Works came into existence. That is a very important factor and Government must investigate as to why we are not getting proportionate revenue from the Mahatma Gandhi Electric Works as compared with the revenue we were getting before. We have now to think seriously of the policy of Hydro-Electric Works. The Chief Electrical Engineer, a few days ago in a Press Statement, gave us to understand that from 1954-55 or 1955-56, Mysore will not have surplus power from the power generated at Mahatma Gandhi Electric Works at Jog because all that power will be utilised elsewhere. We have got any number of programmes like the Machine Tool Factory and various other factories. He said at his Press Conference that the State of Mysore will be in an awkward position because they will not have any power. It is, therefore, quite necessary to think of additional and extra electric schemes. Incidentally we must divert out attention to Honnemaradu and Mekedatu projects and also increase the output of power at Shimsha. As it looks, the Government of India are reluctant to undertake the Honnemaradu work. Government should impress on the Government of India the urgent necessity of undertaking this important work. Otherwise we will be left in the lurch. It must be made clear to the Government of India that they have been starting a number of big factories like the

Machine Tool Factory and various other factories and they have also developed the Hindustan Aircraft Factory Works and the Telephone Factory, which need a good block of power. A major portion of power generated at Jog Electric Works will be diverted towards these big factories and the State of Mysore will have to suffer. So this is a very important point upon which the Government would have to think seriously and urge upon the Government of India the urgent and immediate necessity of undertaking the Honnemaradu Project. That is No. 1.

Secondly, I do not know what happened to the Mekadatu Project. The then Minister of Electricity undertook a number of visits to Madras and was in consultation with the Government of Madras. I also remember that in one of the Budgets, a token provision was made for this. Of late, I think this has been given up. I would like to know from Government the exact position, whether it is possible for us to undertake Mekadatu, or whether they have completely given it up.

AN HON'BLE MEMBER.—Please refer to the Planning Commission Report.

Sri J. MOHAMED IMAM.—If we look at the previous statement of the Minister—they estimated that the work will be taken up in the course of the year and for the Honnemaradu Project, there was a token provision in the Budget. But we have not heard anything further in the matter. Perhaps this may be within the resources of our State, *i.e.*, increasing the output of power at Shimsha. Shimsha is a place, where for the same machinery, we can get a greater quantity of electricity. There was a programme for the gradual transfer of machinery from Sivasamudram to Shimsha. This is also a scheme which must be pursued. I must state that unless the Government of Mysore seriously consider starting fresh hydro-electric works, after some time we may find ourselves in a great difficulty. Our progress will suffer and all our development schemes will suffer.

I must also allude briefly to the Rural Development Scheme and also to the policy of Government towards development of irrigation. Very recently, the Government of Mysore announced that they would enhance the rate on power utilised for irrigation purposes. Till now, the rate charged was six pies per unit. I think they are seriously considering to increase the rate from six pies to one anna. This is a very retrograde step and it will hit the ryots very hard. The income they get in return will be very small. If you really increase the rate from six pies to one anna, I can tell you, you will be coming in the way of growing more food. Many of the ryots will have to give up, because it will be unworkable. I therefore appeal to Government not to enhance the rate, but to leave it at six pies.

Similarly, Sir, they have enhanced the rate on commercial crops to 1½ annas. They have increased the minimum also to two rupees per H.P. The previous Government had levied a uniform rate on all irrigation pumps irrespective of the fact whether they were utilised for commercial crops or for agricultural crops. But two years ago, they made a sudden change and made a distinction as pumps devoted for irrigation and as pumps entirely meant for growing agricultural crops. They enhanced the rate from six pies to one anna in respect of irrigation pumps and now they propose 1½ annas. This will be a great hardship to the growers of commercial crops. I may submit in this connection—from my personal experience—that an irrigation pump is made use of not only for irrigation of crops but also to grow commercial crops. It may be.

Sri A. BHEEMAPPA NAIK.—What is the difference between irrigation and commercial crops?

Sri J. MOHAMED IMAM.—Sorry. I will say food crops. A ryot may devote three-fourths of his land to

(SRI J. MOHAMED IMAM.)

grow food crops and one-fourth he may devote to grow commercial crops. In all such cases the Government insist that the ryot must pay at the rate of 1½ annas and they also insist that the ryot must pay a minimum of two rupees. This will be discouraging the raiyats. After all we know that growing of commercial crops is an industry which has to be encouraged, and is necessary for every raiyat to grow commercial crops to a certain extent.

11-30 A.M.

So far as irrigation pumps are concerned, I would appeal to the Government to adopt that system levying a uniform rate of six pies per unit and also to decrease the minimum. It often happens that during certain seasons the pump will not be made use of. For example, during rainy season the pump is kept idle and in the interests of the raiyats I would appeal to the Government to reconsider their decision and levy a uniform rate of six pies per unit and also to decrease the minimum from two rupees to one rupee per horse power. During summer he will have to work 20 days in a month and in the rainy season he will have to work one or two days in a month. There are many months in which the consumption will amount to 10 or 15 horse power and he will have to pay Rs. 20 or Rs. 30. So taking all these things into consideration, I request the Government to take a sympathetic attitude.

Sri R. ANANTARAMAN (Chamarajpet).—Sir, keeping in view that the supply of electricity in Bangalore City is not satisfactory, I wish to offer some suggestions while speaking on the main demand.

You are aware, Sir, that Bangalore City is the biggest customer. The total receipt from Bangalore City and Civil Station is 82.6 lakhs, nearly a crore. What I am surprised to find is that the care and attention are not given to this biggest customer. In fact you are aware that there are many complaints against the Electrical Department in particular and you find that nearly ten days in a month in Bangalore City the lighting system will be out of order. Though complaints are made to the Electrical Department they do not attend to immediate needs of the Bangalore City people.

You are aware that only two years back the Electrical Department was charging about Rs. 22 per year per street light. Now the royalty has been enhanced to Rs. 30. The Bangalore Corporation no doubt objected to this but they would not help but comply with the request of the Electrical Department since cost of production has gone up. The Corporation was for some time satisfied that the supply of electricity would be in good order. But of late they find the Electrical Department is not bestowing proper attention and care. I do not know why the Superintendent of the Electrical Department or the Chief Electrical Engineer are not paying proper attention. Another fact I wish to bring to your kind notice is that the Electrical Department are charging something towards ornamental lights also. For example, for every mercury light they charge about Rs. 300 and I am told that the consumption of power is very much less and is not proportionate to the charge levied. Also for every ordinary ornamental light they charge about Rs. 60. Even there, the consumption is less. I do not know why they are charging so much towards these ornamental lights. Keeping in view these things, I wish to say that the department is not working satisfactorily. The department always complain that they are short of transformers and the Hon'ble Minister was pleased to say in connection with a certain question that they are getting transformers from Calcutta and also they are importing transformers from outside. Even then I do not know why they are complaining that they are short of transformers. I hope that at least in future the department

will bestow proper care and attention towards this biggest customer. Nearly one crore of rupees has been collected from Bangalore City and I hope that they will bestow more care and attention hereafter.

(*A few Hon'ble Members rose*).

Mr. DEPUTY SPEAKER.—I make a suggestion here that those who have already spoken on the previous demand should accommodate others to speak on this demand.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ನಾನು ಈ 38ನೆಯ " ಡಿಮ್ಯಾಂಡ್ "ನ ಮೇಲೆ ಒಂದು ಕತ್ತರಿ ನಿರ್ಣಯವನ್ನು ಸಹ ಕಳುಹಿಸಿದ್ದೆನು. ಈಗ ನನಗೆ ಮಾತನಾಡಲು ಕೊಟ್ಟಿರತಕ್ಕ ಅವಕಾಶದಲ್ಲಿ ನಾನು ಸಮಗ್ರವಾಗಿ ಎಲ್ಲ ವಿಚಾರಗಳನ್ನೂ ತಿಳಿಸಲು ಅವಕಾಶವಿಲ್ಲ. ಆದುದರಿಂದ ನಾನು ಈ ಮಾನ್ಯ ಸಭೆಯ ಹೆಚ್ಚಿನ ಅವಕಾಶವನ್ನು ತೆಗೆದುಕೊಳ್ಳಲು ಇಷ್ಟ ಪಡದೆ, ಕೇವಲ ಮುಖ್ಯವಾದ ಒಂದೆರಡು ವಿಷಯ ಗಳನ್ನು ಮಾತ್ರ ತಿಳಿಸಿ ನಾನು ಭಾಷಣವನ್ನು ಮುಗಿಸ ಬೇಕೆಂದಿದ್ದೇನೆ.

ಈ ಯೋಜನೆಗಳ ಬಗ್ಗೆ ಮಾತನಾಡುವಾಗ ಈ ವಿದ್ಯುಚ್ಛಕ್ತಿ ಬಾಬಿನಿಂದ ಹೇಗೆ ಉತ್ಪತ್ತಿಯನ್ನು ಹೆಚ್ಚು ಮಾಡಿಕೊಳ್ಳಬಹುದೆಂಬ ಬಗ್ಗೆ ನಾನು ಈಗಾಗಲೇ ಸರ್ಕಾರಕ್ಕೆ ತಿಳಿಸಿದ್ದೇನೆ. ಆದರೆ ಇತ್ತೀಚೆಗೆ ಸರ್ಕಾರದವರು ಕೈಗಾರಿಕೆಗಳವರಿಗೆ ಇತರ ದರವನ್ನು ಏರಿಸಿದಂತೆ ವ್ಯವಸಾಯೋದ್ಯಮಗಳಿಗೆ, ಅದರಲ್ಲೂ ಈ ಅಹಾರ ಸಾಮಗ್ರಿಗಳ ಬಗ್ಗೆ ಬೆಳೆಯತಕ್ಕ ಬೆಳೆಗಳನ್ನೆಲ್ಲ ಕಮರ್ಷಿಯಲ್, ಬೆಳೆಗಳೆಂದು ಪರಿಗಣಿಸಿ, ಆ ಬಗ್ಗೆ ವಿದ್ಯುಚ್ಛಕ್ತಿಯ ದರವನ್ನು ಹೆಚ್ಚಿಸಿರುವುದು ಸರಿಯಲ್ಲವೆಂಬುದನ್ನು ತಿಳಿಸಲು ನಾನೀಗ ಎದ್ದುನಿಂತಿದ್ದೇನೆ. ತಾವು ಆರು ಕಾಸು ಇದ್ದುದನ್ನು ಒಂದಾಣೆಗೂ, ಒಂದಾಣೆ ಇದ್ದುದನ್ನು ಒಂದಾಣೆ ಆರು ಕಾಸಿಗೂ 8 ಆಣೆ ಇದ್ದುದನ್ನು 1 ರೂಪಾಯಿಗೂ, ಒಂದು ರೂಪಾಯಿ ಇದ್ದುದನ್ನು ಮೂರು ರೂಪಾಯಿಗಳಿಗೂ ಏರಿಸಿದ್ದೀರಿ.

ಶ್ರೀ ಎ. ಭೀಮಪ್ಪನಾಯಕ್.—ಇವರು ದರಗಳನ್ನು ಹಾಗೆ ಹೆಚ್ಚಿಸಿದಾಗ ಮೊದಲು ಕೊಡಲಿಕ್ಕೆ ತಯಾರಾಗಿದ್ದವರೂ ನೀವೆ!

ಶ್ರೀ ವಿ. ಮಸಿಯಪ್ಪ.—ಈ ವ್ಯವಸಾಯೋದ್ಯಮದಲ್ಲಿ ತೊಡಗಿರುವ ಅದರಲ್ಲೂ ಈ ಆಹಾರ ಧಾನ್ಯಗಳನ್ನು ಬೆಳೆಯತಕ್ಕ, ರೈತನು ಕೊಡುತ್ತಿದ್ದ 6 ಕಾಸುಗಳ ದರವನ್ನು ಒಂದಾಣೆಗೆ ಏರಿಸಿರುವುದು ನಿಜವಾಗಿಯೂ ರೈತನಿಗೆ ಬಹಳ ಅನ್ಯಾಯ ಮಾಡಿದಂತಾಗಿದೆ. ಆತನನ್ನು ಸುಧಾರಣೆ ಮಾಡತಕ್ಕ ಸಂಭವವೇ ಇಲ್ಲ. ಸಾಧಾರಣವಾಗಿ ಆತನು ಒಂದು ಬೆಳೆಯನ್ನು ತೆಗೆಯಬೇಕಾದರೆ ಆತನ ಖರ್ಚುವೆಚ್ಚಗಳೇನೆಂಬುದನ್ನು ಯಾರೂ ಆಲೋಚಿಸಿದಂತೆ ಕಾಣುತ್ತಿಲ್ಲ. ಒಬ್ಬ ರೈತನಿಗೆ ಒಂದು ಎಕರೆ ಪ್ರದೇಶದಲ್ಲಿ ಭತ್ತದ ಬೆಳೆಯನ್ನು ತೆಗೆಯಬೇಕಾಗಿದ್ದರೆ ಆತನಿಗೆ ಒಂದು ಯೂನಿಟ್ ನೀರು ಬೇಕಾಗುತ್ತದೆಂದು ಪಿ. ಡಬ್ಲ್ಯು. ಡಿ ಯವರೇ ತಿಳಿಸಿರುತ್ತಾರೆ. ಒಂದು ಯೂನಿಟ್ ನೀರು ಎಂದರೆ 15 ಲಕ್ಷ 68 ಸಾವಿರ ಗ್ಯಾಲನ್ ನೀರಾಗುತ್ತದೆ. ಹೀಗೆ ಬಳಸತಕ್ಕ ನೀರಿನಲ್ಲಿ ಬಿಸಿಲು, ಗಾಳಿ ಮತ್ತು ಪರ್ಕ್ಯುಲೇಷನ್ ಇತ್ಯಾದಿಗಳಿಗೆಲ್ಲಾ ಸುಮಾರು 5 ಲಕ್ಷ 68 ಸಾವಿರ ಗ್ಯಾಲನ್ ನೀರು ಲುಕ್ಸಾನಾಗುತ್ತದೆಂದು ಭಾವಿಸಿದರೆ, ಇನ್ನುಳಿಯತಕ್ಕ 10 ಸಾವಿರ ಗ್ಯಾಲನ್ ನೀರು ಆತನಿಗೆ 4 ತಿಂಗಳ ಕಾಲ ಉಪಯೋಗಕ್ಕೆ ಖಚಿತವಾಗಿ ಬೇಕಾಗುತ್ತದೆ. ಹೀಗೆ ಒಬ್ಬ ರೈತನಿಗೆ ಒಂದು ಬೆಳೆಗಾಗಿ ತೆಗೆದುಕೊಳ್ಳತಕ್ಕ 10 ಸಾವಿರ ಗ್ಯಾಲನ್ ನೀರನ್ನು ಸೇದುವುದಕ್ಕೆ ಎಷ್ಟು ವಿದ್ಯುಚ್ಛಕ್ತಿ ಖರ್ಚಾಗುತ್ತದೆಂಬುದನ್ನು ಲೆಕ್ಕಹಾಕಿ ನೋಡಬೇಕಾಗಿರುತ್ತದೆ. ಒಂದು 5 H.P. ಎಲೆಕ್ಟ್ರಿಕ್ ಮೋಟಾರಿನಿಂದ ಒಂದು ಘಂಟೆ ಕಾಲ ಕೆಲಸಮಾಡಿ, 4 ಕಿಲೋವಾಟ್ಸ್ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿದರೆ, 2,800 ಗ್ಯಾಲನ್ ನೀರನ್ನು ಎತ್ತಬಹುದು. ಈ ರೀತಿ 4 ಕಿಲೋವಾಟ್ಸ್ ವಿದ್ಯುಚ್ಛಕ್ತಿ ಖರ್ಚಿನಿಂದ 2,800 ಗ್ಯಾಲನ್ ನೀರನ್ನು ಎತ್ತಬಹುದೆಂದು ವಿದ್ಯುಚ್ಛಕ್ತಿ ಇಲಾಖೆಯವರೇ ತಿಳಿಸಿದ್ದಾರೆ. ಮತ್ತು ಅವರು ಇದನ್ನು ಒಪ್ಪಿಕೊಂಡಿದ್ದಾರೆ. ಹೀಗೆ ಒಂದು 5 H.P. ಮೋಟಾರಿನಿಂದ ಒಂದು ಘಂಟೆಯಲ್ಲಿ 4 ಕಿಲೋವಾಟ್ಸ್ ಅಥವಾ ಒಂದು ಯೂನಿಟ್ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ 2,800 ಗ್ಯಾಲನ್ ನೀರನ್ನು ಎತ್ತಬಹುದೆಂಬ ಲೆಕ್ಕಾಚಾರದ ಪ್ರಕಾರ ನಾಲ್ಕು ತಿಂಗಳ ಒಂದು ಭತ್ತದ ಬೆಳೆಗೆ 1,430 ಯೂನಿಟ್ ವಿದ್ಯುಚ್ಛಕ್ತಿ ಬೇಕಾಗುತ್ತದೆಂದು ಗೊತ್ತಾಗುತ್ತದೆ. ಹೀಗೆ ಗೊತ್ತಾದ ಬಳಿಕ ಒಂದು ಯೂನಿಟ್ಟಿಗೆ 6 ಕಾಸುಗಳ ಪ್ರಕಾರ ಲೆಕ್ಕ ಹಿಡಿದರೆ ಅದು ಹೆಚ್ಚು ಕಡಮೆ 45 ರೂಪಾಯಿಗಳಾಗುತ್ತದೆ. ಈ ಮೊಬಲಗನ್ನು ಈಗಿನ ರೇಟಿನಂತೆ ಡಬ್ಬಲ್ ಮಾಡಿದರೂ 90 ರೂಪಾಯಿಗಳಾಯಿತು. ಈ 90 ರೂಪಾಯಿಗಳು ಒಂದು ಭತ್ತದ ಬೆಳೆಗೆ ಒಂದು ಎಕರೆಗೆ ಆಗುವ ಖರ್ಚು. ಆದರೆ ಈ ಖರ್ಚಿನ ಜೊತೆಗೆ ವ್ಯವಸಾಯಗಾರನಾಗಿರತಕ್ಕವನು ಒಂದು ಭತ್ತದ ಫಸಲನ್ನು ತೆಗೆದುಕೊಳ್ಳಬೇಕಾದರೆ ಆ ಕಾಲದಲ್ಲಿ ಇನ್ನೂ ಏನೇನು ಖರ್ಚು ವೆಚ್ಚಗಳನ್ನು ಮಾಡಬೇಕಾಗಿರುತ್ತದೆಯೆಂಬುದನ್ನು ನಾವೀಗ ಆಲೋಚನೆ ಮಾಡಬೇಕಾಗಿದೆ. ವ್ಯವಸಾಯ ಮಾಡತಕ್ಕವನು ಎಲೆಕ್ಟ್ರಿಕ್ ಮೋಟಾರಿಗೆ ದುಡ್ಡು, ಪಂಪಿಂಗ್ ಸೆಟ್ಟಿಗೆ ದುಡ್ಡು, ಇವುಗಳಿಗೆ ಹಾಕಿರುವ ಬಂಡವಾಳಕ್ಕೆ ಬಡ್ಡಿ, ಇವುಗಳನ್ನೆಲ್ಲಾ ಸೇರಿಸಿದರೆ ಆತನಿಗೆ ಏನು ಉಳಿತಾಯವಿದೆ? ಆದರೆ ಇದು ಇಷ್ಟಕ್ಕೇ ಮುಗಿಯಲಿಲ್ಲ. ನಾವು ಆತನ ಎತ್ತುಗಳ ಕಷ್ಟ, ಆತನ ಮನೆಮಕ್ಕಳು ಮಾಡತಕ್ಕ ಕಷ್ಟ, ಈ ಕಷ್ಟಕ್ಕೆಲ್ಲಾ ಕೂಲಿ ಹಾಕಿದರೆ ಇನ್ನೂ ಏಷ್ಟಾಗಬಹುದು!

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ತಾವು ಬರಿ 5 ಲಕ್ಷ ಚಿಲ್ಲರೆ ಗ್ಯಾಲನ್ ನೀರು ಪೋಲು ಆಗುತ್ತದೆಂದು ತಿಳಿಸಿದಿರಿ. ಅದಕ್ಕೆ ಎವಾಪರೇಷನ್ ಆಗತಕ್ಕ ನೀರಿನ ಭಾಗವನ್ನೂ ಸೇರಿಸಬೇಕಾಗಿತ್ತಲ್ಲವೆ?

ಶ್ರೀ ವಿ. ಮಸಿಯಪ್ಪ.—ಕೆರೆ, ಬಾವಿ, ನದಿ ಮತ್ತು ಚಾನಲ್ ವಿನಾ ಬೇರೆ ನೀರಿಗೆ ಎವಾಪೊರೇಷನ್ ಬರುವುದಿಲ್ಲ. ಹಾಗೆ ತಮ್ಮ ಲೆಕ್ಕದ ಪ್ರಕಾರ ಹೋದರೆ ಈ ನೀರಿನ ಲುಕ್ಸಾನು ಇನ್ನೂ ಹೆಚ್ಚಾಗಿಯೇ ಆಗುತ್ತದೆ.

I am arguing under circumstances which are most favourable to Government. ಹೀಗೆ ಒಂದು ಹಗುರವಾಗಿ ಲೆಕ್ಕಹಾಕಿ ನೋಡಿದರೂ ಇದರಿಂದ ರೈತನಿಗೆ ಎಷ್ಟು ಅನ್ಯಾಯವಾಗುತ್ತಿದೆ ಎಂಬುದು ಗೊತ್ತಾಗುತ್ತದೆ.

ಇದರ ಜೊತೆಗೆ ರೈತನು ಇನ್ನೂ ಹೆಚ್ಚಿಗೆ ಖರ್ಚುಗಳನ್ನು ಮಾಡಬೇಕಾದ ಅಗತ್ಯವಿದ್ದೇ ಇದೆ. ಒಂದು ಎಕರೆಗೆ ಕನಿಷ್ಠಪಕ್ಷ ಆತನು 100 ಹೊರೆ ಹೊಂಗೆ ಸರಬನ್ನು ಹಾಕಬೇಕಾಗುತ್ತದೆ. ಹೊಂಗೆ ಸರಬು ಎಂದರೆ ಹಸುರೆಲೆ ಗೊಬ್ಬರ. ಇದು ಸಾಧ್ಯವಿಲ್ಲದಿದ್ದರೆ, ಕನಿಷ್ಠ

(ಶ್ರೀ ವಿ. ಮಸಿಯಪ್ಪ.)

ಪಕ್ಷ 15-20 ಗಾಡಿ ಗೊಬ್ಬರ, ಇಲ್ಲವೇ 30 ಮಣ ಕಡಲೇಕಾಯಿ ಹಿಂಡಿ, ಇಲ್ಲವೇ 8 ಮಣ ಸೂಪರ್ ಫಾಸ್ಫೇಟ್ ಹಾಕಬೇಕಾಗುತ್ತದೆ. ಇದಕ್ಕಾಗಿ ಅತ 100-125 ರೂಪಾಯಿಗಳನ್ನು ಖರ್ಚು ಮಾಡಬೇಕು.

ಇನ್ನು ಎರಡನೆಯದಾಗಿ ಬೀಜ. ತಮ್ಮ ಹೊಸ ಯೋಜನೆಯ ಪ್ರಕಾರ, ಎಂದರೆ, ಆ ಜಪಾನ್ ವ್ಯವಸಾಯದ ಪದ್ಧತಿಯ ಪ್ರಕಾರ ಹೋದರೆ ಕೊಂಚ ಬೀಜದ ಕಾಳಿನ ಉಳಿತಾಯವಾಗಬಹುದು. ಆದರೆ ತಾವು ಎಕರೆಗೆ 15 ಸೇರು ಸಾಕೆಂದು ಹೇಳಬಹುದು. ನಾವು ಸಾಧಾರಣವಾಗಿ ಎಕರೆ ಒಂದಕ್ಕೆ 40-50 ಸೇರು ಬೀಜದ ಭತ್ತ ಹಾಕುತ್ತಿದ್ದೇವೆ. ಆದರೆ ಎಲ್ಲಿ ಪೆರಿನಿಯಲ್ ಸಪ್ಲೈ ಆಫ್ ವಾಟರ್ ಇರುತ್ತದೆಯೋ ಅಲ್ಲಿ ಕೊಂಚ ಕಮ್ಮಿ ಹಾಕಿದರೂ ಹಾಕಬಹುದೋ ಏನೋ. ಅಂತೂ ಈ ಬೀಜದ ಭತ್ತಕ್ಕೆ 40 ಸೇರಿಗೆ 15ರೂಪಾಯಿ ಕೊಡಬೇಕಾಗುತ್ತದೆ. ನಾಟೀ ಹಾಕುವುದಕ್ಕೆ ಎಕರೆಗೆ 15-16 ರೂಪಾಯಿ ಖರ್ಚಾಗುತ್ತದೆ. ಕಳೆಗಾಗಿ 10 ರೂಪಾಯಿ, ಕೊಯ್ಲು ಇತ್ಯಾದಿಗಳಿಗೆ 20-25 ರೂಪಾಯಿ ಖರ್ಚಾಗುತ್ತದೆ. ಕಣ, ಹುಲ್ಲು ವಗೈರೆಗಳಿಗೆ 25-30 ರೂಪಾಯಿಗಳನ್ನು ಖರ್ಚು ಮಾಡಬೇಕು. ಹೀಗೆ ಈ ಖರ್ಚು ವೆಚ್ಚಗಳನ್ನೆಲ್ಲಾ ಸೇರಿಸಿದರೆ ಒಬ್ಬ ರೈತನಿಗೆ ಒಂದು ಭತ್ತದ ಬೆಳೆಯನ್ನು ತೆಗೆಯಬೇಕಾಗಿದ್ದರೆ ಆತನಿಗೆ ಸುಮಾರು 275 ರೂಪಾಯಿಗಳ ಖರ್ಚು ಬರುತ್ತದೆ. ಇಷ್ಟು ದುಡ್ಡು ಖರ್ಚು ಮಾಡಿದನಂತರ ಆತನು ಬೆಳೆಯುವುದನ್ನು ಲೆಕ್ಕಹಾಕಿ ನೋಡಿದರೆ, ಒಂದು ಎಕರೆಗೆ 15 ಪಲ್ಲಾದಿಂದ ಹಿಡಿದು 25-30 ಪಲ್ಲಗಳವರೆಗೂ ಬೆಳೆಯಬಹುದು.

Mr. DEPUTY SPEAKER.—You need not argue, elaborately on that basis.

ಶ್ರೀ ವಿ. ಮಸಿಯಪ್ಪ.—ಇನ್ನು ಕೆಲವು ಕಡೆ ಎಕರೆಗೆ 6-8 ಪಲ್ಲ ಸಹ ಬೆಳೆಯಾಗುವುದಿದೆ. ನಾವು ಎಕರೆಗೆ ಸರಾಸರಿ 10-15 ಪಲ್ಲದ ಪ್ರಕಾರ ಲೆಕ್ಕಾಹಾಕಿ ನೋಡುವುದಾದರೆ, ಪಲ್ಲ ಒಂದಕ್ಕೆ 25 ರೂಪಾಯಿಗಳಂತೆ 375 ರೂಪಾಯಿ ಪರಮಾವಧಿ ಆಗಬಹುದು. ಹೀಗೆ ಆತನಿಗೆ ಒಂದು ಬೆಳೆಗೆ 375 ರೂಪಾಯಿಗಳಾಯಿತು. ಇವರಲ್ಲಿ 285 ರೂಪಾಯಿಗಳು ಅವನು invest ಮಾಡಿರುವುದನ್ನು ತೆಗೆದರೆ 90 ರೂಪಾಯಿಗಳು ಉಳಿಯುತ್ತವೆ, ಅಷ್ಟೆ. ಇದೂ ಯೂನಿಟ್ಟಿಗೆ ಅರ್ಧಾಣೆಯಂತೆ, ಯೂನಿಟ್ಟಿಗೆ ಒಂದಾಣೆಯಂತೆ ಲೆಕ್ಕಹಾಕಿದರೆ 45 ರೂಪಾಯಿಗಳು ಮಾತ್ರ ಉಳಿದಂತಾಗುತ್ತದೆ. ಇದರಿಂದ ಅವನ ಜೀವನವೆತ್ತ, ಅವನ ದನಕರುಗಳಿಗೆತ್ತ, ಅವನು ಹಾಕಿರುವ ಬಂಡವಾಳಕ್ಕೆ ಬಡ್ಡಿಯೆತ್ತ, ಇದನ್ನು ಯೋಚನೆ ಮಾಡಿದರೆ, ಈ ರೀತಿಯಾಗಿ ದರವನ್ನು ಹೆಚ್ಚು ಮಾಡುವುದು ರೈತನಿಗೆ ಎಷ್ಟು ತೊಂದರೆಯನ್ನುಂಟುಮಾಡುತ್ತದೆಂಬುದನ್ನು ತಾವು ತೀಕ್ಷ್ಣವಾಗಿ ಮತ್ತು ದೀರ್ಘವಾಗಿ ಆಲೋಚನೆ ಮಾಡಬೇಕು.

ನನ್ನ ಮಾನ್ಯ ಮಿತ್ರರಾದ ಶ್ರೀ ಭೀಮಪ್ಪನಾಯಕರು ಹೇಳಿದ ಒಂದು ಅಂಶ ನಿಜ. ಮಾನ್ಯ ಸಚಿವರು ಹಿರಿಯೂರು ತಾಲ್ಲೂಕಿಗೆ ಬಂದಾಗ ಅವರು, ಸರ್ಕಾರದವರು ಒಂದು ಹಾರ್ಸ್ ಪವರ್‌ಗೆ ಒಂದು ಸಾವಿರ ರೂಪಾಯಿ ಬರುವ ಸಂದರ್ಭದಲ್ಲಿ ಮಾತ್ರ ಪಂಪುಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ, ಅದಕ್ಕೆ ಕಡಮೆ ಬರುವ ಪಕ್ಷಕ್ಕೆ ಸಾಧ್ಯವಾಗುವುದಿಲ್ಲ, ಪ್ರತಿಯೊಬ್ಬರೂ ವಿದ್ಯುಚ್ಛಕ್ತಿ ಬೇಕು—ವಿದ್ಯುಚ್ಛಕ್ತಿ ಬೇಕು ಎಂದು ಕೇಳುವಾಗ ನೀವು ಸ್ವಲ್ಪವೂ ಹೆಚ್ಚಿಗೆ ಕೊಡುವುದಕ್ಕೊಪ್ಪದೆ ಹೋದರೆ ಹೇಗೆ ಎಂದು ಅಲ್ಲಿನ ಜನರ ಮುಂದಿಟ್ಟಾಗ, ಅಗ್ಗೆ ಮಂತ್ರಿಗಳ ಎದುರಿಗಿದ್ದ ಜನ—ಅವರೆಲ್ಲರೂ ಕನಿಷ್ಠಪಕ್ಷ ವರ್ಷಕ್ಕೆ ಒಂದಾದರೂ money crop ಬೆಳೆದುಕೊಳ್ಳುವಂಥವರೇ ಆಗಿದ್ದರು—ಆ ಜನರು ಯೂನಿಟ್ಟಿಗೆ ಒಂದಾಣೆ ಕೊಡುವುದಕ್ಕೂ ಅಭ್ಯಂತರವಿಲ್ಲವೆಂದು ಹೇಳಿರಬಹುದು. ಆದರೆ ಅವರ ಮಾತನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ಎಲ್ಲಾ ರೈತರೂ ಅದಕ್ಕೆ ಒಪ್ಪಿದ್ದಾರೆಂದೂ ಭಾವಿಸುವುದು ಸರಿಯಲ್ಲ. ಆದ್ದರಿಂದ ಶ್ರೀಮಾನ್ ಭೀಮಪ್ಪನಾಯಕರು ಹೇಳಿದ ಮಾತನ್ನು ಕೇಳಿದರೆ, ನನಗೊಂದು ಚಿತ್ರ ಜ್ಞಾಪಕಕ್ಕೆ ಬರುತ್ತದೆ. ಸಾಮಾನ್ಯವಾಗಿ ಬಸ್ಸುಗಳಲ್ಲಿ ಪ್ರಯಾಣ ಮಾಡುವಾಗ ನಾವು ನೋಡುತ್ತಿರುತ್ತೇವೆ, ಕೆಲವರು ಬಸ್ಸಿನೊಳಗೆ ಸರಿಯಾಗಿ ಕುಳಿತುಕೊಂಡವರಿರುತ್ತಾರೆ, ಇನ್ನು ಕೆಲವರು ಬಸ್ಸಿನಲ್ಲಿ ಕೂರಲು ಜಾಗವಿಲ್ಲದೆ ನಿಂತುಕೊಂಡಿರುತ್ತಾರೆ. ಕುಳಿತಿರುವವನಿಗೆ ಎಂದಿಗೂ ಆ ನಿಂತಿರುವವನ ಕಷ್ಟವನ್ನು ನೋಡಿ ಅವನಿಗೂ ಸ್ವಲ್ಪ ಜಾಗ ಕೊಡಬೇಕೆಂದೆನಿಸುವುದೇ ಇಲ್ಲ. ಹಾಗೆಯೇ, ಬಸ್ಸಿನ ಹೊರಗಡೆ ನಿಂತಿರುವ ಪ್ರಯಾಣಿಕ ತನಗೆ ಬಸ್ಸಿನಲ್ಲಿ ನಿಲ್ಲುವುದಕ್ಕಾದರೂ ಸ್ವಲ್ಪ ಜಾಗ ಕೊಡಿ ಎಂದರೂ, ಬಸ್ಸಿನಲ್ಲಿ ಕುಳಿತಿರುವವನು ಅವನಿಗೆ ಜಾಗ ಮಾಡಿಕೊಡಲು ಒಪ್ಪುವುದಿಲ್ಲ. ಅಂಥ ಪ್ರಯಾಣಿಕನನ್ನು ಹೇಗಾದರೂ ಮಾಡಿ ಒಳಗೆ ಕೂರಿಸಿಬಿಟ್ಟ ಮೇಲೆ, ಅವನೇ ತನ್ನಂತೆಯೇ ಇದ್ದ ಇನ್ನೊಬ್ಬ ಪ್ರಯಾಣಿಕನ ಸ್ಥಿತಿಯನ್ನು ಮರೆತು ಅವನನ್ನು ಹೊರದೂಡುವುದಕ್ಕೆ ಪ್ರಯತ್ನಿಸುತ್ತಾನೆ. ಅದೇ ರೀತಿ, ಈಗ ಶ್ರೀಮಾನ್ ಭೀಮಪ್ಪನಾಯಕರು ಬಸ್ಸಿನಲ್ಲಿ ಆಗಲೇ ಸ್ಥಳ ದೊರಕಿಸಿಕೊಂಡು ಕುಳಿತುಕೊಂಡವರಾಗಿದ್ದಾರೆ. ಅವರಂಥವರೇ ಕೆಲವು ಜನ ಮಂತ್ರಿಗಳೆದುರಿಗೆ ಆ ರೀತಿ ಹೇಳಿರಬಹುದು ಅಷ್ಟೆ. ಅವರು ಕೊಟ್ಟಿರತಕ್ಕ ಅರ್ಜಿಯಿಂದರೇ ಈ ಅರ್ಥ ಆಗುತ್ತದೆ. ಅವರು ಹೇಳಿದ್ದಾರೆ ಆರು ಕಾಸಿನಿಂದ, ಒಂದಾಣೆಗೆ ದರವನ್ನೇರಿಸಿದರೂ ಅಭ್ಯಂತರವಿಲ್ಲ; ಏಕೆಂದರೆ ರೈತ ಎರಡು ಬೆಳೆ ಬೆಳೆಯುತ್ತಾನೆ, ಅದರಲ್ಲಿ ಒಂದು ಬೆಳೆ Money Crop ಆಗಿರುತ್ತದೆ ಎಂದು ವಾದ ಮಾಡಿದ್ದಾರೆ. ಇದರಿಂದ ಎರಡು ಬೆಳೆ ಬೆಳೆಯುತ್ತಿದ್ದವರು ಒಂದಾಣೆ ಕೊಡಬಹುದೆಂದು ಹೇಳಿದಂತಾಯಿತೇ ಹೊರತು ಎಲ್ಲರೂ ಒಂದಾಣೆ ಕೊಡಬಹುದೆಂದು ಒಪ್ಪಿದ ಹಾಗಾಗಲಿಲ್ಲ. ಹೀಗೆ ಸಂಸ್ಥಾನದ ಯಾವುದೋ ಮೂಲೆಯಲ್ಲಿರತಕ್ಕ ಕೆಲವರು ಹೇಳಿದಾಕ್ಷಣ, ಅದನ್ನೇ ನ್ಯಾಯವೆಂದು ಹೇಳಿ ಈ ರೀತಿ ಎಲ್ಲರಿಗೂ ಜಾಸ್ತಿಮಾಡಿ ಬಿಡುವುದು ಸರಿಯೇ? ಸರ್ಕಾರದವರಿಗೇನೋ 'ಆದಾಯ ಬರಬೇಕು, ನಿಜ, ಆದರೆ ವಿಮರ್ಶೆ ಮಾಡದೆ' ಹೀಗೆ ಜಾಸ್ತಿ ಮಾಡುವುದು ಸರಿಯಲ್ಲ. ಅಂಕಿ ಅಂಶಗಳನ್ನು ತರಿಸಿ ನಿಜವಾಗಿಯೂ ರೈತನಿಗೆ ಹೆಚ್ಚಿಗೆ ಲಾಭ ಬರುತ್ತದೆಂದು ಗೊತ್ತಾದರೆ ಖಂಡಿತ ರೈತನನ್ನು ಬಿಡಬೇಡಿ. ಹಾಗಿಲ್ಲದೆ ರೈತನಿಗೆ ನಿಜವಾಗಿಯೂ ನೋವಾಗುವ ಸಂಧರ್ಭವಿದ್ದರೆ ಅವನನ್ನು ದಯೆಯಿಂದ ಕಾಣುವುದು ತಮ್ಮ ಕರ್ತವ್ಯ. ಆ ಕರ್ತವ್ಯ ಪರಿಪಾಲನೆ ತಾವು ಮಾಡಬೇಕು.

ಈ ವಿತಾರದಲ್ಲಿ ಪ್ರಶ್ನೋತ್ತರಗಳ ಸಂದರ್ಭದಲ್ಲಿ ತಾವು ಒಂದು ಮಾತು ಹೇಳಿದಿರಿ. ಈ ಹೆಚ್ಚಿನ ದರಗಳನ್ನು ಆಗಲೇ ವಿಧಿಸುವುದಕ್ಕೆ ಸೂಚನೆ ಕೊಟ್ಟಿದ್ದೀರಾ ಎನ್ನುವುದಕ್ಕೆ ಉತ್ತರವಾಗಿ The matter is under consideration ಎಂದು ಹೇಳಿದಿರಿ. ಆದರೆ ಮೊನ್ನೆ ತಾನೆ ಇಲ್ಲಿನ ಶಾಸನಸಭಾ ಸದಸ್ಯರು ಊರಿಗೆ ಹೋದವರು ವಾಪಸು ಬಂದು ತಿಳಿಸಿದ್ದಾರೆ ಇಲ್ಲಿಂದಾ

ಗಲೇ ಸೂಪರಿಂಟೆಂಡೆಂಟರವರಿಗೆ ಮತ್ತು ಅಗ್ರಿಕಲ್ಚರಲ್ ಇನ್ಸ್ಪೆಕ್ಟರವರಿಗೆ 'They should take steps to collect from the first of April at the rate of one anna per unit' ಎಂದು instructions ಕಳುಹಿಸಿದ್ದಾರೆ ಎಂದು. ಅದೇನಾದರೂ ನಿಜವಾಗಿದ್ದಲ್ಲಿ ತಾವು ಕೊಟ್ಟ ಜವಾಬಿಗೆ ಏನು ಅರ್ಥ ಮಾಡಬೇಕೆಂಬುದೇ ಕಷ್ಟವಾಗುತ್ತದೆ.

ಅಲ್ಲದೆ, ಎಲೆಕ್ಟ್ರಿಸಿಟಿಯನ್ನು ನಮ್ಮ ಮೈಸೂರು ಸಂಸ್ಥಾನದಲ್ಲಿ ಉತ್ಪಾದನೆ ಮಾಡಲು ಪ್ರಾರಂಭ ಮಾಡಿದ ದಿನದಿಂದಲೂ ನೀವು ಕೊಟ್ಟಿರುವ ಇಷ್ಟೊಂದು ಉತ್ತೇಜನದಿಂದ ಈಗ ನಮ್ಮ ಸಂಸ್ಥಾನದಲ್ಲಿರುವ ಪಂಪುಗಳ ಸಂಖ್ಯೆಯಾದರೂ ಎಷ್ಟು! ಕೇವಲ 1,797.

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲ; 4,897

Sri V. MASIYAPPA.—Even that is not a very big number; when there are thosands of wells in the State and a number of river valleys where water can be easily lifted without much difficulty and much investment, I think 4,000 and odd is not a very great number.

ಆದ್ದರಿಂದ, ಯಾವ ರೀತಿಯಿಂದಲೂ ತಾವು ವ್ಯವಸಾಯಕ್ಕೆ ಈಗ ಕೊಟ್ಟಿರತಕ್ಕ ಉತ್ತೇಜನ ಸಾಕಾಗಿದೆಯೆಂದು ಹೇಳುವ ಹಾಗಿಲ್ಲ. ಹಾಗಿರುವಲ್ಲಿ ಈ ರೀತಿ ಈ ದರ ಮುಂದುವರಿದರೆ ವ್ಯವಸಾಯಾಭಿವೃದ್ಧಿಯನ್ನು ತಾವು ಕುಂಠಿತಗೊಳಿಸಿದಂತಾಗುತ್ತದೆ. ಆಹಾರದ ವಿಷಯದಲ್ಲಿ ಸ್ವಾವಲಂಬಿಗಳಾಗಬೇಕೆಂದು ತಮ್ಮ ಗುರಿ ಏನಿದೆಯೋ ಅದು ಮುರಿದುಬಿದ್ದಂತೆಯೇ ಸರಿ. ಮುಂದಿನ ಸಾಲಿಗೆ ಕೇಂದ್ರಸರ್ಕಾರದಿಂದ ವ್ಯವಸಾಯದ ಸಂಬಂಧದಲ್ಲಿ ಮೂರು ಕಾಸಿನ ಸಾಲವನ್ನು ಕೇಳುವ ಅವಶ್ಯಕತೆಯೂ ಇರುವುದಿಲ್ಲ. ಅನೇಕರು ಹಾಕಿರತಕ್ಕ ಪಂಪುಗಳನ್ನು ನಿಲ್ಲಿಸುವ ಸಂದರ್ಭವೂ ಸನ್ನಿಹಿತವಾಗಿದೆಯೆಂದಿಟ್ಟುಕೊಳ್ಳಬಹುದು. ಈಗಾಗಲೇ ರೈತರಿಗೆ ಒಂದು ಭಯ ಹುಟ್ಟಿದೆ. ಆದ್ದರಿಂದ ಚೆನ್ನಾಗಿ ಆಲೋಚನೆ ಮಾಡಿ ಮುಂದಿನ ಹೆಜ್ಜೆ ಇಡಬೇಕೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ನನಗಿಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎ. ಭೀಮಪ್ಪನಾಯಕ್.—ಚಿತ್ರದುರ್ಗದವರೇ ಇಬ್ಬರು ಮಾತನಾಡಬಾರದೆಂದು ವಿರೋಧಪಕ್ಷದ ಕಡೆಯಿಂದ ಒಂದು ಆಕ್ಷೇಪಣೆ ಬಂತು. ಇದು ಬಹಳ ಆಶ್ಚರ್ಯವೇ ಸರಿ!

ಸ್ವಾಮಿ, ವಿದ್ಯುಚ್ಛಕ್ತಿಯ ವಿಚಾರವಾಗಿ ಮಾತನಾಡುವಾಗ ಶ್ರೀಮಾನ್ ಇಮಾಂ ಸಾಹೇಬರು ಕೆಲವು ವಿಷಯಗಳನ್ನು ತಿಳಿಸಿ ಮೈಸೂರು ಸರ್ಕಾರದವರು ಹೊನ್ನೆಮರಡು, ಮೇಕೆದಾಟು ಮುಂತಾದ ವಿದ್ಯುತ್ ಯೋಜನೆಗಳನ್ನು ಕೈಕೊಳ್ಳಬೇಕೆಂದು ಹೇಳಿದರು. ಮೈಸೂರು ದೇಶದಲ್ಲಿ ಇತರ ಎಲ್ಲಾ ಕಾರ್ಯಗಳಿಗೂ ವಿನಿಯೋಗಿಸಲ್ಪಡತಕ್ಕ ಹಣವನ್ನು ಇದಕ್ಕೇ ಕೊಟ್ಟು ಅವುಗಳನ್ನು ನಿಲ್ಲಿಸಿದರೂ ನನಗೆ ಸಂತೋಷವೇ. ಕಾರಣವೇನೆಂದರೆ, ಶ್ರೀಮಾನ್ ಇಮಾಂ ಸಾಹೇಬರು ಜನರನ್ನು ಸ್ವಲ್ಪ ಹೆದರಿಸದೆ ಇದ್ದರೆ, ವಿರೋಧಪಕ್ಷದ ನಾಯಕರಾಗಿ ಸರ್ಕಾರದಲ್ಲಿ ದುಡ್ಡಿಲ್ಲ, ನಮ್ಮ ಸರ್ಕಾರದ ಹಣಕಾಸಿನ ಸ್ಥಿತಿ ಕೆಟ್ಟುಹೋಗಿದೆ, ಎಂದೆಲ್ಲಾ ಬಹಿರಂಗವಾಗಿ ಈ ಸಭೆಯಲ್ಲಿ ಹೇಳದೆ ಇದ್ದರೆ, ಕೋಟ್ಯಾಂತರ ರೂಪಾಯಿಗಳನ್ನಾದರೂ ಸಾಲವಾಗಿ ತಂದು ಇದನ್ನು ಮಾಡಬಹುದು. ತಾವೊಂದು scare ಉಂಟು ಮಾಡದೆ ಸುಮ್ಮನಿದ್ದರೆ ಎಷ್ಟು ಸಾಲವಾದರೂ ತಂದು ಹಾಕಬಹುದು. ಇದರ ಮೇಲೆ ಎಷ್ಟು ದುಡ್ಡು ಹಾಕಿದರೂ ಅಷ್ಟೂ ಸದ್ವಿನಿಯೋಗವೇ ಎಂದು ನನ್ನ ಭಾವನೆ. ಆದರೆ ಒಂದು ವಿಷಯ. ಫೈನಾನ್ಸ್ ಇಲಾಖೆ ಎಲೆಕ್ಟ್ರಿಕ್ ಇಲಾಖೆಗೆ ಒಂದು ದೊಡ್ಡ ಕಂಟಕಪ್ರಾಯವಾಗಿ ಪರಿಣಮಿಸಿಬಿಟ್ಟಿದೆಯೆಂದರೆ ಅದು ಸತ್ಯವಾದ ಮಾತು. ಏಕೆಂದರೆ, ಯಾವುದಾದರೂ ಒಂದು ಊರಿನಲ್ಲಿ ಯಾರಾದರೊಬ್ಬರು ಒಂದು ಬಾವಿಗೆ ಪಂಪ್ ಹಾಕಿಸಿಕೊಡಿ ಎಂದು ಹೇಳಿದರೆ, ಅವರು ಮುಂದೆ ಆ ಊರಿನಲ್ಲಿ 100 ಭಾವಿಗಳನ್ನು ತೆಗೆಯುವ ಅನುಕೂಲಗಳಿದ್ದರೂ, ಈ ಒಂದು ಬಾವಿಯನ್ನೇ ಲೆಕ್ಕಕ್ಕಿಟ್ಟುಕೊಂಡು, ಸದ್ಯಕ್ಕೆ ಎಲೆಕ್ಟ್ರಿಕ್ ತಂತಿ, ಎಲೆಕ್ಟ್ರಿಕ್ ಕಂಬ ಮುಂತಾದವಕ್ಕೆ ಆಗತಕ್ಕ ಖರ್ಚನ್ನೆಲ್ಲಾ ಆ ಒಂದೇ ಬಾವಿಯ ಮೇಲೆ ಹಾಕಿ, ಅದಕ್ಕಷ್ಟು ಖರ್ಚು ಮಾಡಿದರೆ ಬರುವ ಆದಾಯವೆಷ್ಟು ಎಂದು ಶ್ರೀ ಶಾಮಣ್ಣನವರು ಫೈನಾನ್ಷಿಯಲ್ ಸೆಕ್ರೆಟೆರಿಯವರಾಗಿ ಲೆಕ್ಕ ಹಾಕುತ್ತಾರೆ. ಮುಂದೆ ಅಲ್ಲಿ ನೂರು ಭಾವಿಗಳಾದಾಗ ಬರುವ ಆದಾಯ ಎಷ್ಟಾಗಬಹುದೆಂಬ ಲೆಕ್ಕವನ್ನೇ ನೋಡುವುದಿಲ್ಲ. ಈ ಲೆಕ್ಕ ಹೇಗಿದೆಯೆಂದರೆ, ಮಗ ಹುಟ್ಟಿದ ತಕ್ಷಣ ಅವನ ಸಂಪಾದನೆಯೇನು, ಅವನಿಗಾಗುವ ಖರ್ಚೇನು ಎಂದು ಲೆಕ್ಕ ಹಾಕಿದಂತಿರುತ್ತದೆ. ಇದು ಅರ್ಥವಿಲ್ಲದ ಲೆಕ್ಕ. ಸರಿಯಾದ ಲೆಕ್ಕದಲ್ಲಿ ಅದೆಂದೂ prohibitive ಆಗುವುದಿಲ್ಲ. ಈ ರೀತಿ ಲೆಕ್ಕ ಹಾಕುವುದರಿಂದ ಆಗಬಾರದ್ದು ಆಗುತ್ತದೆ. ಶ್ರೀಮಾನ್ ಮರಿಯಪ್ಪನವರೇ ಹೇಳಿದ್ದಾರೆ ಗೌರಿಬಿದನೂರು ತಾಲ್ಲೂಕಿನಲ್ಲಿ ಈಗ ತಮ್ಮ investment ಮೇಲೆ ಸೇಕಡ 200 ಲಾಭ ಬರುತ್ತಿದೆ ಎಂದು. ಮೊದಲು ಇದಕ್ಕೆ ಒದಗಿಸಿದ್ದ ದುಡ್ಡಿಗೂ ಈಗ ಬರುತ್ತಿರುವುದಕ್ಕೂ ತಾಳೆ ನೋಡಿದರೆ, ನಾವು ಖರ್ಚು ಮಾಡಿದ ಹಣಕ್ಕೆ ಎರಡರಷ್ಟು ಬರುತ್ತದೆಂದು ಹೇಳಿದ್ದಾರೆ. ಈ ಲೆಕ್ಕದ ಪ್ರಕಾರ, ನಮ್ಮ ಮೈಸೂರು ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ಎಲ್ಲರಿಗೂ ಮಾರಾಟ ಮಾಡುವ ಒಂದು ಯೋಜನೆಯನ್ನು ಸರಿಯಾಗಿ ಹಾಕಿದರೆ, ಪ್ರಾಯಶಃ ಈಗ ನಾವು ಹಾಕಿರತಕ್ಕ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಎಲ್ಲಾ ತೆರಿಗೆಗಳನ್ನೂ ವಜಾಮಾಡಿಬಿಟ್ಟು, ಮೈಸೂರು ದೇಶದ ಆಡಳಿತವನ್ನು ನಡೆಸುವುದಕ್ಕೆ ಬೇಕಾದ ಪೂರಾ ಹಣವನ್ನು ಇದೊಂದರಿಂದಲೇ ಉತ್ಪತ್ತಿಮಾಡಿಕೊಳ್ಳುವುದಕ್ಕೆ ಪ್ರಕೃತಿಮಾತೆ ಸಾಕಾದಷ್ಟು ಅನುಕೂಲತೆಯನ್ನು ಕಲ್ಪಿಸಿಕೊಟ್ಟಿದ್ದಾಳೆಂದು ಹೇಳಬಹುದು. ಇಂಥ ಸಂದರ್ಭವನ್ನು ಉಪಯೋಗಿಸಿಕೊಂಡು. ನಮ್ಮಲ್ಲಿ ವಿದ್ಯುಚ್ಛಕ್ತಿ ತಯಾರಿಕೆಯನ್ನು ಹೆಚ್ಚು ಮಾಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಇನ್ನು ಈ ರೀತಿ ದರವನ್ನು ಹೆಚ್ಚುಮಾಡಿರುವ ವಿಷಯ. ಇದನ್ನು ನೋಡಿದರೆ, ಮೈಸೂರು ಸರ್ಕಾರದವರು ನಾವು ವ್ಯವಸಾಯಗಾರರನ್ನು ಉದ್ಧಾರಮಾಡುತ್ತೇವೆ ಎಂದು ದೇಶದಲ್ಲೆಲ್ಲಾ ಹೊಗಳಿಕೊಂಡು ಓಡಾಡುವುದನ್ನು ಇವೊತ್ತಿನ ದಿನದಿಂದಲೇ ಬಿಟ್ಟುಬಿಡಬೇಕು ಎಂದೆನಿಸುತ್ತದೆ.

ಅದಕ್ಕೆ ಬದಲು ನೀವು ವ್ಯವಸಾಯಗಾರರನ್ನು ತಲೆಯ ಮೇಲೆ ಹೊಡೆಯುತ್ತಿದ್ದೀರೆಂದರೆ ಒಪ್ಪುತ್ತದೆ. ಕಾರಣ ಇಷ್ಟೆ: ಟಿನ್ನಿಮಿಲ್ಲಿಗೆ ಯೂನಿಟ್ಟಿಗೆ ಎರಡು ಕಾಸು-ಮೂರು ಕಾಸುಗಳಂತೆ ನಿಮಗೆ ಕೊಡುವುದಕ್ಕಾಗುತ್ತದೆ; ಕೋಲಾರದ ಚಿನ್ನದಗಣಿಗೆ ಯೂನಿಟ್ಟಿಗೆ ಒಂದೂವರೆ ಕಾಸು-ಎರಡು ಕಾಸು-ಎರಡೂ ಮುಕ್ಕಾಲು

(ಶ್ರೀ ಎ. ಭೀಮಪ್ಪನಾಯಕ್.)

ಕಾಸಿಗೆ ಮಾರಾಟ ಮಾಡುವುದಕ್ಕಾಗುತ್ತದೆ; ಬೆಂಗಳೂರು ಸಿಟಿಯಲ್ಲಿ ಬೆಂಕಿ ಹತ್ತಿಸಿ ಒಲೆ ಉರಿಸುವುದಕ್ಕೆ ಯೂನಿಟ್ಟಿಗೆ 9 ಕಾಸಿನಂತೆ ಕೊಡುವುದಕ್ಕಾಗುತ್ತದೆ; ರಾಗಿ ಜೋಳ ಬೀಸುವ ಫ್ಲೋರ್ ಮಿಲ್ಲುಗಳಿಗೆ ಒಂದಾಣೆಯಂತೆ ನಿಮಗೆ ಕೊಡುವುದಕ್ಕಾಗುತ್ತದೆ; ಮೈ ಬೆವರು ಸುರಿಸಿ, ಬೇಸಾಯಮಾಡಿ ನಿಮಗೆ ಆಹಾರವನ್ನು ತಿನ್ನಲಿಕ್ಕೆ ಕೊಡುವ ರೈತನಿಗೆ ಕಡಮೆ ದರದಲ್ಲಿ ಕೊಡುವುದಕ್ಕಾಗುವುದಿಲ್ಲ! ನಿಮಗೇ ಗೊತ್ತಿದೆ, ಮೈಸೂರು ದೇಶದಲ್ಲಿ ಎಲ್ಲ ಕಡೆಯೂ ಮನೆಯ ದೀಪಗಳಿಗೆ ನಾಲ್ಕಾಣೆಯಂತೆ ಚಾರ್ಜ್ ಮಾಡುತ್ತಿದ್ದೀರಿ. ಇದು ಬೆಂಗಳೂರು ಸಿಟಿಗೆ ಮಾತ್ರವಲ್ಲ. ಈ ಹೆಚ್ಚಿನದರ. ಹಳ್ಳಿಗಾಡಿನ ಬಡ ರೈತನಿಗೂ ಇದೇ ದರ! ಇದರ ಅರ್ಥವೇನು? ಆದ್ದರಿಂದ ವ್ಯವಸಾಯಗಾರನಿಗೆ ರಿಯಾಯಿತಿ ತೋರಿಸುತ್ತೇವೆ ಎಂದು ಹೇಳಬೇಡಿ. ಬಾಕಿ ಕೈಗಾರಿಕೆಗಳಂತೆಯೇ ವ್ಯವಸಾಯವೂ ಒಂದು ಕೈಗಾರಿಕೆ, ಇವರೂ ಲಾಭ ಬಡುಕರು ಎಂದು ಹೇಳುವಿರಾ!! ಅವನು ಬೆಳೆದದ್ದನ್ನು ಕಂಟ್ರೋಲ್‌ಮಾಡಿ ಕಿತ್ತುಕೊಂಡು ಎಲ್ಲರಿಗೂ ಹಂಚುವಾಗ ಪಾಪ, ಈ ಯೋಚನೆಯೆಲ್ಲಾ ಬರುವುದಿಲ್ಲವೇನೋ! ಒಂದಾಣೆ ವ್ಯವಸಾಯಗಾರನಿಗೆ ಚಾರ್ಜ್ ಮಾಡುತ್ತೇವೆ ಎಂದು ಹೇಳಿದರೆ ಅದರ ಅರ್ಥವೇನು? ನಾನೇನೂ ಎಲೆಕ್ಟ್ರಿಕ್ ಪಂಪ್ ಹಾಕಿಕೊಂಡವನೆಂದು ಹೇಳಿ ಹೀಗೆ ವಾದಿಸುತ್ತಿಲ್ಲ; ನಾನೇನೂ ಪಂಪು ಹಾಕಿಕೊಂಡಿಲ್ಲ. ಶ್ರೀಮಾನ್ ಮಸಿಯಪ್ಪನವರು, ನಾನೀಗಾಗಲೇ ಬಸ್ಸಿನೊಳಗೆ ಕುಳಿತುಕೊಂಡಿರುವನೆಂದು ದನಿಗೈದರು. ಅದು ನಿಜವಲ್ಲ. ಆದರೂ ನಮ್ಮ ಕಡೆಯ ಜನರನೇಕರು ಪಂಪು ಹಾಕಿಕೊಂಡಿದ್ದಾರೆ. ಅವರ ಕಷ್ಟದ ಅನುಭವ ನನಗೆ ಗೊತ್ತಿದೆ. ಈ ಸಭೆಯ ಅಧ್ಯಕ್ಷರೂ ಪಂಪ್ ಹಾಕಿಸಿಕೊಂಡಿದ್ದಾರೆ, ಶ್ರೀಮಾನ್ ರಾಮಚಂದ್ರರಾಯರೂ ಪಂಪ್ ಹಾಕಿಸಿಕೊಂಡಿದ್ದಾರೆ. ಅವರಿಗೆಲ್ಲಾ ಇದರ ಕಷ್ಟ ಗೊತ್ತು. ಆದರೂ ಬಾಯಿಬಿಟ್ಟು ಹೇಳುವುದಕ್ಕೆ ಕಷ್ಟವಾಗಬಹುದು. ಹೀಗಿರುವಲ್ಲಿ ಇದ್ದಕಿದ್ದಹಾಗೆ ಒಂದಕ್ಕೆರಡರಷ್ಟು ದರವನ್ನು ಜಾಸ್ತಿ ಮಾಡಿ ರೈತರನ್ನು ದಿಕ್ಕೆಡಿಸುವುದೇ! ಮನೆಗಳಿಗೆ ಕೊಡುವ ದೀಪಕ್ಕೇಕೆ ನಾಲ್ಕಾಣೆ ಇರುವುದನ್ನು ಎಂಟಾಣೆಮಾಡುವುದಿಲ್ಲ? ಕೈಗಾರಿಕೆಗಳಿಗೆ ಒಂದಾಣೆ ಇರುವುದನ್ನೇ ಎರಡಾಣೆಮಾಡುವುದಿಲ್ಲ? ಏಕೆಂದರೆ, ಸಿಟಿ ಜನರು ಒಂದು ಕಾಸು ಹೆಚ್ಚಿಗೆ ಹಾಕಿದರೂ ತಕ್ಷಣವೇ ಕರಿಯ ಬಾವುಟ ಹಾಕಿಕೊಂಡು ಅಠಾರಾಕಚೇರಿಗೆ ನುಗ್ಗುತ್ತಾರೆಂಬ ಭಯವಿದೆ ನಿಮಗೆ! ಹಳ್ಳಿಯಲ್ಲಾದರೋ ಅಲ್ಲಿ, ಇಲ್ಲಿ, ಮೂಲೆಯಲ್ಲಿ 4000, 4000 ಜನ ಇರುತ್ತಾರೆ. ಅವರನ್ನು ಕೇಳುವವರು ಯಾರು! ಅವರ ಕೂಗು ಯಾವ ಕೈಲಾಸ ಮುಟ್ಟೀತು? ಅವರಲ್ಲಿಗೆ ಹೋಗಿ ಅವರನ್ನು ಒಂದು ಸಾರಿ ಕೇಳುವ ಗೋಜಿಗೂ ಹೋಗದೆ, ಟೆಲಿಫೋನ್ ಮೂಲಕವಾದರೂ ಹೇಳಿ, 'ವಸೂಲುಮಾಡಿ ಬಿಡಿ' ಎಂದು ಹೇಳುತ್ತೀರಿ! ಇದು ಏನು ಕ್ರಾಂತಿಕಾರಕ ಪರಿಣಾಮವನ್ನುಂಟುಮಾಡುತ್ತದೆಂದು ನಾನು ಇವೊತ್ತು ಹೇಳುವುದಕ್ಕೆ ಬದಲು ಅವರಿಗೆ ಬಿಟ್ಟು ಬಿಡುವುದು ಉತ್ತಮವೆಂದು ಭಾವಿಸುತ್ತೇನೆ. ಮೊಳಕಾಲ್ಮೂರು, ಚಳ್ಳಕೆರೆ, ಹಿರಿಯೂರು—ಈ ತಾಲ್ಲೂಕುಗಳಲ್ಲಿ 7000 ಬಾವಿಗಳಿವೆ; ಈ 7000 ಬಾವಿಗಳು ಎಂದರೆ ಎಂಥವು! ಅವನ್ನು ಏಳು ಸಾವಿರ ಕೆರೆಗಳೆಂದೆ ಹೇಳಬಹುದು! ನಾನು ಹಿಂದೆಯೇ ಒಮ್ಮೆ ಹೇಳಿದ್ದೇನೆ: ಒಂದು ಕೆರೆಗೆ 20-30 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಸಾವಿರ ಎಕರೆಗಳನ್ನು ಸಾಗುವಳಿಮಾಡುವುದಕ್ಕೆ ಬದಲಾಗಿ, ಒಂದು ಬಾವಿಗೆ 4000 ರೂಪಾಯಿಗಳಂತೆ 1000 ಬಾವಿಗಳನ್ನು ಕೊಟ್ಟರೆ 25, ಕೆರೆಗಳಿಗೂ ಮೇಲ್ಪಟ್ಟು ಆದಾಯವಾಗುತ್ತದೆ. ಒಂದು ವೇಳೆ 30 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕೆರೆ ಕಟ್ಟಿಸಿದರೂ ಒಂದು ವೇಳೆ ಮಳೆ ಬಾರದೆ ಹೋದರೆ ಬೆಳೆ ಹೋಯಿತು. ಭಾವಿಗಳಲ್ಲಿ ಹಾಗಿಲ್ಲ, ಅಷ್ಟಿಷ್ಟಾದರೂ ಕೊಟ್ಟೇ ಕೊಡುತ್ತದೆ. ನಾಲ್ಕು ಎಕರೆ ಬೆಳೆಮಾಡುವುದಕ್ಕಾಗದಿದ್ದರೆ ಒಂದು ಎಕರೆಯನ್ನಾದರೂ ಬೆಳೆಮಾಡಬಹುದು. ಆದ್ದರಿಂದ ನಿಜವಾಗಿ ವ್ಯವಸಾಯಗಾರರನ್ನು ಉದ್ಧಾರಮಾಡಬೇಕೆಂದು ಹೇಳುವುದಾದರೆ, ಮೈಸೂರು ದೇಶದಲ್ಲಿ, ಎಷ್ಟೇ ಕಡಮೆ ಉತ್ಪತ್ತಿ ಬರಲಿ, ಯಾವ ಹಳ್ಳಿಗೇ ಎಲೆಕ್ಟ್ರಿಸಿಟಿ ಒದಗಿಸಬೇಕಾದರೂ ಪ್ರತಿಯೊಂದು ಬಾವಿಗೂ ಉತ್ಪತ್ತಿಯ ಲೆಕ್ಕವನ್ನು ಹಾಕುವುದಕ್ಕೆ ಹೋಗಬೇಡಿ. ಒಟ್ಟಿನಲ್ಲಿ ಆ ಪ್ರಾಂತ್ಯದಲ್ಲಿ ಎಷ್ಟು ಬಾವಿಗಳಿವೆ, ಮುಂದೆ ಎಷ್ಟು ಬಾವಿಗಳನ್ನು ತೆಗೆಸಬಹುದು ಎಂಬ ಅಂದಾಜು ಹಾಕಿಕೊಳ್ಳಿ. ಅಲ್ಲಿ 100 ಬಾವಿಗಳಿದ್ದು ಇನ್ನೂ 50 ಬಾವಿಗಳನ್ನು ತೆಗೆಸುವುದಕ್ಕೆ ಅವಕಾಶವಿದ್ದರೆ, 150 ಬಾವಿಗಳಿಗೇ ಒಂದು Step down transformer ಹಾಕಿದ್ದೇವೆಂದು ಭಾವಿಸಿ ಅದರ Capacity ಎಷ್ಟು, ಅದರ ಬೆಲೆ ಎಷ್ಟು, ಎಂಬುದನ್ನು ಪರಿಗಣಿಸಿ ಆ ಊರಿನ ಮುಕ್ಕಾಲು ಪಾಲು ಜನ ತೆಗೆದುಕೊಳ್ಳಬಹುದು ಎಂದು ಲೆಕ್ಕ ಹಾಕಿ, ಅದರ ಮೇಲೆ ಶೇಕಡ ಎಷ್ಟು ಲಾಭ ಬರುತ್ತದೆ ಎಂದು ಅಂದಾಜು ಹಾಕಬೇಕೇ ಹೊರತು, ಸುಮ್ಮನೆ ಯಾವುದೋ ಅಂದಾಜು ಹಾಕಿ, ಆ ಊರಿನಿಂದ ಒಂದೇ ಬಾವಿಗೆ ಅರ್ಜಿ ಬಂದಿದೆ, ಅದೊಂದು ಬಾವಿಗೇ ಕೊಟ್ಟರೆ ಲಾಭ ಕಡಮೆ ಬರುತ್ತದೆ, ಅದರಿಂದ ದೇಶಕ್ಕೆ ತೊಂದರೆಯಾಗುತ್ತದೆ ಎಂದು ಹೇಳುವುದು ಸರಿಯಲ್ಲ. ಮತ್ತು ನೀವು ಯಾವ ತೆರಿಗೆಯನ್ನೇ ಆಗಲಿ ಒಂದಕ್ಕೆರಡರಷ್ಟು ಏಕಾಏಕಿ ಜಾಸ್ತಿಮಾಡುವುದರಲ್ಲಿ ಅರ್ಥವಿಲ್ಲ.

ಆಮೇಲೆ commercial crop, non-commercial crop (food crop) ಎಂದು ಹೇಳುವುದರ ಅರ್ಥವೇನೋ ಗೊತ್ತಾಗುವುದಿಲ್ಲ. Commercial crop ಬೆಳೆಯದೆಯೇ ಯಾವ ರೈತನಾಗಲಿ ಬದುಕುಮಾಡುವುದಕ್ಕೆ ಸಾಧ್ಯವೆ?

12 NOON.

ಫುಡ್‌ಕ್ರಾಪ್ಸ್ ಮತ್ತು ಕಮರ್ಷಿಯಲ್ ಕ್ರಾಪ್ಸ್ ಎಂಬ ವ್ಯತ್ಯಾಸಮಾಡುತ್ತಾರೆ; ಬರಿಯ ಆಹಾರ ಬೆಳೆಯನ್ನು ಬೆಳೆಯುವವನು ತನ್ನ ಹೊಟ್ಟೆ, ಬಟ್ಟೆ ಬರೆಗೆ ಕೊಟ್ಟು, ಸಾಲಕ್ಕೂ ಕಟ್ಟಲು ಸಾಧ್ಯವಾಗುತ್ತದೆಯೆ? ಬೇರೆ ಕಮರ್ಷಿಯಲ್ ಕ್ರಾಪ್ಸ್ ಬೆಳೆದರೆ, ಸ್ವಲ್ಪ ಅವನ ಖರ್ಚನ್ನು ಸರಿತೂಗಿಸಿಕೊಳ್ಳಬಹುದು. ಅಲ್ಲದೆ ಕಮರ್ಷಿಯಲ್ ಕ್ರಾಪ್ಸ್ ಬೆಳೆದರೆ ಸರ್ಕಾರಕ್ಕೂ ಆದಾಯ ಒಂದಕ್ಕೆ ನಾಲ್ಕರಷ್ಟು ಬರುತ್ತದೆ. ಹೊಗೇಸೊಪ್ಪು, ಕಬ್ಬು ಮುಂತಾದ ಬೆಳೆಗಳ ಮೇಲೆ ಸರ್ಕಾರದವರು ಬೇಕಾದಷ್ಟು ಸುಂಕ ಹಾಕುತ್ತಾರೆ. ಹತ್ತಿ ಬೆಳೆಯಿಂದ ಸೇಲ್ಸ್‌ಟ್ಯಾಕ್ಸ್ ಬರುತ್ತದೆ. ಬೇರೆ ವಿಧದಲ್ಲಿ ಇವುಗಳಿಂದ ಸರ್ಕಾರಕ್ಕೆ ಬೇಕಾದಷ್ಟು ಆದಾಯ ಬರುವಾಗ, ಕಮರ್ಷಿಯಲ್ ಕ್ರಾಪ್ಸ್ ಫುಡ್‌ಕ್ರಾಪ್ಸ್ ಎಂದು ವ್ಯತ್ಯಾಸಮಾಡುವುದು ತಪ್ಪು. ಬೇರೆ ಆಹಾರದ ಬೆಳೆ ಮಧ್ಯೆ ಬದನೇಕಾಯಿ ಗಿಡ ಹಾಕಿದರೆ ಕಮರ್ಷಿಯಲ್ ಕ್ರಾಪ್ಸ್ ಎನ್ನುತ್ತಾರೆ, ಅದು ಕಮರ್ಷಿಯಲ್ ಕ್ರಾಪ್ಸ್, ಇದು ಫುಡ್‌ಕ್ರಾಪ್ಸ್ ಎಂದು ಹೇಳುತ್ತಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಬದನೇಕಾಯಿ ಕಮರ್ಷಿಯಲ್ ಕ್ರಾಪ್.

ಶ್ರೀ ಎ. ಭೀಮಪ್ಪನಾಯಕ್.—ಸಂತೆಯಲ್ಲಿ ಮಾರುತ್ತಿದ್ದ ಮಾತ್ರಕ್ಕೇ ಅದು ಕಮರ್ಷಿಯಲ್ ಕ್ರಾಪೆ? ಊಟ ಮಾಡುವುದಕ್ಕೆ ಸಾರಿಗೆ ಹಾಕುವುದಿಲ್ಲವೆ! ಅದಕ್ಕೂ ಫುಡ್‌ಕ್ರಾಪಿಗೂ ಏನೂ ವ್ಯತ್ಯಾಸ? ಒಟ್ಟಿನಲ್ಲಿ ಈ ರೀತಿ ಕಮರ್ಷಿಯಲ್‌ಕ್ರಾಪ್, ಫುಡ್‌ಕ್ರಾಪ್ ಎಂದು ವ್ಯತ್ಯಾಸವಿರಬಾರದು. ಇದರಿಂದ ರೈತನಿಗೇನೂ ಸಹಾಯ ದೊರೆಯುವುದಿಲ್ಲ. ಪ್ರತಿಯೊಂದು ಸಂದರ್ಭದಲ್ಲಿಯೂ ಕಮರ್ಷಿಯಲ್‌ಕ್ರಾಪ್ ಬೆಳೆಯಲು ಅವಕಾಶವಿರುತ್ತದೆ. ಒಂದೇ ಜಮೀನಿನಲ್ಲಿ ಭಂಡನ್ನೂ ಬೆಳೆಯಬಹುದು. ಅಂಥಾ ಸಂದರ್ಭದಲ್ಲಿ ಅದಕ್ಕೇ ಬೇರೆ ಮೀಟರು ಇದಕ್ಕೇ ಬೇರೆ ಮೀಟರನ್ನು ಹಾಕುವುದಕ್ಕಾಗುತ್ತದೆಯೆ? ಬೇರೆ ಆಹಾರ ಬೆಳೆ ಬೆಳೆದು ಅದರ ಮಧ್ಯೆ ಸ್ವಲ್ಪ ಕಮರ್ಷಿಯಲ್ ಕ್ರಾಪ್‌ಹಾಕಿಕೊಂಡಿದ್ದೇನೆಂದು ಅವನು ಹೇಳಬಹುದು. ಈಗ ಶ್ಯಾನುಭೋಗರ ಪಹಣಿಯಿಂದ ಏನು ಅನಾನುಕೂಲವಾಗುತ್ತಿದೆಯೋ ಅದೇ ಕಷ್ಟ ಇಲ್ಲಿಯೂ ಬರುತ್ತದೆ. ಈಗಾಗಲೇ ತೊಂದರೆ ಎಂದು ಜನ ಹೇಳುತ್ತಿರುವಾಗ, ಅದರ ಜೊತೆಗೆ ಇದೊಂದು ತೊಂದರೆಯೂ ಬರುತ್ತದೆ. ಅರ್ಧಾಣೆ ಇರುವುದನ್ನು ಒಂದಾಣೆ ಮಾಡುವುದರಲ್ಲಿ ಅರ್ಥವೇ ಇಲ್ಲ. ಇದನ್ನು ಖಂಡಿತವಾಗಿ ಕಾರ್ಯರೂಪಕ್ಕೆ ತರಬಾರದು. ರೈತ ತನ್ನ ವ್ಯವಸಾಯಕ್ಕೆ ಎತ್ತುಗಳನ್ನು ಇಟ್ಟುಕೊಂಡು ವ್ಯವಸಾಯ ಮಾಡುತ್ತಿದ್ದ. ಈ ಹೊತ್ತು ಪಂಪುಗಳನ್ನು ಕೊಟ್ಟಿದ್ದಾರೆ. ಎತ್ತುಗಳನ್ನು ಮಾರಿಕೊಂಡ. ಇದರ ಚಾರ್ಜುಕೊಡುವುದೇ ಕಷ್ಟವಾಗಿದೆ. ಒಂದಾಣೆಮಾಡಿದರೆ ಬಿಟ್ಟುಬಿಡಬೇಕಾಗುತ್ತದೆ. ಬಿಟ್ಟರೆ ಮತ್ತೆ ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಅವನಿಗೆ ಶಕ್ತಿಯಿಲ್ಲ. ಹೀಗಾಗಿ ವ್ಯವಸಾಯದ ಉದ್ಯಮಕ್ಕೇ ಒಂದು ಕೊಡಲಿ ಪೆಟ್ಟು ಹಾಕಿದಂತಾಗುತ್ತದೆ. ಇದರಿಂದ ಮುಂದೆ ತಲೆನೋವು ಬರುತ್ತದೆ. ಇದಕ್ಕೆ ಸರ್ಕಾರದವರೇ ಜವಾಬ್ದಾರರಾಗುತ್ತಾರೆ. ಆದುದರಿಂದ ಇದನ್ನು ಪುನರ್ವಿಮರ್ಶೆ ಮಾಡಿ ತಕ್ಷಣ ಕಾರ್ಯಕ್ರಮ ತೆಗೆದುಕೊಂಡು ಜನರನ್ನು ಯಾವ ವಿಧವಾಗಿಯೂ ನೋಯಿಸಬಾರದೆಂದು ಸರ್ಕಾರದಲ್ಲಿ ನನ್ನ ಪ್ರಾರ್ಥನೆ.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ವಿದ್ಯುಚ್ಛಕ್ತಿಯ ಬಗ್ಗೆ ಮಾತನಾಡುತ್ತಾ ಮಾನ್ಯ ಸದಸ್ಯರನೇಕರು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತೆ ಈಗ ತಾನೇ ಭಾಷಣಮಾಡಿದ ಮಾನ್ಯ ಭೀಮಪ್ಪನಾಯಕರು ವಿರೋಧ ಪಕ್ಷದ ಸದಸ್ಯರು ಮಾತನಾಡಿರುವುದಕ್ಕಿಂತ ಬಹಳ ಕಟುವಾಗಿಯೇ ಟೀಕೆ ಮಾಡಿದ್ದಾರೆ; ಮತ್ತು ಅವರ ಟೀಕೆ ಸೂಕ್ತವಾಗಿದೆಯೆಂದು ಭಾವಿಸುತ್ತೇನೆ.

ಉಪಾಧ್ಯಕ್ಷಕರು.—ವಿಷಯದ ಮೇಲೆ ಮಾತನಾಡಿ, ಅವರ ಟೀಕೆಯ ವಿಷಯ ಬೇಡ.

ಶ್ರೀ ಎಸ್. ಗೋಪಾಲಗೌಡ.—ವಿದ್ಯುಚ್ಛಕ್ತಿಯ ಸಂಬಂಧದಲ್ಲಿ ಒಂದು (comprahensive Scheme) ಪರಿಪೂರ್ಣವಾದ ವಿಶಾಲ ವ್ಯಾಪ್ತಿಯುಳ್ಳ ಯೋಜನೆಯನ್ನು ಸರ್ಕಾರ ಇಟ್ಟುಕೊಳ್ಳಬೇಕಾದುದು ಅತ್ಯಗತ್ಯ. ಬಹುಶಃ ಅಂಥಾದ್ದು ಇದೆಯೋ ಇಲ್ಲವೋ ಗೊತ್ತಿಲ್ಲ. ಪ್ರಾಯಶಃ ಇಲ್ಲವೆಂದು ಕಾಣುತ್ತದೆ. ಅಂಥಾ ಯೋಜನೆಯನ್ನಿಟ್ಟುಕೊಂಡರೆ, ದೇಶದಲ್ಲಿ ಉತ್ಪತ್ತಿಯಾಗತಕ್ಕ ವಿದ್ಯುಚ್ಛಕ್ತಿ ಎಷ್ಟು, ನಾವು ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಾ ಹೋದರೆ ಮುಂದೆ ನಮಗೆ ಬೇಕಾಗಬಹುದಾದ ವಿದ್ಯುಚ್ಛಕ್ತಿ ಎಷ್ಟು ಎಂಬ ಲೆಕ್ಕ ಬೇಕಾಗುತ್ತದೆ. ಹೊಸದಾಗಿ ದೇಶದ ಮುಂದಿರುವ ಹೊನ್ನೆಮರಡು ಯೋಜನೆಯನ್ನು ಕೈಕೊಳ್ಳಬೇಕೇ! ಕೈಕೊಳ್ಳಲೇ ಬೇಕಾದರೆ ಅದರಿಂದ ನಮ್ಮ ಪ್ರಾಂತದ ಹಣಕಾಸಿನ ಮೇಲೆ ಏನು ಪರಿಣಾಮವಾಗುತ್ತದೆ; ನಮಗೆಷ್ಟು ಬೇಕಾಗುತ್ತದೆ, ಹೊರಗಿನಿಂದ ಅದಕ್ಕೆ ಎಷ್ಟರ ಮಟ್ಟಿಗೆ ಸ್ವಾಗತವಿದೆ, ಆದರಿಂದ ಉತ್ಪತ್ತಿಮಾಡುವ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಲು ಮಾರ್ಕೆಟ್ ಎಷ್ಟುಮಟ್ಟಿಗೆ ದೊರೆಯುತ್ತದೆ ಎಂಬುದನ್ನೆಲ್ಲಾ ನಾವು ಮೊದಲೇ ತಿಳಿದುಕೊಳ್ಳಬೇಕಾದುದು ಅಗತ್ಯ. ಮೊದಲು ದೀಪಕ್ಕೆ, ಆ ಮೇಲೆ ಕೈಗಾರಿಕೆಗಳಿಗೆ ಉಪಯೋಗಿಸಿಕೊಂಡೆವು. ಈ ಹೊತ್ತು ಆಹಾರವನ್ನು ಹೆಚ್ಚು ಬೆಳೆಯ ಬೇಕು ಮತ್ತು ವ್ಯವಸಾಯವನ್ನು ಹೆಚ್ಚು ಲಾಭದಾಯಕವಾಗಿ ಮಾಡಬೇಕು ಎಂಬ ಉದ್ದೇಶದಿಂದ ವಿದ್ಯುಚ್ಛಕ್ತಿಯನ್ನು ಹಳ್ಳಿಗಳ ಕಡೆ ಕೊಟ್ಟು ಕೃಷಿಯ ಅವಶ್ಯಕತೆಯನ್ನು ಪೂರೈಸುವುದಕ್ಕೆ ಪ್ರಯತ್ನಪಟ್ಟಿದ್ದೇವೆ. ಈಗಾಗಲೇ ಈ ಸಭೆಯ ಮುಂದೆ ಚರ್ಚೆಯಾಗಿರುವ ಹಾಗೆ ವ್ಯವಸಾಯಕ್ಕೆ ಹೆಚ್ಚು ಹೆಚ್ಚು ಸೌಕರ್ಯ ಕಲ್ಪಿಸಿ ಕೊಡುವ ಸಂದರ್ಭದಲ್ಲಿ ಪಂಪುಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದೂ ಇತರ ಸಂದರ್ಭಗಳಲ್ಲಿ ನೀರು ಹಾಯಿಸುವುದಕ್ಕೆ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದೂ ಒತ್ತಾಯಬಂದಿದೆ. ಬಹುಶಃ ಇದಕ್ಕೆ ಇನ್ನು ಮೇಲೆ ಹೆಚ್ಚು ಗಮನ ಕೊಡಬೇಕಾಗುತ್ತದೆ ಮತ್ತು ಕಡಮೆ ಖರ್ಚಿನಲ್ಲಿ ವಿದ್ಯುಚ್ಛಕ್ತಿಯನ್ನು ಇಂಥ ಕೆಲಸಗಳಿಗೆ ಉಪಯೋಗಿಸುವ ಸಂದರ್ಭವಿದೆ. ಇನ್ನೂ ಮುಂದೆ ಹೋಗಿ ಹೇಳಬೇಕೆಂದರೆ ವ್ಯವಸಾಯಕ್ಕೆ ಉಚಿತವಾಗಿ ಒದಗಿಸಿದ್ದರೂ ಚೆನ್ನಾಗಿತ್ತು ಎನಿಸುತ್ತದೆ ರೈತರಿಗೆ ತಾವೇ ಪಂಪು ಹಾಕಿಕೊಂಡು ಸಾವಿರಾರು ರೂಪಾಯಿ ಖರ್ಚುಮಾಡಬೇಕೆಂದರೆ, ಅನೇಕರಿಗೆ ಶಕ್ತಿಯಿರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ದೀಪ ಹತ್ತಿರವಿರುವಾಗ ಸ್ವಲ್ಪ ಖರ್ಚಿನಿಂದ ದೀಪವನ್ನು ಪಡೆದುಕೊಳ್ಳಬಹುದು. ಹಾಗೆಯೇ ಎಲ್ಲೆಲ್ಲಿ ಹೆಚ್ಚು ವ್ಯವಸಾಯವನ್ನು ಕೈಕೊಳ್ಳಬೇಕೆಂದಿರುತ್ತಾರೆಯೋ ಅಲ್ಲಿಗೆ ವಿದ್ಯುಚ್ಛಕ್ತಿ ಹೆಚ್ಚಿನ ಖರ್ಚಿಲ್ಲವೆ ಹರಿಯಬೇಕು. ಹತ್ತಿರವಿದ್ದರ ವಿದ್ಯುಚ್ಛಕ್ತಿಯನ್ನು ದೀಪಗಳಿಗೆ ಸುಲಭವಾಗಿ ತೆಗೆದುಕೊಳ್ಳುತ್ತೇವೆ. ಅದಕ್ಕಾಗಿ ಬೇರೆ ಲೈನ್ ತರುವುದಿಲ್ಲ. ಹಾಗೆಯೇ ವಿದ್ಯುಚ್ಛಕ್ತಿ ವ್ಯವಸಾಯಕ್ಕೆ ಹೋದರೆ ಅಲ್ಲಿರುವ ರೈತರಿಗೆ ಕನಿಷ್ಠ ಖರ್ಚಿನಲ್ಲಿ ದೊರೆಯುತ್ತದೆ. ಇದನ್ನು ಸರ್ಕಾರ ಕಾರ್ಯಗತಮಾಡಬೇಕು. ವಿದ್ಯುಚ್ಛಕ್ತಿ ವ್ಯವಸಾಯಕ್ಕೆ ಹೆಚ್ಚು ಹೆಚ್ಚು ಉಪಯೋಗವಾಗಬೇಕು. ಇದು ಬಹುಮುಖ್ಯ ಮತ್ತು ಇದರ ಬಗ್ಗೆ ನಾವು ಒಂದು ಯೋಜನೆಯನ್ನು ಮುಂದಿಟ್ಟುಕೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ, ಈಗ ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿಯನ್ನು ಅನೇಕ ಕಡೆಕೊಟ್ಟಿರುವುದನ್ನು ನೋಡಿದ್ದೇನೆ. ಗುಡಿಬಂಡೆ, ಬಾಗೇಪಲ್ಲಿ ಅಲ್ಲಿಗೆಲ್ಲಾ ವಿದ್ಯುಚ್ಛಕ್ತಿ ಹೋಗಿದೆ. ಆದರೆ ಬಾಗೇಪಲ್ಲಿ ಯವರೆಗೆ ಹೋಗಿ ಅಲ್ಲಿ ನಿಂತುಹೋಗಿದೆ. ನೀರಾವರಿ ಮತ್ತು ಬಾಕಿ ಕೆಲಸಗಳಿಗೆ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಇಂಥ ಕ್ಷೇತ್ರಗಳು ಬೇರೆ ಕಡೆ ಕೆಲವಿವೆ. ಎಲ್ಲಿ ಭೂಮಿಯಲ್ಲಿ ನೀರು ಅಡಗಿದೆಯೋ ಅಲ್ಲಿ ವಿದ್ಯುಚ್ಛಕ್ತಿಯನ್ನು ಪಡೆದುಕೊಳ್ಳಲು ಸಾಧ್ಯವಾಗಬೇಕಾದರೆ ಒಂದು ಯೋಜನೆಯಿರಬೇಕು. ಯಾರು ಎಲ್ಲೆಲ್ಲಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಲು ಶಕ್ತರೋ, ಬೇಕೆಂದು ಕೇಳುತ್ತಾರೋ ಅಲ್ಲಿಗೆಲ್ಲಾ ವಿದ್ಯುಚ್ಛಕ್ತಿಯನ್ನು ಕೊಡುತ್ತಾ ಹೋಗುತ್ತೇವೆ.

ಒಂದು ವೇಳೆ ತಾವು ಮನೆಗಳಲ್ಲಿ ಬೆಳಕಿಗಾಗಿ ವಿದ್ಯುಚ್ಛಕ್ತಿಯನ್ನು ಬಳಸತಕ್ಕವರ ಮೇಲೆ ಈ ದರವನ್ನು ಏರಿಸಿದರೂ ಚಿಂತೆಯಿಲ್ಲ. ಈ ವ್ಯವಸಾಯಗಾರರಿಗೆ ಮಾತ್ರ

(ಶ್ರೀ ಎಸ್. ಗೋಪಾಲಗೌಡ.)

ಇದನ್ನು ಹೆಚ್ಚಿಸಬಾರದೆಂದು ಹೇಳುತ್ತೇನೆ. ಅಥವಾ ತಾವು ಅವರಿಗೆ ಈ ಕನಿಷ್ಠ ಪರಿಮಿತಿಯ ದರದಲ್ಲಿ ಒದಗಿಸುವುದಕ್ಕೆ ಬದಲಾಗಿ ಈ ತೆರಿಗೆಯನ್ನೇ ಸಂಪೂರ್ಣವಾಗಿ ಹಾಕದಂತೆ ಬಿಟ್ಟುಬಿಟ್ಟರೂ ಒಳ್ಳೆಯದೆಂದೇ ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಈ ವಿದ್ಯುಚ್ಛಕ್ತಿಯನ್ನು ತಾವು ದೇಶಾದ್ಯಂತವೂ ವ್ಯವಸಾಯಗಾರರಿಗೂ ಮತ್ತು ಗ್ರಾಮಗಳಿಗೂ ಒಂದು ಕ್ರಮವಾದ ವ್ಯವಸ್ಥೆಯಿಂದ Expand ಮಾಡದೆ ಇರತಕ್ಕ ನೀತಿ ಸರಿಯಲ್ಲವೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಚ್. ತಮ್ಮಯ್ಯ (ಕೃಷ್ಣರಾಜನಗರ).—ಸ್ವಾಮಿ, ಸರ್ಕಾರದವರು ಈ ವಿದ್ಯುಚ್ಛಕ್ತಿಯ ದರವನ್ನು ಹೆಚ್ಚಿಸಿರತಕ್ಕ ಬಗ್ಗೆ ನಾನು ಕೆಲವು ಮಾತುಗಳನ್ನಾಡಬೇಕೆಂದು ಇಚ್ಛಿಸುತ್ತೇನೆ. ಆದರೆ ಈಗಾಗಲೇ ಅನೇಕ ವಿಚಾರಗಳನ್ನು ತಿಳಿಸಿರುವುದರಿಂದ ನಾನು ಕೇವಲ ನಮ್ಮ ಕೃಷ್ಣರಾಜ ನಗರ ತಾಲ್ಲೂಕನ್ನೇ ಒಂದು ಉದಾಹರಣೆಯನ್ನಾಗಿ ತೆಗೆದುಕೊಂಡು ಎರಡು ಮಾತುಗಳನ್ನು ಆಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳ ಜನರು ಈ ವಿದ್ಯುಚ್ಛಕ್ತಿಯ ಸರಬರಾಯಿಗಾಗಿ ಒತ್ತಾಯಪಡಿಸುತ್ತಿದ್ದುದರಿಂದ ಅಲ್ಲಿಗೆ ವಿದ್ಯುಚ್ಛಕ್ತಿಯನ್ನೊದಗಿಸುತ್ತೇವೆಂದು State Budget ನಲ್ಲಿ ಹಣವನ್ನೊದಗಿಸುತ್ತಿದ್ದಾರೆ. ಆದರೆ ಇಲ್ಲಿಗೆ 3—4 ವರ್ಷಗಳಾದರೂ ಕೆಲಸವನ್ನು ಮಾತ್ರ ಇನ್ನೂ ಕೈಕೊಂಡಿಲ್ಲ. ಹಾಗೆ ಅವರು ಬಜೆಟ್ಟಿನಲ್ಲಿ ಒದಗಿಸಿದ್ದ ಹಣವೆಲ್ಲಾ ಸರ್ಕಾರಕ್ಕೇ ಲಾಪ್ಸ್ ಆಗಿ ಹೋಗಿದೆ. ಸಂಸ್ಥಾನದಲ್ಲಿ ಹೆಚ್ಚಿಗೆ ಆಹಾರ ಸಾಮಗ್ರಿಗಳನ್ನು ಬೆಳೆದುಕೊಡತಕ್ಕವರು ಈ ಕೃಷ್ಣರಾಜನಗರ ತಾಲ್ಲೂಕಿನವರು. ಸರ್ಕಾರಕ್ಕೆ ಹೆಚ್ಚಿನ ಕಂದಾಯ ಕೊಡತಕ್ಕವರು ಈ ತಾಲ್ಲೂಕಿನವರು. ಇಂಥ ಈ ತಾಲ್ಲೂಕಿನವರಿಗೇ ಸರ್ಕಾರದವರು ವಿದ್ಯುಚ್ಛಕ್ತಿಯನ್ನೊದಗಿಸದಿರುವುದು ತುಂಬಾ ಅನ್ಯಾಯ. ಹೀಗೇಕೆ ಮಾಡುತ್ತಿದ್ದಾರೋ ಇವರ ಅರ್ಥವೇ ನನಗಾಗುತ್ತಿಲ್ಲ. ಈಗಲೂ ಕೂಡ ಇವರ ಆವಶ್ಯಕತೆ ಎಲ್ಲಿ ಹೆಚ್ಚಿಗೆ ಇದೆಯೋ ಅಲ್ಲಿಗೆ ಮೊದಲು ಕೊಡುವ ಏರ್ಪಾಡನ್ನು ಸರ್ಕಾರದವರು ಮಾಡಬೇಕೆಂದೂ, ಹಾಗೆ ಮಾಡತಕ್ಕದ್ದು ನ್ಯಾಯವಾದುದೆಂದೂ ನಾನು ಸೂಚಿಸುತ್ತೇನೆ. ಈಗಿನ ಮಾನ್ಯ ಮುಖ್ಯ ಮಂತ್ರಿಗಳು ಅವರ ಮಂತ್ರಿಮಂಡಲಕ್ಕೆ ಕೆಲ ಕೆಲವು ಜಿಲ್ಲೆಗಳ ಮುಖಂಡರನ್ನು ಸೇರಿಸಿಕೊಂಡಿದ್ದಾರೆ. ಆದುದರಿಂದ ಆ ಜಿಲ್ಲೆಗಳ ಕೆಲಸಕಾರ್ಯಗಳು ಸುಲಭವಾಗಿ ಜರುಗುತ್ತವೆ. ಆದರೆ ಅವರು ನಮ್ಮ ಮೈಸೂರು ಜಿಲ್ಲೆಗೆ ಅಂಥ ಒಂದು ಪ್ರಾತಿನಿಧ್ಯ ಕೊಟ್ಟಿಲ್ಲ. ಆದುದರಿಂದಲೇ ನಮ್ಮ ಜಿಲ್ಲೆಯ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಆದುದರಿಂದ ಈ ನಮ್ಮ ಜಿಲ್ಲೆಯ ಕೆಲಸ ಕಾರ್ಯಗಳು ಸರಿಯಾಗಿ ನಡೆಯಬೇಕಾದರೆ ನಮ್ಮ ಜಿಲ್ಲೆಗೆ ಒಂದು ಪ್ರಾತಿನಿಧ್ಯ ಮಂತ್ರಿಮಂಡಲಕ್ಕೆ ಒದಗಿಸಿಕೊಡಬೇಕೆಂದು ಹೇಳುತ್ತೇನೆ.

*ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಅಧ್ಯಕ್ಷರೇ, ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಆದರೆ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರೂ ಮತ್ತು ಶ್ರೀ ಜೆ. ಮಹಮದ್ ಇಮಾಂರವರೂ ಮನೆಗಳಿಗೆ ಕೊಡತಕ್ಕ ವಿದ್ಯುಚ್ಛಕ್ತಿಯ ದರವನ್ನು 0-4-0 ಆಣೆಗಳಿಂದ 2 ಆಣೆಗಳಿಗೆ ಇಳಿಸಬೇಕೆಂದೂ, ವ್ಯವಸಾಯಕ್ಕೆ ಹಾಕಿದ್ದ ದರವನ್ನು ಮೊದಲಿನ ರೇಟಿಗೆ ಇಳಿಸಬೇಕೆಂದೂ, ಕೈಗಾರಿಕೆಗಳ ಮೇಲೆ ಇನ್ನೂ ಒಂದಾಣೆ ಜಾಸ್ತಿ ಹಾಕಿದರೂ ಪರವಾಗಿಲ್ಲ ಎಂಬುದಾಗಿಯೂ ಹೇಳಿದ್ದಾರೆ. ಆದರೆ ಇದೊಂದು ವಿತಂಡವಾದವೆಂದು ನಾನು ತಿಳಿಸಬೇಕಾಗಿದೆ. ಮನೆಗಳಿಗೆ ಕೊಡತಕ್ಕ ಕರೆಂಟಿನ ಬಗ್ಗೆ ತಿಂಗಳಿಗೆ ಒಂದು ಎರಡು ತಪ್ಪಿದರೆ ಮೂರೂ ರೂಪಾಯಿಗಳನ್ನು ಹಾಕಿದರೂ ಅವರು ಕೊಡಲು ಶಕ್ತರಾಗಿದ್ದಾರೆ. ಆದರೆ ಆ ರೀತಿ ಮಾಡತಕ್ಕ ಅವಶ್ಯಕತೆ ಕೂಡ ಇರುವುದಿಲ್ಲ. ಹೀಗೆ ಮಾಡಿದರೆ ಅಷ್ಟೇನೂ ತೊಂದರೆ ಬರಲಾರದು. ಆದರೆ ಕೈಗಾರಿಕೆಗಳವರಿಗೆ ಈ ದರಗಳನ್ನು ಹೆಚ್ಚು ಮಾಡಬೇಕೆಂದು ಹೇಳುವಾಗ ಅದರಲ್ಲಿ ಕೈಮಗ್ಗಗಳವರೂ ಬರಬಹುದು. ಆಗ ಅವರಿಗೆ ಇದರಿಂದ ತುಂಬಾ ಧಕ್ಕೆ ಬರುವ ಸಂಭವ ಇದೆ. ಶ್ರೀ ಭೀಮಪ್ಪ ನಾಯಕರು ಈ ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ದರವನ್ನೇರಿಸಿರುವುದು ವ್ಯವಸಾಯಕ್ಕೇ ಕೊಡಲಿಪೆಟ್ಟು ಹಾಕಿದಂತಾಗಿದೆಯೆಂದು ಹೇಳಿದರು. ಅದು ನಿಜ. ಜೋಗದಲ್ಲಿ ವಿದ್ಯುಚ್ಛಕ್ತಿ ಉತ್ಪತ್ತಿ ಮಾಡಲು ಪ್ರಾರಂಭವಾಗಿ ಇಲ್ಲಿಗೆ 5 ವರ್ಷಗಳಾಗುತ್ತಾ ಬಂತು. ಈ ವಿದ್ಯುಚ್ಛಕ್ತಿಯನ್ನು 8 ಅಥವಾ 10 ಕೋಟಿ ರೂಪಾಯಿಗಳ ಹಣ ಖರ್ಚು ಮಾಡಿ ಜೋಗ್‌ನಿಂದ ಬೆಂಗಳೂರಿಗೆ ತೆಗೆದುಕೊಂಡು ಹೋಗಿದ್ದಾರೆ. ಈ ಒಂದು ಪ್ರತ್ಯೇಕ ಲೈನನ್ನು ಹಾಕುವುದಕ್ಕೆ ಕೋಟ್ಯಾಂತರ ರೂಪಾಯಿಗಳು ಖರ್ಚಾಗಿವೆ. ಆದರೆ ಅದರ ಪಕ್ಕದಲ್ಲೇ ಇರತಕ್ಕ ರೈತನಿಗೇನೂ ಇದರಿಂದ ಅನುಕೂಲವಾಗಿಲ್ಲ. ಏನು ಸ್ವಾಮಿ, ಇಷ್ಟೊಂದು ಹಣ ಖರ್ಚು ಮಾಡಿ ವಿದ್ಯುಚ್ಛಕ್ತಿಯನ್ನು ತಯಾರಿಸಿದ್ದರೂ ರೈತನಿಗೆ ವ್ಯವಸಾಯ ಮಾಡಲಿಕ್ಕೆ ವಿದ್ಯುಚ್ಛಕ್ತಿ ಕೊಡಲು ಇಷ್ಟೊಂದು ತಾಪತ್ರಯವಾಗಿದೆ ಎಂದು ರೈತರೆಲ್ಲಾ ಹಾಸ್ಯಮಾಡುತ್ತಿದ್ದಾರೆ. ಆದರೆ ಸರ್ಕಾರದವರ ಈ ದಿವಸ ರೈತನು ಆತನ ಕೆಲಸಕ್ಕೆ ಎಷ್ಟು ವಿದ್ಯುಚ್ಛಕ್ತಿಯನ್ನು ಬಳಸುತ್ತಾನೋ ಅಷ್ಟಕ್ಕೆ ಏನು ನ್ಯಾಯವಾಗಿ ಖರ್ಚು ತಗುಲುತ್ತದೋ ಅಷ್ಟನ್ನೂ ಆತ ಕೊಡಲು ತಯಾರಿದ್ದಾನೆ. ಆದರೆ ಆತನಿಗೆ ಈ ದಿವಸ ಪ್ರತಿಯೊಂದು ಬಾಬಿನಲ್ಲೂ ಖರ್ಚುವೆಚ್ಚಗಳು ಹೆಚ್ಚಾಗುತ್ತಿವೆ. ಆತನು ಈ ಒಂದು ಪಂಪು ಹಾಕತಕ್ಕದ್ದನ್ನೇ ತೆಗೆದುಕೊಂಡರೆ, ಆತ ಸುಮಾರು 10—15 ಸಾವಿರ ರೂಪಾಯಿಗಳನ್ನು ಇದಕ್ಕೆ ಖರ್ಚುಮಾಡಬೇಕಾಗಿದೆ. ಆದರೂ ಇದರಲ್ಲಿ ಸುಖವಿಲ್ಲ. ಆತನು ಹೀಗೆ ಈ ಯಂತ್ರದ ಮೇಲೆ 10–15 ಸಾವಿರ ರೂಪಾಯಿ ಹಾಕುವುದರ ಬದಲು ಬೇರೆ ಮತ್ತೆ ಯಾವುದಾದರೊಂದು ಉದ್ಯಮದ ಮೇಲೆ ಹಾಕಿದ್ದರೆ ಆತನಿಗೆ ಸರಾಸರಿ ಸಾವಿರಾರು ರೂಪಾಯಿ ಲಾಭ ಸಂಪಾದಿಸಲು ಸಾಧ್ಯವಾಗುತ್ತಿತ್ತು. ಹೀಗೆ ಈ ದಿವಸ ವ್ಯವಸಾಯ ಮಾಡತಕ್ಕ ಮನುಷ್ಯನು ಆತನ ಖರ್ಚುವೆಚ್ಚಗಳನ್ನೆಲ್ಲಾ ಪಟ್ಟಿ ಹಾಕುತ್ತಾ ಹೋದರೆ ಈ ವ್ಯವಸಾಯ ಮಧ್ಯದಲ್ಲೇ ನಿಂತು ಹೋಗುತ್ತಿತ್ತು. ಆತನು ಈ ದಿವಸ ಒಂದು ಕೂಲಿ ಆಳಿಗೆ ಒಂದು ದಿವಸಕ್ಕೆ ಒಂದೂವರೆ ರೂಪಾಯಿ ಕೂಲಿ ಕೊಡಬೇಕಾಗಿದೆ. ಒಂದೊಂದು ವೇಳೆ ಎರಡು ರೂಪಾಯಿ ಕೂಲಿ ಕೊಡತಕ್ಕ ಸಂದರ್ಭಗಳೂ ಇವೆ. ಇದರ ಜೊತೆಗೆ ಆ ವ್ಯವಸಾಯಗಾರ ತಾನೊಬ್ಬನೇ ಕಷ್ಟಪಡುವುದಲ್ಲದೆ, ತಾನೂ, ತನ್ನ ಹೆಂಡತಿ ಮಕ್ಕಳು ಎಲ್ಲರೂ ಕಷ್ಟಪಟ್ಟು ದುಡಿದರೂ ಇಷ್ಟೆಲ್ಲಾ ಖರ್ಚುಮಾಡಿದರೂ, ಆತನಿಗೆ ಸಿಕ್ಕತಕ್ಕದ್ದು ವರ್ಷದಲ್ಲಿ ಕೇವಲ 3 ತಿಂಗಳ ಜೀವನಕ್ಕಾಗುವ ಗ್ರಾಸ ಮಾತ್ರ. ಇನ್ನುಳಿದ 9 ತಿಂಗಳಿನ ಜೀವನೋಪಾಯಕ್ಕೆ ಅವನು ಸಾಲಮಾಡಿ, ಅದನ್ನು ತೀರಿಸಲು ಯತ್ನವಿಲ್ಲದೆ ದಿನೇ ದಿನೇ ದರಿದ್ರನಾಗುತ್ತಿದ್ದಾನೆ.

ನಾನು ಹೇಳಬೇಕೆಂದರೆ, ತಾವು ಈ ದಿವಸ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಈ ವಿದ್ಯುಚ್ಛಕ್ತಿಯನ್ನು ತಯಾರಿಸಿರುವುದೆಲ್ಲಾ ಕೇವಲ ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕ ಮನೆಗಳ ಶೃಂಗಾರಕ್ಕಾಗಿ ಹೊರತು ರೈತನ ಸುಖಕ್ಕಾಗಿ ಅಲ್ಲವೆಂದು ಹೇಳಬೇಕಾಗುತ್ತದೆ. ಇದರ ಜೊತೆಗೆ ಪಟ್ಟಣದಲ್ಲಿರತಕ್ಕವರಿಗೆ ರೈತ ಬೆಳೆದ ಕಾಳನ್ನು ಒತ್ತಾಯಮಾಡಿ ತಂದುಕೊಡುತ್ತಿದ್ದೀರಿ. ಇಂಥ ರೈತನಿಗೆ 6 ಕಾಸಿನಿಂದ 1 ಆಣೆಗೆ ದರವನ್ನು ಏರಿಸಿರುವುದು ತುಂಬ ಅನ್ಯಾಯ. ಇದರಿಂದ ಅವನು ತನ್ನ ವ್ಯವಸಾಯದ ಕಸುಬನ್ನೇ ನಿಲ್ಲಿಸಬೇಕಾಗಿ ಬರಬಹುದು, ಇದರಿಂದ ತುಂಬಾ ಅನಾನುಕೂಲವಿದೆಯೆಂದು ಹೇಳುತ್ತೇನೆ. ಆದುದರಿಂದ ನಾನು ತಮಗೆ ಸಲಹೆಮಾಡುವುದೇನೆಂದರೆ, ತಮಗೆ ಇನ್ನೂ 50 ಸಾವಿರ ರೂಪಾಯಿ ಖರ್ಚು ಹೆಚ್ಚಾದರೂ ಚಿಂತೆಯಿಲ್ಲ. ಈ ಆಹಾರ ಧಾನ್ಯಗಳ ಬೆಳೆಗೆ ದರ ಏರಿಸಿರುವುದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಹೊನ್ನಾಳಿ ತಾಲ್ಲೂಕಿನಲ್ಲಿ ಮಳೆ ಕಡಮೆ. ಅಲ್ಲಿನ ರೈತರು ವಿದ್ಯುಚ್ಛಕ್ತಿ ಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ಶಿವಮೊಗ್ಗಾ ಜಿಲ್ಲೆಯಲ್ಲೇ ವಿದ್ಯುಚ್ಛಕ್ತಿ ತಯಾರಾಗುತ್ತಿದ್ದು ಶಿವಮೊಗ್ಗದ ಬಳಿಯಲ್ಲೇ ಇದು ಹಾದು ಹೋಗಿ ಬೆಂಗಳೂರಿನ ಜನರಿಗೆ ಅನುಕೂಲವಾಗುತ್ತಿದೆಯೇ ಹೊರತು ಈ ವಿದ್ಯುಚ್ಛಕ್ತಿ ತಯಾರಾಗುವ ಅಕ್ಕಪಕ್ಕದ ಗ್ರಾಮಗಳಿಗೆ ಇದರಿಂದ ಏನೂ ಉಪಯೋಗವಾಗುತ್ತಿಲ್ಲ. ಸರ್ಕಾರದವರು ಇದಕ್ಕೆ ಕೂಡಲೇ ಗಮನ ಕೊಟ್ಟು ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಕಡೆಯದಾಗಿ ನಾನು ಸರ್ಕಾರಕ್ಕೆ ಅರಿಕೆಮಾಡಿಕೊಳ್ಳುವುದೇನೆಂದರೆ ಈ ವ್ಯವಸಾಯಗಾರರ ಕಡೆಗೆ ತಾವು ಒಂದು ಹೆಚ್ಚಿನ ಸಹಾನುಭೂತಿಯನ್ನು ತೋರಿಸಿ ವ್ಯವಸಾಯಗಾರರಿಗೆ ಸುಲಭದಲ್ಲಿ ಈ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ನಾನು ಸಲಹೆಮಾಡುತ್ತೇನೆ.

ಜೋಗ್‌ನಲ್ಲಿ ಸುಮಾರು 50,000 K.W. ವಿದ್ಯುತ್ ಉಪಯೋಗವಾಗುತ್ತಿಲ್ಲ. ಇದನ್ನೆಲ್ಲ ಉಪಯೋಗಿಸುವವರೆಗೆ, ದೇಶದಲ್ಲಿ ಆಹಾರದ ಕೊರತೆ ನೀಗುವವರೆಗೆ, ನೀರೆತ್ತಿ ಬೆಳೆಯುವ ಪಂಪ್‌ಗಳಿಗೆ ಹಿಂದಿನ ದರದಂತೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾಗಿ ವಿನಂತಿ. ಹೆಚ್ಚು ಆಹಾರ ಬೆಳೆಯಿರಿ ಎಂಬ ಯೋಜನೆಗೆ ಲಕ್ಷಾಂತರ ರೂಪಾಯಿ ಹಣ ಖರ್ಚುಮಾಡುತ್ತಿರುವಿರಿ. ಈ ಕೆಲಸಕ್ಕೂ ಪ್ರಚಾರವೆಂದು ತಿಳಿದು ಒದಗಿಸಿರಿ.

(Sri B. T. Kemparaj rose)

Mr. DEPUTY SPEAKER.—We have got only ten minutes. If you are anxious to hear the Government, ten minutes are not sufficient.

Sri B. T. KENMPARAJ.—The time may extended, Sir. Many members are anxious to speak. I have sent in three cut motions.

Mr. DEPUTY SPEAKER.—Is it the idea of the House to extend the time by half an hour ?

HON'BLE MEMBERS.—Yes.

Mr. DEPUTY SPEAKER.—Sri Kemparaj may speak.

ಶ್ರೀ ಬಿ. ಟಿ. ಕೆಂಪರಾಜ್ (ನೆಲಮಂಗಲ ಅನುಸೂಚಿತಜಾತಿಗಳು).—ಸ್ವಾಮಿ, ನಾನು ಹೆಚ್ಚಿಗೆ ಕಾಲವನ್ನೇನು ತೆಗೆದುಕೊಳ್ಳುವುದಿಲ್ಲ. ಒಂದು ವಿಚಾರವನ್ನು ಮಾತ್ರ ಸರ್ಕಾರದವರ ಗಮನಕ್ಕೆ ತರಲು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. 10—15 ಹಳ್ಳಿಗಳನ್ನು ಕೂಡಿಸಿ ಸೋಮೇನಹಳ್ಳಿ ಸರ್ಕಲ್ ಎಂಬುದಾಗಿ ಒಂದು ಸರ್ಕಲ್‌ಮಾಡಿದ್ದಾರೆ. ಆ ಗ್ರಾಮಗಳವರು ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಬಹಳ ಕಾಲದಿಂದಲೂ ಸರ್ಕಾರಕ್ಕೆ ಒತ್ತಾಯಪಡಿಸುತ್ತಲೇ ಬಂದಿದ್ದಾರೆ. ಅದಕ್ಕಾಗಿ ಈ ಹಿಂದೆಯೇ ಒಂದು ಸ್ಕೀಮನ್ನು ತಯಾರಿಸಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆಂದು ಹೇಳಿದ್ದರು. ಆದರೆ ಏನು ಕಾರಣದಿಂದಲೋ ಕೆಲಸ ಮಾತ್ರ ಇನ್ನು ನಡೆದಿಲ್ಲ. ಆ ಯೋಜನೆಯನ್ನು ಮಂಜೂರುಮಾಡಿ ಅದನ್ನು ಕಾರ್ಯಗತಮಾಡಿಲ್ಲ ಈ ವರ್ಷವೇ ಇದನ್ನು ಮಂಜೂರುಮಾಡಿಸಿ ಕಾರ್ಯಗತಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ನಾನು ಹೇಳಬೇಕಾಗಿದೆ. ವ್ಯವಸಾಯಗಾರರಿಗೆ ವಿದ್ಯುಚ್ಛಕ್ತಿ ಪಂಪುಗಳಿಗೆ ಹೆಚ್ಚು ದುಡ್ಡು ಹಾಕಿದ್ದಾರೆ ಎಂಬ ವಾದವಿದೆ. ಈಗ ಸ್ವಲ್ಪ ಹೆಚ್ಚಿಗೆ ಮಾಡಿರುವುದು ನಿಜವಾಗಿಯೂ ಅವರಿಗೆ ಒಂದು ಹೆಚ್ಚಿನ ಹೊರೆಯೆಂದು ನಾನು ನಂಬಲಾರೆ. ಕಾರಣ ಇಷ್ಟೆ. ವಿದ್ಯುಚ್ಛಕ್ತಿ ಪಂಪುಗಳನ್ನು ತೆಗೆದುಕೊಳ್ಳುವ ವ್ಯಕ್ತಿಗಳು ಕೇವಲ ದೊಡ್ಡ ವ್ಯವಸಾಯಗಾರರು ಹಾಗೂ absentee landlords ಗಳೇ ಹೊರತು ಸಣ್ಣ ಪುಟ್ಟ ಬೇಸಾಯಗಾರರಲ್ಲ. ಆದ್ದರಿಂದ ಇಂಥವರಿಗೆ ಕೊಂಚ ಹೆಚ್ಚಿನ ಚಾರ್ಜನ್ನು ಹಾಕುವುದೇನೂ ತೊಂದರೆಯಿಲ್ಲ. ಹೀಗಿರುವಲ್ಲಿ ಶ್ರೀಮಾನ್ ಮರಿಯಪ್ಪನವರು ಮೈಸೂರು ವ್ಯವಸಾಯಗಾರರ ಸಂಘದ ವೈಸ್ ಪ್ರೆಸಿಡೆಂಟರಾಗಿದ್ದೂ ಸಹ ಈ ರೀತಿಯಾಗಿ ವಾದಿಸಿದ್ದು ನನಗೆ ನಿಜವಾಗಿಯೂ ಆಶ್ಚರ್ಯವನ್ನುಂಟುಮಾಡಿದೆ. ಬಡ ರೈತರಿಗೆ ಇದು ಕಷ್ಟವನ್ನುಂಟುಮಾಡುತ್ತದೆಂದು ಹೇಳಿದರು. ಅವರು ಭಾವಿಸುವಂಥ ಬಡ ರೈತ ಬಾವಿಯಿಂದ ಏತದ ಮೂಲಕ ನೀರೆತ್ತಿ ವ್ಯವಸಾಯ ಮಾಡುತ್ತಾನೆ, ಕಷ್ಟಪಟ್ಟು ಕೆಲಸ ಮಾಡುತ್ತಾನೆ. ಅಂಥವನಿಗೆ ಪಂಪು ಬೇಕೆ? ಪಂಪಿನಿಂದ ವ್ಯವಸಾಯಮಾಡುತ್ತೇನೆಂದು ಅವನೇನೋ ಹೇಳುತ್ತಿಲ್ಲ. ಎಲ್ಲಿ ಪಂಪುಗಳು ಬೇಕು, ಪಂಪಿನ ಸೌಕರ್ಯಗಳು ಬೇಕು ಎಂಬ ವಾದ ಎಲ್ಲಿ ಬರುತ್ತದೆ ಎಂದರೆ ಎಲ್ಲಿ ಹೆಚ್ಚಿನ ಜಮೀನುಗಳನ್ನಿಟ್ಟುಕೊಂಡು, ಹೆಚ್ಚಿನ ಆಳುಕಾಳುಗಳನ್ನು ಏರ್ಪಡಿಸಿ ಕೆಲಸಮಾಡಲು ಸಾಧ್ಯವಿಲ್ಲವಾಗಿದೆ, ಅಲ್ಲಿ ಅಂಥವರು ಎಲೆಕ್ಟ್ರಿಕ್ ಪಂಪುಗಳ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಆದ್ದರಿಂದ 6 ಕಾಸು ಇರುವುದನ್ನು ಸ್ವಲ್ಪ ಹೆಚ್ಚುಮಾಡಿರುವುದೇನೂ ಅವರಿಗೆ ಹೆಚ್ಚಿನ ಹೊರೆಯಿಲ್ಲವೆಂದೂ ಸರ್ಕಾರದವರು ಮಾಡಿರುವುದು ಸರಿಯಾಗಿದೆಯೆಂದೂ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಟಿ. ಮರಿಯಪ್ಪ (ಮೈಸೂರು ಸಿಟಿ—ಉತ್ತರ ತಾಲ್ಲೂಕು).—ಮಾನ್ಯ ಅಧ್ಯಕ್ಷರೇ, ಈ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಒಂದು ಕ್ರಮವರಿತು ಯೋಜನೆಯಿಲ್ಲವೆಂದು ಶ್ರೀಮಾನ್ ಗೋಪಾಲಗೌಡರು ಹೇಳಿದರು. ಪ್ರಾಯಶಃ ಅವರಿಗೆ ಈ ಇಲಾಖೆಯ ಅರಿವು ಅಷ್ಟಾಗಿ ಇಲ್ಲವೆಂದು ನಾನು ಹೇಳಬೇಕಾಗಿದೆ. ನಮ್ಮ ಸರ್ಕಾರದ ಇಲಾಖೆಗಳ ಪೈಕಿ ಒಂದು ಗೊತ್ತಾದ ಗುರಿಯಿಟ್ಟುಕೊಂಡು ಕಾರ್ಯ ನಡೆಸುವ ಇಲಾಖೆಯೆಂದರೆ ಅದು ವಿದ್ಯುಚ್ಛಕ್ತಿ ಇಲಾಖೆ. ನಮ್ಮ ಅವಶ್ಯಕತೆಗಳೇನು, ಯಾವ ರೀತಿ ಅವನ್ನು ಪೂರೈಸಬೇಕೆಂದು ಹೇಳಿ ಎಲ್ಲ

(ಶ್ರೀ ಟಿ. ಮರಿಯಪ್ಪ.)

ಅಂಕಿ ಅಂಶಗಳನ್ನು ಸಂಗ್ರಹಿಸಿಕೊಂಡು ಅದಕ್ಕೆ ತಕ್ಕಂತೆ ಕಾರ್ಯಕ್ರಮ ಅಳವಡಿಸಿಕೊಂಡು ಬರುವ ಇಲಾಖೆಯೆಂದರೆ ಅದು ವಿದ್ಯುಚ್ಛಕ್ತಿ ಇಲಾಖೆ. ಪ್ರಾಯಶಃ ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಆ ಇಲಾಖೆ ಒಂದು comprehensive and planned basis ಮೇಲೆ ಕೆಲಸ ನಡೆಸುತ್ತಿದೆ. ಈಗ ನಮ್ಮಲ್ಲಿ ಜೋಗಿನಿಂದ ತಯಾರಾಗುವ ವಿದ್ಯುಚ್ಛಕ್ತಿ 1956ರ ಆಖೈರಿನ ಹೊತ್ತಿಗೆ ಪ್ರಾಯಶಃ ಪೂರೈಸುತ್ತದೆ, ಆ ಮೇಲೆ ತೊಂದರೆ ಬರುತ್ತದೆಂದು ಶಂಕೆ ಕೂಡ ವ್ಯಕ್ತಪಡಿಸಿ ಕೇಂದ್ರ ಸರ್ಕಾರದವರು ನಮ್ಮ ಸಹಾಯಕ್ಕೆ ಬಂದು ಹೊನ್ನೆಮರಡು ಯೋಜನೆಯನ್ನು ಮಾಡಿಕೊಳ್ಳಲು ಸಹಾಯ ಮಾಡಬೇಕೆಂದು ಕೇಳುತ್ತಿದ್ದಾರೆ. ಪ್ರಾಯಶಃ ಸ್ವಲ್ಪ ಹೆಚ್ಚಿಗೆ ಒತ್ತಾಯ ಹಾಕಿದರೆ, ಆ ಅವಶ್ಯಕತೆಯನ್ನು ಪೂರೈಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಬಹುದು.

ಆ ಮೇಲೆ, ಮೈಸೂರು ದೇಶದಲ್ಲಿ ತಯಾರಾಗುವ ವಿದ್ಯುಚ್ಛಕ್ತಿಯನ್ನೂ ಕೂಡ ದೇಶದಲ್ಲಿ ಹೇಗೆ ಪ್ರಸರಿಸಿದ್ದಾರೆಂದರೆ, ಅದೂ ಒಂದು planned basis ಮೇಲೆ. ಆದರೂ ಒಂದು ಅಂಶವನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಎಲ್ಲಿ ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡು ಹೋಗಿಯೂ ಹೆಚ್ಚಿಗೆ ಜನರು ಉಪಯೋಗಿಸಿಲ್ಲವೆಂದು ಹೇಳಬಹುದೋ ಆ ಕಡೆ ವಿದ್ಯುಚ್ಛಕ್ತಿ ಕಾರ್ಯಕ್ರಮ ಕೈಕೊಳ್ಳುವುದರಲ್ಲಿ ಎಷ್ಟು ಗ್ರಾಮಗಳವರು ವಿದ್ಯುಚ್ಛಕ್ತಿ ತೆಗೆದುಕೊಳ್ಳುತ್ತಾರೆ, ವ್ಯವಸಾಯಕ್ಕೆ ಎಷ್ಟು ಉಪಯೋಗವಾಗುತ್ತದೆ ಎಂಬುದನ್ನು ಸ್ವಲ್ಪ ನೋಡಿಕೊಡುತ್ತಿದ್ದಾರೆ ಅಷ್ಟೆ. ಏಕೆಂದರೆ, ಅಲ್ಲಿ ಕೊಟ್ಟರೂ ಎಲ್ಲರೂ ತೆಗೆದುಕೊಳ್ಳುವುದಕ್ಕೂ ಸಾಧ್ಯವಾಗುವುದಿಲ್ಲ. ಏಕೆಂದರೆ ವಿದ್ಯುಚ್ಛಕ್ತಿ ಮನೆಗಳಿಗೆ ಹಾಕಿಸಿಕೊಳ್ಳಬೇಕಾದರೂ ಅವರುಗಳು (ಜನರು) ಮಾಡಿಕೊಳ್ಳಬೇಕಾದ ಕೆಲವು ಸಿದ್ಧತೆಗಳೂ ಇವೆ. ಎಷ್ಟೋ ಸಾಮಗ್ರಿಗಳು ಬೇಕಾಗಿರುತ್ತವೆ. ಕೆಲವು ಸಂದರ್ಭಗಳಲ್ಲಿ ಆ ಸಾಮಗ್ರಿಗಳೂ ದೊರಕುವುದಿಲ್ಲ. ಆದ್ದರಿಂದ ಇದನ್ನೆಲ್ಲಾ ಒಂದು ಕ್ರಮವಾಗಿ ಮಾಡಿಕೊಂಡು ಹೋಗಬೇಕೇ ಹೊರತು, ಬಾಗೇಪಲ್ಲಿ ತಾಲ್ಲೂಕಿಗೆಲ್ಲಾ ಒಂದೇ ಸಾರಿ ವಿದ್ಯುಚ್ಛಕ್ತಿ ಒದಗಿಸಲಿಕ್ಕೆ ತೆಗೆದುಕೊಂಡರೆ, ಎಲ್ಲಾ ಮನೆಗಳವರೂ, ಎಲ್ಲಾ ಡೀಸಲ್ ಆಯಿಲ್ ಎಂಜಿನ್‌ಗಳವರೂ ಎಲೆಕ್ಟ್ರಿಸಿಟಿಯ ಉಪಯೋಗವನ್ನು ಪಡೆಯುವುದಕ್ಕಾಗುತ್ತದೆಯೇ? ಯಾವ ದೇಶವನ್ನೇ ತೆಗೆದುಕೊಳ್ಳಲಿ, ಆದಷ್ಟು ಕಡಮೆ ಬೆಲೆಗೆ ವಿದ್ಯುಚ್ಛಕ್ತಿಯನ್ನು ಎಲ್ಲರಿಗೂ ಹಂಚುವುದು ಮುಖ್ಯ. ರಷ್ಯಾ ಇದೇ ರೀತಿ ಮಾಡಿ ಪ್ರಗತಿಯನ್ನು ಸಾಧಿಸಿದೆ. ಅದನ್ನೇ ಮೈಸೂರು ದೇಶದಲ್ಲೂ ಮಾಡಬೇಕು. ಶ್ರೀಮಾನ್ ಭೀಮಪ್ಪನಾಯಕರು ಗೋರಿಬಿದನೂರಿನ ಒಂದು ಉಹಾಹರಣೆ ಕೊಟ್ಟರು. ಶೇಕಡ 200 ರಷ್ಟು ಆದಾಯ ಅದು ಕೊಡುತ್ತಿದೆ. ಹಾಗೆಯೇ ಶಿವಮೊಗ್ಗ ಒಂದು ಊರನ್ನು ತೆಗೆದುಕೊಂಡರೆ, ಅದು 75% ಲಾಭ ಕೊಡುತ್ತಿದೆಯೆಂದು ನನಗೆ ನೆನಪಿರುವ ಹಾಗಿದೆ. ಈ ಇಲಾಖೆಯಲ್ಲಿ ಒಂದು ಪಟ್ಟಿಯನ್ನು ಕೂಡ ಮಾಡಿ 200% ಲಾಭ ಕೊಡುವುದು, 100% ಲಾಭ ಕೊಡುವುದು, 67%, 50% ಲಾಭ ಕೊಡುವುದು, ಕೊನೆಗೆ 2% ಲಾಭಕೊಡುವುದನ್ನೂ ಕೂಡ ಸೇರಿಸಿ ತೋರಿಸಿದ್ದಾರೆ.

ಒಬ್ಬ ಸದಸ್ಯರು.—100ಕ್ಕೆ 200 ಬರುವುದಾದರೆ ದುಡ್ಡಿನ ಯೋಚನೆ ಏಕೆ?

ಶ್ರೀ ಟಿ. ಮರಿಯಪ್ಪ.—ಕ್ರಮೇಣ ಅದಾಗುತ್ತದೆಂಬುದನ್ನು ಹೇಳುವುದಕ್ಕೆ ಇದೆಲ್ಲಾ ಹೇಳಿದೆ. ಗೋರಿಬಿದನೂರಿನಲ್ಲಿಯೂ ಸಹ ಮೊದಲು invest ಮಾಡಿದ ಹಣದ ಮೇಲೆ ಕಡಮೇ ಬರುತ್ತಿತ್ತು. ಕ್ರಮೇಣ ಹೆಚ್ಚು ಹೆಚ್ಚು ಜನರು ಉಪಯೋಗ ಮಾಡಲು ಷುರುಮಾಡಿದ್ದರಿಂದ ಈಚೆಗೆ ಹೆಚ್ಚಿಗೆ ಬಂದಿದೆ.

ಆದ್ದರಿಂದ ಪ್ರಸ್ತುತ ಸಂದರ್ಭ ನಾವು ಮಾಡಬೇಕಾದ್ದೇನೆಂದರೆ, ಕೇಂದ್ರ ಸರ್ಕಾರದವರಿಗೆ ಒತ್ತಾಯ ಮಾಡಿ ಹೊನ್ನೆಮರಡು ಯೋಜನೆಗೆ ತಳಹದಿ ಹಾಕಿಕೊಂಡು ಕೆಲಸ ಪ್ರಾರಂಭಮಾಡಿಕೊಳ್ಳುವುದು ಒಂದು. ಎರಡನೆಯದಾಗಿ, ವ್ಯವಸಾಯಕ್ಕೆ, ಆಹಾರ ಪದಾರ್ಥಗಳನ್ನು ಬೆಳೆಯತಕ್ಕಂಥ ಒಂದು ಉದ್ಯಮಕ್ಕೆ ಆರುಕಾಸಿನ ಮೇಲೆ ದರ ಹಾಕಿದರೆ ಬಹಳ ಕಷ್ಟವಾಗುತ್ತದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಒಬ್ಬ ಸದಸ್ಯರು.—ತಮ್ಮ ಕಾಲದಲ್ಲೇ ಇದನ್ನು ಮಾಡಿದ್ದು!

ಶ್ರೀ ಟಿ. ಮರಿಯಪ್ಪ.—ದಯವಿಟ್ಟು ಕ್ಷಮಿಸಬೇಕು. ಆರು ಕಾಸನ್ನು ಒಂದಾಣೆಮಾಡಿದ್ದು ನಮ್ಮ ಕಾಲದಲ್ಲಿ ಎಂದರೆ, ಯಾವ ರೀತಿಯಾಗಿ ಪರೀಕ್ಷಾರ್ಥವಾಗಿ ನೋಡಿದ್ದೇವೆಂಬುದು ಶ್ರೀ ಎ. ಜಿ. ರಾಮಚಂದ್ರರಾಯರಿಗೆ ಗೊತ್ತು. ಒಂದು ಎಕರೆ ಬತ್ತ ಬೆಳೆಯಬೇಕಾದರೆ ಕನಿಷ್ಠಪಕ್ಷ 30—32 ರೂಪಾಯಿಗಳಾಗುತ್ತವೆ — ಅದೂ ಡಿಪ್ರಿಸಿಯೇಷನ್ ಇಲ್ಲದೆ. ಡಿಪ್ರಿಸಿಯೇಷನ್ನನ್ನೂ ಸೇರಿಸಿಕೊಂಡರೆ, ಕೊನೆಯಪಕ್ಷ 32–33 ರೂಪಾಯಿಗಳಾಗುತ್ತವೆ. ಇದರ ಜೊತೆಗೆ ಪಂಪ್‌ಹೌಸಿನ ಕಾವಲುಗಾರನ ಸಂಬಳವನ್ನು ಸೇರಿಸಿದರೆ ಒಂದು ಎಕರೆಗೆ 40 ರೂಪಾಯಿಗಳವರೆಗೂ ಬರುತ್ತದೆಂದು ಇಲಾಖೆಯವರು ಲೆಕ್ಕ ಹಾಕಿದ್ದಾರೆ. ಇದನ್ನು ಗಮನಕ್ಕೆ ತೆಗೆದುಕೊಂಡು ನಾವು ಹೊರಡಿಸಿದ ಸರ್ಕಾರಿ ಆರ್ಡರಿನ ರೀತಿ ಹೇಗಿದೆಯೆಂದರೆ, ಪಂಪನ್ನು ಹಾಕಿದ್ದರೂ, ಅರ್ಧಕ್ಕಿಂತ ಹೆಚ್ಚುಭಾಗದಲ್ಲಿ ಆಹಾರ ಪದಾರ್ಥಗಳನ್ನು ಬೆಳೆದಿದ್ದರೆ ಅರ್ಧಾಣೆಯಂತೆ ತೆಗೆದುಕೊಳ್ಳಬೇಕೆಂತಲೂ, ಅರ್ಧಕ್ಕಿಂಥ ಹೆಚ್ಚಿಗೆ ಭಾಗದಲ್ಲಿ commercial crops ಬೆಳೆದಿದ್ದರೆ ಒಂದಾಣೆಯಂತೆ ವಸೂಲು ಮಾಡಬೇಕೆಂತಲೂ ಹೇಳಿದೆ. ಕೆಲವರು ಹೇಳಬಹುದು, ತಪ್ಪು ಲೆಕ್ಕಗಳನ್ನು ಕೊಡುತ್ತಾರೆ, 'commercial crops ಬೆಳೆದರೂ, food grains ಬೆಳೆಯುತ್ತಿದ್ದೇವೆಂದು ಹೇಳಬಹುದು. ಅಂಥಾದ್ದು ಎಲ್ಲಾ ಕಡೆಯೂ ಇರುತ್ತದೆ. ಆದರೆ, ಅಂಥ ಕೇಸುಗಳು ನಮ್ಮ ಗಮನಕ್ಕೆ ಬಂದು ತಪ್ಪಿಗೆ ಸಿಕ್ಕಿಹಾಕಿಕೊಂಡಿರುವವರ ಸಂಖ್ಯೆ ಕಡಮೆಯೆಂದೇ ಹೇಳಬೇಕು. ಆದ್ದರಿಂದ ಇಂಥ ತಪ್ಪುಗಳನ್ನೆಲ್ಲಾ ನೋಡಿಕೊಂಡು ಎಲ್ಲರಿಗೂ ಒಂದೇ ಶಾಸನ ಮಾಡಬೇಕೆಂದೂ ಹೇಳುವುದು ಸರಿಯಲ್ಲ. ಅಲ್ಲದೆ, ಯಾವುದಾದರೂ ಒಂದು ಹೊಸ ಕೈಗಾರಿಕೆಯನ್ನು ತೆಗೆದುಕೊಳ್ಳಿ, ಅದಕ್ಕೆಷ್ಟೋ ಅನುಕೂಲಮಾಡಿಕೊಡುತ್ತೀರಿ. ಆದಷ್ಟು ಕಮ್ಮಿ ದರದಲ್ಲಿ ಅವರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುತ್ತೀರಿ. ಆಕ್ಟ್ರಾಯ್ ಜಾಸ್ತಿಯಾಯಿತೆಂದರೆ, ಆ ಕೈಗಾರಿಕೆ ಪೈಪೋಟಿಗೆ ನಿಲ್ಲಲಾರದೆಂದು ಹೇಳಿ ರಕ್ಷಣೆಕೊಡುತ್ತೀರಿ, expert duty ಕಮ್ಮಿಮಾಡಿಕೊಡುತ್ತೀರಿ. ಇಷ್ಟೆಲ್ಲಾ ಅನುಕೂಲತೆಗಳನ್ನು ಮಾಡಿಕೊಟ್ಟು ಕೈಗಾರಿಕೆಗಳನ್ನು ಕಾಪಾಡುತ್ತೇವೆ. ಅದೇ ರೀತಿ ವ್ಯವಸಾಯಕ್ಕೂ ಕೂಡ ಅದರ ರಕ್ಷಣೆಗೆ ಬೇಕಾದ ಅನುಕೂಲತೆಗಳನ್ನು ಮಾಡಿಕೊಡದೆ ಹೋದರೆ ವ್ಯವಸಾಯ ಅಭಿವೃದ್ಧಿಗೆ ಬರುವುದಿಲ್ಲ.

ಎರಡನೆಯದಾಗಿ, ಇನ್ನೂ ಒಂದು ದೃಷ್ಟಿಯಿಂದ ಇದನ್ನು ನೋಡುವುದಾದರೆ, ತಾವು ನದಿಯಿಂದ ನಾಲೆಯ ಮೂಲಕ ನೀರು ತೆಗೆದುಕೊಳ್ಳಬೇಕಾದರೆ ಕಂಟ್ರಿಬ್ಯೂಷನ್ ಹಾಕುತ್ತೀರಿ. ಅದರಂತೆ ಆತ ಕಂಟ್ರಿಬ್ಯೂಷನ್ ಕೊಟ್ಟು

ಬಿಟ್ಟರಾಯಿತು. ಅವನು ಬತ್ತವನ್ನೇ ಬೆಳೆಯಲಿ, ಕಬ್ಬನ್ನೇ ಬೆಳೆಯಲಿ ಅವನನ್ನು ಮಾತನಾಡಿಸುವುದಿಲ್ಲ. ಕಬ್ಬು ಬೆಳೆದನೆಂದು ಹೆಚ್ಚಿಗೆ ಕಂಟ್ರಿಬ್ಯೂಷನ್ ಕೇಳುವುದಿಲ್ಲ. ಜೊತೆಗೆ ನೀರನ್ನು ನಾಲೆಯಿಂದ ತೆಗೆದುಕೊಳ್ಳುವ ಕಷ್ಟವೂ ಅವನಿಗಿಲ್ಲ. ಆದರೆ, ಅದಕ್ಕೆ ಬದಲು ಒಂದು ಬಾವಿ ತೆಗೆದು ಪಂಪ್ ಹಾಕಿಕೊಳ್ಳಬೇಕಾದರೆ ಅವನು ಪಡಬೇಕಾದ ಕಷ್ಟವೆಷ್ಟು, ಅವನ investment ಎಷ್ಟು, ಆ ಮೇಲೆಯೂ ಅವನು ಕೊಡಬೇಕಾದ ಚಾರ್ಜೆಷ್ಟು ಎಂಬುದನ್ನು ನೋಡಿ. ಇದನ್ನೆಲ್ಲಾ ಲೆಕ್ಕ ಹಾಕಿದರೆ, ಪಂಪ್ ಹಾಕಿ ನೀರು ಪಡೆದು ಕೊಳ್ಳುವುದರಲ್ಲಿ ಅವನಿಗಾಗುವ ಕಷ್ಟ ನಷ್ಟಗಳಿಗೂ, ಕಂಟ್ರಿಬ್ಯೂಷನ್ ಕೊಟ್ಟು ನಾಲೆಯಿಂದ ನೀರು ತೆಗೆದುಕೊಳ್ಳುವವನ ಕಷ್ಟನಷ್ಟಗಳಿಗೂ ಅರ್ಥಾತ್ ಸಂಬಂಧವಿಲ್ಲ. ಈ ದೃಷ್ಟಿಯಿಂದ ಪಂಪಿನ ಚಾರ್ಜ್‌ಗಳನ್ನೂ ಎಷ್ಟು ಕಡಮೆಮಾಡಿದರೆ ಅಷ್ಟು ಒಳ್ಳೆಯದೆಂದು ಹೇಳುತ್ತೇನೆ.

12-30 P.M.

ಎರಡನೆಯದಾಗಿ ಪ್ರತಿಫಸಲಿಗೂ ಪವರ್ ಚಾರ್ಜು ಕೊಡಬೇಕು. ಆದರೆ ಒಂದು ಸಾರಿ ಕೆರೆಯಲ್ಲಿ ನೀರು ತುಂಬಿದರೆ ಎರಡು ಬೆಳೆ ಮಾಡಿದರೂ ಕಂದಾಯ ಹತ್ತು ರೂಪಾಯೋ ಕೊಡುವುದು. ಪಂಪು ನಡೆಸಿದರೆ ಪವರ್ ಚಾರ್ಜು ಕೊಡಬೇಕು. ಪ್ರತಿತಿಂಗಳೂ 60, 70, 80 ರೂಪಾಯಿ ಪವರ್ ಚಾರ್ಜು ಕೊಡಬೇಕಾಗುತ್ತದೆ. ಸಕಾಲಕ್ಕೆ ಕೊಡದಿದ್ದರೆ ಇಲಾಖೆಯವರು ಡಿಸ್‌ಕನೆಕ್ಟ್ ಮಾಡುತ್ತಾರೆ. ಅದೇ ಕಂದಾಯ ಕೊಡಲು ನಿಧಾನವಾದರೆ ಸ್ವಲ್ಪ ತಾಳುತ್ತಾರೆ. ವಿದ್ಯುಚ್ಛಕ್ತಿ ಇಲಾಖೆ ಹಾಗಲ್ಲ, ತಕ್ಷಣ ಡಿಸ್‌ಕನೆಕ್ಟ್ ಮಾಡುತ್ತಾರೆ. ಕಂದಾಯವನ್ನು ಎರಡು ವರ್ಷದ ಮೇಲಾದರೂ ಕೊಡಬಹುದು. ಈ ವಿಚಾರವನ್ನು ಯಾವ ದೊಡ್ಡ ಮನುಷ್ಯರೂ ಕೊನೆಗೆ ವಿರೋಧಪಕ್ಷದ ನಾಯಕರಾದವರೂ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಆದುದರಿಂದ ವಿಷಯವನ್ನು ಸ್ವಲ್ಪ ಚೆನ್ನಾಗಿ ವಿಮರ್ಶೆ ಮಾಡಬೇಕು. ವಿದ್ಯುಚ್ಛಕ್ತಿ ಉಪಯೋಗಿಸಿದರೆ ಎಷ್ಟು ಖರ್ಚಾಗುತ್ತದೆ, ಪ್ರತಿಫಲ ಏನು ಬರುತ್ತದೆ ಎಂಬುದನ್ನೆಲ್ಲಾ ನೋಡಬೇಕು. ಕೈಗಾರಿಕೆಗಳಿಗೆ, ಹೀಟಿಂಗ್ ಸರ್ಕ್ಯೂಟ್‌ಗಳಿಗೆ, ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡಬೇಕು. ನಮ್ಮ ದೇಶದ ಎಲ್ಲಾ ಕಡೆಯೂ ಕೆರೆ ನಾಲೆಗಳಿಂದಲೇ ವ್ಯವಸಾಯ ಆಗುವುದಿಲ್ಲ. ಉತ್ತರ ಮತ್ತು ಈಶಾನ್ಯ ಭಾಗದಲ್ಲಿ ಮಳೆ ಸಕಾಲದಲ್ಲಿ ಸರಿಯಾಗಿ ಬರುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಮನವಿಮಾಡಿದ ಮೇಲೆ, ಎಲ್ಲೆಲ್ಲಿ ನೀರಿನ ಅನುಕೂಲತೆ ಇರುವುದಿಲ್ಲವೋ ಅಲ್ಲೆಲ್ಲಾ ಪಂಪುಗಳಲ್ಲಿ ನೀರೆತ್ತಿ ವ್ಯವಸಾಯ ಮಾಡುವುದಕ್ಕಾಗಿ ಮೊದಲು 50 ಲಕ್ಷ ರೂಪಾಯಿ ಕೊಟ್ಟರು, ಹೋದ ವರ್ಷ 50 ಲಕ್ಷ ರೂಪಾಯಿ ಕೊಟ್ಟರು, ಇನ್ನೂ ಕೊಡಲು ಸಿದ್ಧವಾಗಿದ್ದಾರೆ. ಮಳೆಯನ್ನು ನಂಬಿ ವ್ಯವಸಾಯ ಮಾಡತಕ್ಕ ರೈತ ಯಾವಾಗಲೂ ಜೂಜು ಆಡುವ ಹಾಗೆ ಎಂಬುದನ್ನು ಒಪ್ಪಲೇಬೇಕು. ಮನುಷ್ಯ ಒಂದು ಸಾರಿ ಕಷ್ಟಪಟ್ಟರೆ ಬೆಳೆ ಬರಬೇಕು. It is a security against the uncertainty of rainfall. ಎರಡು, ಮೂರು ಹತ್ತುಸಾವಿರ ರೂಪಾಯಿಗಳವರೆಗೂ ಖರ್ಚು ಮಾಡಿ ಬಾವಿಯನ್ನು ತೆಗೆಸುತ್ತಾರೆ, ಎರಡು ಜೊತೆ ಎತ್ತುಗಳನ್ನಿಟ್ಟು ವ್ಯವಸಾಯ ಮಾಡುತ್ತಾರೆ. ಇಂಥಾ ಸ್ಥಿತಿಯಲ್ಲಿರುವ ಅವರಿಗೆ ರಕ್ಷಣೆಯಿರಬೇಕು. ಖಾತರಿಯಿರಬೇಕು. ಆದಕಾರಣ ಪಂಪುಗಳನ್ನು ಕೊಡಬೇಕು. ಆಹಾರ ಬೆಳೆಯನ್ನು ಬೆಳೆಯುವುದಕ್ಕೆ ಕೊಡಲು ಎರಡು ವರ್ಷಗಳಿಂದ ಪ್ರಾರಂಭ ಮಾಡಿದ್ದೇವೆ. ಆದುದರಿಂದ ಇಷ್ಟು ಬೇಗ ವಿದ್ಯುಚ್ಛಕ್ತಿಯ ದರವನ್ನು ಹೆಚ್ಚು ಮಾಡಿದರೆ ಕಷ್ಟವಾಗುತ್ತದೆ. ಇಡೀ ಇಂಡಿಯಾ ದೇಶದಲ್ಲಿ ಒಂದು ಕಡೆ ಆಹಾರ ಬೆಳೆದರೆ ಇನ್ನೊಂದು ಕಡೆಗೆ ಕೊಡಬಹುದು. ಹೀಗಿರುವಾಗ ಜಾಸ್ತಿ ಮಾಡಿದರೆ ಹೇಗೆ? ಇದರಿಂದ ಎಷ್ಟೋ ಜನರು ಆಹಾರ ಬೆಳೆಯುವುದನ್ನು ಬಿಟ್ಟುಬಿಡುತ್ತಾರೆ. Absentee landlords ಏಕೆ ಪಂಪು ಹಾಕುವುದು ಎಂದು ಶ್ರೀ ಕೆಂಪರಾಜ್ ಹೇಳಿದರು. ಅವರು ಪಂಪು ಹಾಕಿದರೂ ಅದು ಕೆಟ್ಟುಹೋದರೆ ರೈತ ಸುಮ್ಮನೆ ಇದ್ದುಬಿಡುತ್ತಾನೆ. ಸಣ್ಣ ಜಮೀನಿರುವವರೇ ಪಂಪು ಹಾಕುವುದು. ಹತ್ತು ಎಕರೆ ಅಥವಾ ಹೆಚ್ಚಿಗೆ ಇರುವವರು ಪಂಪು ಹಾಕುವುದೇ ಇಲ್ಲ, ಹಾಕಿದ್ದರೂ ಅವರ ಸಂಖ್ಯೆ ಬಹಳ ಕಡಮೆ. ಗೌರಿಬಿದನೂರಿಗೆ ಬೇಕಾದರೆ ಹೋಗಿ ನೋಡಿ. ಬೆಂಗಳೂರಿನ ಸುತ್ತ ಐದು ಎಕರೆಗಳ ಮೇಲೆ ಎಲ್ಲೂ ಪಂಪುಗಳನ್ನು ಹಾಕುವುದಕ್ಕಾಗುವುದಿಲ್ಲ. ನದಿಗೆ ಪಂಪು ಹಾಕಬಹುದೆ? ಬಾವಿಗಳಿಗೇ ಪಂಪು ಹಾಕುವುದು. ಅವರಿಗೆ ಅನುಭವವಿಲ್ಲವೆಂದು ಹೇಳಬೇಕಾಗಿದೆ. ಆದುದರಿಂದ ಬಾವಿಗಳಿಗೆ ಪಂಪು ಹಾಕಿ ಐವತ್ತೆಕರೆ, ನೂರೆಕರೆ ವ್ಯವಸಾಯ ಮಾಡುತ್ತಾರೆಂದಿಟ್ಟುಕೊಳ್ಳಬಾರದು. ಚಿಕ್ಕ ಚಿಕ್ಕ ಜಮೀನಿರುವ ರೈತರೇ ಮಾಡುವುದು, ಅವರು ಏತ ಹಾಕಿಕೊಂಡು ಮಾಡುತ್ತಾರೆಂದು ಅವರು ಹೇಳಿದರು. ನಾವು ಇನ್ನೂ primit ve stage ನಲ್ಲೇ ಇರಬೇಕೆಂದು ಅವರ ಇಷ್ಟವಾದರೆ ಹಾಗೆ ಮಾಡಬಹುದು! ಆದುದರಿಂದ ಕೂಲಂಕಷವಾಗಿ ಇದನ್ನು ಪರಿಶೀಲನೆ ಮಾಡಬೇಕು. ಕೇಂದ್ರ ಸರ್ಕಾರದವರು ಏನು ಭರವಸೆ ಕೊಟ್ಟಿದ್ದಾರೆ, ನಾವು ಹೀಗೆ ಮಾಡಿದರೆ ಪರಿಣಾಮವೇನು ಎಂಬುದನ್ನು ನೋಡಬೇಕು. ಗೌರಿಬಿದನೂರಿನಲ್ಲಿ ಶೇಕಡ 200ರಷ್ಟು ಬರುತ್ತದೆಂದು ಹೇಳಿದರು. ಅದಕ್ಕೆಲ್ಲಾ ನಾನು ಈಗ ಹೋಗುವುದಿಲ್ಲ. ಒಟ್ಟಿನಲ್ಲಿ ಸರ್ಕಾರದವರು ಇದನ್ನು ಪುನರ್ವಿಮರ್ಶೆಮಾಡಿ ಪುನಃ ಆರು ಕಾಸು ಮಾಡಬೇಕೆಂದು ಮನವಿಮಾಡುತ್ತೇನೆ.

*ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ದೀಪಗಳನ್ನೊದಗಿಸುವ ವಿಷಯದಲ್ಲಿ ಕಾಂಗ್ರೆಸ್ ಸರ್ಕಾರದ ತತ್ವವೇನೆಂಬ ವಿಷಯದಲ್ಲಿ ಒಂದೆರಡು ಮಾತು ಹೇಳುತ್ತೇನೆ. ಈಗ ಹೇಗಾಗುತ್ತಿದೆಯೆಂದರೆ, ಮುಖ ನೋಡಿ ಮಣೆ ಹಾಕುತ್ತಿದ್ದಾರೆ ಎನ್ನುಹಾಗೆ ಕಾಣುತ್ತಿದೆ, ಅವರ ತತ್ವ. ನಂಜನಗೂಡು ಸಬ್‌ಡಿವಿಜನ್ನಿನಲ್ಲಿ ಈ ವರ್ಷ ಕ್ಷಾಮನಿವಾರಣೆ, ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಕೊಡುವುದು ಇತರ ದೇಶಾಭ್ಯುದಯ ಕೆಲಸಕಾರ್ಯಗಳಲ್ಲಿ ಸರ್ಕಾರದವರು ಕೈಕೊಂಡಿರುವ ಪ್ರತಿಯೊಂದು ಕಾರ್ಯವನ್ನೂ ನೋಡಿದರೆ, ಈ ಸಬ್‌ಡಿವಿಜನ್ನಿಗೆ ಕಳೆದ ವರ್ಷ ಎಷ್ಟು ಮಟ್ಟಿಗೆ ಗಮನಕೊಟ್ಟಿದ್ದಾರೆ ಎಂಬುದನ್ನು ವಿಷಾದದಿಂದ ಹೇಳಬೇಕಾಗಿದೆ. ಮಾತೆತ್ತಿದರೆ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹುಟ್ಟಿರುವುದೇ ಪುಣ್ಯ, ಅದಕ್ಕೆ ಏನೂ ಬೇಡ ಎಂದು ಹೇಳಿ, ಅಲ್ಲಿನ ರೈತರಿಂದ ಎಜ್ಯುಕೇಷನ್ ಸೆಸ್, ಲೋಕಲ್‌ಸೆಸ್, ಹೆಲ್ತ್‌ಸೆಸ್ ಎಲ್ಲವನ್ನೂ ವಸೂಲು ಮಾಡುತ್ತಾರೆ. ಆದರೆ ಜನೋಪಯುಕ್ತಕಾರ್ಯಗಳನ್ನು ಸರ್ಕಾರ ಕೈಕೊಳ್ಳುವಾಗ ಯಾವ ಜನರಿಗೆ ಸೌಲಭ್ಯ ದೊರೆಯುತ್ತದೆಂಬುದನ್ನು ನೋಡಬೇಕು. ಸರ್ಕಾರಕ್ಕೆ ವರಮಾನ ಬರುವ ತೆರಿಗೆಗಳನ್ನು ಯಾರ ಮೇಲೆ ಹಾಕುತ್ತಾರೋ ಅವರಿಗೆ ಸೌಲಭ್ಯಗಳನ್ನೊದಗಿಸುವ ತತ್ವವನ್ನನುಸರಿಸುವುದಿಲ್ಲ. ಈಗ ಹುಚ್ಚಿ ಮದುವೆಯಲ್ಲಿ ಉಂಡವನೇ ಜಾಣ ಎನ್ನುವ ಹಾಗಾಗಿದೆ

(ಶ್ರೀ ಬಿ. ರಾಚಯ್ಯ.)

ಚಾಮರಾಜನಗರದ ತಾಲ್ಲೂಕು ಮತ್ತು ಗುಂಡ್ಲುಪೇಟೆ ತಾಲ್ಲೂಕು, ಯಳಂದೂರು ತಾಲ್ಲೂಕುಗಳಲ್ಲಿ ಉಡಿಗಾಲ, ಆಲೂರು, ಹೆನ್ನೂರು, ದುಗಟ ಮುಂತಾದ ಹಳ್ಳಿಗಳವರು ವಿದ್ಯುಚ್ಛಕ್ತಿ ಕೊಡಬೇಕೆಂದು ಅರ್ಜಿಗಳನ್ನು ಹಾಕಿಕೊಂಡರು. ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರೂ ಶಿಫಾರಸು ಮಾಡಿದರು. ಸರ್ಕಾರ ಇದುವರೆಗೂ ಯಾವ ತೀರ್ಮಾನಕ್ಕೂ ಬಂದಿಲ್ಲ. ಅವರ ಕೂಗು ಇವರ ಕಿವಿಗೆ ಮುಟ್ಟಿಲ್ಲವೆಂದು ಕಾಣುತ್ತದೆ. 1948-49ನೆಯ ಇಸವಿಯಲ್ಲಿ ಆ ಊರಿನ ಹತ್ತಿರ ಒಂದು ಸೇತುವೆ ಬೇಕೆಂದು ಕೇಳಿದ್ದೆವು; 50 ಸಾವಿರಕ್ಕೆ ಒಂದು ಅಂದಾಜು ಕೂಡ ಆಗಿತ್ತು. ಆದರೂ 1948-49 ರಿಂದ ಈ ಬಗ್ಗೆ ಏನೂ ಆಗಿಲ್ಲ. ಕಾರಣವೇನೆಂದರೆ, ಅಲ್ಲಿಂದ ಕಾಂಗ್ರೆಸ್ ಪ್ರತಿನಿಧಿಗಳು ಚುನಾಯಿತರಾಗಿ ಬಂದಿಲ್ಲವೆಂದು ಹೀಗೆ ಮಾಡಿದಂತೆ ಕಾಣುತ್ತದೆ. ನಮಗೆ ಕೊಡದೇಯಿದ್ದರೂ ಚಿಂತೆಯಿಲ್ಲ, ಅಲ್ಲಿನ ಪ್ರಜೆಗಳಿಗೆ ಬೇಕಾದ ಅನುಕೂಲಗಳನ್ನು ಕೊಡಿ, ಎಂದು ಸರ್ಕಾರದವರನ್ನು ಕೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ನಮ್ಮ ಮನಸ್ಸಿನಲ್ಲಿಲ್ಲದೇಯಿರುವುದನ್ನು ಅವರು ಹೇಳುತ್ತಾರೆ. ನಾವು ಹಾಗೆ ಮಾಡಬೇಕೆಂದು ನಮಗೆ ತೋರಿಸಿಕೊಡುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಹಾಗೆ ಭಾವನೆಯಿದೆ. ರೈತರೆಲ್ಲಾ ಒಂದೇ ಎಂದು ತಿಳಿದುಕೊಂಡು ಮಾಡಲಿ.

ಶ್ರೀ ಕಡಿದಾಳ್ ಮಂಜಪ್ಪ.—ಯಳಂದೂರು ಜಹಗೀರಿಗೆ ಒಂದೂವರೆ ಲಕ್ಷ ಖರ್ಚು ಮಾಡಿದ್ದೇವೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಸ್ವಾಮಿ, ನೆಲಮಂಗಲ ತಾಲ್ಲೂಕಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಿರತಕ್ಕದ್ದು ತೀರಾ ಕಡಮೆ. ಇಲ್ಲಿ ಒಂದು ಸಾವಿರ ಬಾವಿಗಳಿವೆ. ಇದುವರೆಗೆ ಸುಮಾರು ರೈತರು 200-300 ಅರ್ಜಿ ಕೊಟ್ಟಿದ್ದಾರೆ. ಆದರೆ ಅವುಗಳ ಬಗ್ಗೆ ಇಲ್ಲಿಯವರೆಗೂ ಯಾವ ಕಾರ್ಯಕ್ರಮವನ್ನೂ ಕೈಗೊಂಡಂತೆ ಕಾಣುವುದಿಲ್ಲ. ಈ ತಾಲ್ಲೂಕಿನಲ್ಲಿ ತ್ಯಾಮಗೊಂಡ್ಲು, ದಾಬಸ್‌ಪೇಟೆ, ಶಿವಗಂಗೆಯ ಪ್ರದೇಶಕ್ಕೆ ಇರಿಗೇಷನ್ ಭಾವಿಗಳಿಗೆ ಈ ವಿದ್ಯುಚ್ಛಕ್ತಿ ತೀರಾ ಅವಶ್ಯಕ. ಅರ್ಜಿಗಳನ್ನು ಕೊಟ್ಟು 5-6 ತಿಂಗಳಾದರೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳದಿರುವುದು ವಿಷಾದಕರ. ಈಗಾಗಲೇ ತ್ಯಾಮಗೊಂಡಲು, ಶಿವಗಂಗೆ, ದಾಬಸ್‌ಪೇಟೆ ಇವುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಕೆಲಸ ಪೂರೈಸಿದ್ದಾಗ್ಯೂ ಇನ್ನೂ ಕರೆಂಟನ್ನು ಕೊಟ್ಟಿಲ್ಲ. ಯಾವುದೋ ಒಂದು ಸಣ್ಣ ತೊಡಕಿನ ಕಾರ್ಯಕ್ಕೆ ಎಂದರೆ ರೈಲ್ವೆಯವರ ಪರ್ಮಿಷನ್ನಿಗಾಗಿ ಅದನ್ನು ಅಲ್ಲಿಗೇ ನಿಲ್ಲಿಸಿಬಿಟ್ಟಿದ್ದಾರೆ. ತಾವು ಬೇಗ ಅದನ್ನು ತೀರ್ಮಾನಮಾಡಿ ಇರಿಗೇಷನ್ ಕೆಲಸಕಾರ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಸರ್ಕಾರದವರಲ್ಲಿ ಮನವಿಮಾಡಿಕೊಳ್ಳುತ್ತೇನೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ನಾನು ಏನನ್ನಾದರೂ ಹೇಳಲು ಹೊರಟರೆ ಜನ ನಗುತ್ತದೆ. ನಮ್ಮ ಚಿಕ್ಕಮಗಳೂರು, ಶಿವಮೊಗ್ಗ ಈ ಜಿಲ್ಲೆಗಳಲ್ಲಿ ಹಲವಾರು ಜೀವನದಿಗಳು ಹುಟ್ಟಿ ಹರಿಯುತ್ತಿವೆ. ಯಾವಾಗಲೂ ಬೇಕಾದಷ್ಟು ನೀರು ಆ ನದಿಗಳಲ್ಲಿ ಹರಿಯುತ್ತಿರುತ್ತದೆ. ನಾವು ಈ ಪಂಪುಗಳನ್ನು ಕೆರೆಗೆ, ನದಿಗಳಿಗೆ ಹಾಕಬೇಕೆಂದು ಕೇಳುತ್ತಿದ್ದರೆ, ಇತರರು ಇವುಗಳನ್ನು ಬಾವಿಗೆ ಹಾಕಬೇಕೆಂದು ಕೇಳುತ್ತಿದ್ದಾರೆ. ನಮಗೆ ಯಾವ ಸೌಲಭ್ಯಗಳೂ ಇಲ್ಲದೆ ಇರುವುದರಿಂದ ಆ ನೀರೆಲ್ಲಾ ಈ ದಿವಸ ವೃಥಾ ನದಿಗಳ ಮೂಲಕ ಹರಿದುಹೋಗಿ ಸಮುದ್ರಕ್ಕೆ ಸೇರುತ್ತಿದೆ. ಇದಕ್ಕೆ ಸರ್ಕಾರದವರು ಬೆಂಬಲ ನೀಡಲೇಬೇಕು. ನಮ್ಮಲ್ಲಿ ಎಗಚಿ, ತುಂಗಭದ್ರ, ಹೇಮಾವತಿ ಇತ್ಯಾದಿ ಅನೇಕ ದೊಡ್ಡ ನದಿಗಳು ಹರಿಯುತ್ತಿವೆ. ನಮ್ಮ ಚಿಕ್ಕಮಗಳೂರು ಜಿಲ್ಲೆಯನ್ನು ತಾವು ತುಮಕೂರು ಜಿಲ್ಲೆಗೆ ಸೇರಿಸಿ ಒಂದು ಸರ್ಕಲ್ ಮಾಡಿರುವುದರಿಂದ ಹೊಸ ನೀರು ಬಂದು ಹಳೆ ನೀರನ್ನು ಹೊಡೆದುಕೊಂಡು ಹೋದಂತಾಗಿದೆ. ನಮ್ಮ ದೇಶದಲ್ಲೇ ಸಕ್ಕರೆ ಕಾರ್ಖಾನೆ ಇದ್ದರೂ ಮಂಡ್ಯದವರಿಗೆ ಸಕ್ಕರೆ ಇಲ್ಲ. ಹಾಗೆಯೇ ನಮ್ಮ ಶಿವಮೊಗ್ಗ, ಚಿಕ್ಕಮಗಳೂರು, ಕಡೂರಿನಲ್ಲಿ ಅನೇಕ ದೊಡ್ಡ ನದಿಗಳಿದ್ದರೂ ನಮಗೆ ಪ್ರಯೋಜನವಿಲ್ಲ. ಈ ವರ್ಷ ಚಿಕ್ಕಮಗಳೂರು ಜಿಲ್ಲೆಯ ಅನೇಕ ಪ್ರಾಂತ್ಯಗಳಲ್ಲಿ ಮಳೆಯಿಲ್ಲದೆ ನಮ್ಮ ಪ್ರಾಂತ್ಯದ ದನಕರುಗಳನ್ನೆಲ್ಲಾ ಮಲೆನಾಡಿಗೆ ಹೊಡೆದಿರುತ್ತೇವೆ. ಹೀಗೆ ದನಕರುಗಳಿಗೂ ಸಹ ಹುಲ್ಲು ದೊರೆಯುವುದು ಬಹಳ ಕಷ್ಟವಾಗಿದೆ. ಹೀಗೆ ಕಷ್ಟ ಸಂಭವಿಸಿರುವ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡದೆ ತಾವು ಬೆಂಗಳೂರು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಿಗೇ ಕೊಡುತ್ತಿದ್ದೀರಿ. ಈ ವಿಚಾರವಾಗಿ ಶ್ರೀ ಭೀಮಪ್ಪನಾಯಕರು ಬಹಳ ಚೆನ್ನಾಗಿ ಹೇಳಿದ್ದಾರೆ. ಬಾವಿ ನೀರಿಗಿಂತಲೂ, ನದೀ ನೀರಿನಿಂದ ವ್ಯವಸಾಯಮಾಡಲು ಎಲ್ಲಾ ಖರ್ಚುಗಳೂ ಕಮ್ಮಿ ಬರುತ್ತವೆ. ಆದುದರಿಂದ ತಾವು ನಮ್ಮ ಜಿಲ್ಲೆಗೆ ಹೆಚ್ಚಿಗೆ ಹಣ ಒದಗಿಸಿ ಈ ವಿದ್ಯುಚ್ಛಕ್ತಿ ಸರಬರಾಯಿಯನ್ನು ಕೊಟ್ಟರೆ ಅನುಕೂಲವಾಗುತ್ತದೆ. ಇದಕ್ಕೆ ತಾವು ಒಂದು ನಿರ್ದಿಷ್ಟವಾದ ನೀತಿ ಹಾಕಿಕೊಂಡು ಅದರಂತೆ ಮುಂದುವರಿಸಬೇಕು ಆದರೆ ಈಗ ತಾವು ಅನುಸರಿಸುತ್ತಿರುವ ನೀತಿಯನ್ನು ನಾನು ಖಂಡಿಸದೆ ಇದ್ದರೂ, ಇದು ಸರಿಯಲ್ಲವೆಂದು ಹೇಳಲೇಬೇಕಾಗಿದೆ. ನಾವು ವಿದ್ಯುಚ್ಛಕ್ತಿಯನ್ನು ಕೊಡಿ, ಕೊಡಿ ಎಂದು ಕೇಳಿಕೊಳ್ಳುತ್ತಿದ್ದಾಗ್ಯೂ ತಾವು, ಕೊಟ್ಟುಬಿಟ್ಟರೆ ಇವರು ಪುನಃ ನಮ್ಮನ್ನು ಕೇಳುವುದನ್ನೇ ಎಲ್ಲಿ ಬಿಟ್ಟುಬಿಡುತ್ತಾರೋ ಏನೋ ಎಂಬ ಶಂಕೆಯಿಂದಲೇನಾದರೂ ಕೊಡಲಿಲ್ಲವೋ ಏನೋ ಅದು ನನಗೆ ತಿಳಿಯದು. ಪ್ರತಿಯೊಂದು ಜಿಲ್ಲೆಯ ಲೆಕ್ಕವನ್ನು ತಾವು ತೆಗೆದುಕೊಂಡು ನೋಡುವುದಾದರೆ, ನಮ್ಮ ಜಿಲ್ಲೆಯಲ್ಲಿರುವಷ್ಟು ನದಿಗಳು ಇನ್ನು ಯಾವ ಜಿಲ್ಲೆಯಲ್ಲಿಯೂ ಇಲ್ಲ. ಈ ಕಾರಣದಿಂದಲೂ ಕೂಡ ತಾವು ಕಡೂರು ಜಿಲ್ಲೆಗೆ ಹೆಚ್ಚಿನ ಕರೆಂಟನ್ನೂ ಮತ್ತು ಪಂಪುಗಳನ್ನೂ ಕೊಡಬೇಕಾಗುತ್ತದೆ. ಒಂದು ತಾಲ್ಲೂಕಿಗೆ ಎಲ್ಲೋ ಒಂದೆರಡು ಹಳ್ಳಿಗೆ ಕೊಟ್ಟರೆ ಅಷ್ಟು ಸಾಕಾಗುತ್ತದೇನು ! ತಾವು ನಮಗೆ ಹೆಚ್ಚಿಗೆ ಪಂಪುಗಳನ್ನೂ ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನೂ ಒದಗಿಸಿಕೊಟ್ಟರೆ ನಾವು ತಮಗೆ ಹೆಚ್ಚು ಆಹಾರ ಬೆಳೆದುಕೊಡುತ್ತೇವೆ. ಶಿವಮೊಗ್ಗ, ಕಡೂರು, ಚಿಕ್ಕಮಗಳೂರು ಈ ಮೂರು ಸ್ಥಳಗಳಲ್ಲೂ ತಮಗೆ ಹೆಚ್ಚಿನ ಆಹಾರಧಾನ್ಯಗಳು ಸರಬರಾಯಿ ಆಗಲು ಅವಕಾಶವಿರುತ್ತದೆ.

*ಶ್ರೀ ಡಿ. ದೇವರಾಜಅರಸ್ (ಹುಣಸೂರು).—ಸ್ವಾಮಿ, ಕಾಲ ಕಡಮೆಯಾಗಿರುವುದರಿಂದ ನಾನು ಒಂದೆರಡು ವಿಷಯಗಳನ್ನು ಮಾತ್ರ ಬೇಗ ಬೇಗ ಹೇಳುತ್ತೇನೆ.

ವಿದ್ಯುಚ್ಛಕ್ತಿ ಇಲಾಖೆ ಒಂದು ಪ್ಲಾನ್ಡ್ ಬೇಸಿಸ್ ಮೇಲೆ ಕೆಲಸ ನಡೆಸುತ್ತಿಲ್ಲ ಎಂದು ಶ್ರೀ ಎಸ್. ಗೋಪಾಲಗೌಡರು ಹೇಳಿದರು. ಶ್ರೀ ಟಿ. ಮರಿಯಪ್ಪನವರು ಒಂದು ಪ್ಲಾನ್ ಪ್ರಕಾರ ನಡೆಯುತ್ತಿದೆ ಎಂದು ಹೇಳಿದರು. ಆದರೆ ನಮ್ಮ ಮಾನ್ಯ ಗೆಳೆಯರು

ಹೇಳಿದ 'ಇರ್‌ಪ್ಲಾರ್ಟ್' ಪ್ರಕಾರ ನಡೆದರೆ ಯಾವ ಕೆಲಸವೂ ಆಗುವುದಿಲ್ಲ. ಪ್ರತಿಯೊಂದು ಕೆಲಸಕ್ಕೂ ಅಂದಾಜು, ಯೋಜನೆ, ಪ್ಲಾನ್ ಇತ್ಯಾದಿಗಳೆಲ್ಲವೂ ಈಗಿನ ಆಧುನಿನ ಪ್ರಪಂಚಕ್ಕಂತೂ ಬಹಳ ಮುಖ್ಯವಾದುವುಗಳೆಂಬುದು ಎಲ್ಲರಿಗೂ ಗೊತ್ತೇಇದೆ. ಸ್ವಾಮಿ, ಲೆನಿನ್ ಮಹಾಶಯನು ಹೇಳಿರತಕ್ಕಂಥ ಒಂದು ಮಾತನ್ನು ಈ ಸಂಧರ್ಭದಲ್ಲಿ ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಜೆ. ಮಹಮದ್ ಇಮಾಂ.—ಓಹೋ, ತಾವು ಬಹಳ ದೂರ ಹೋಗಿಬಿಟ್ಟಿದ್ದೀರಿ!

ಶ್ರೀ ಡಿ. ದೇವರಾಜಅರಸ್.—ಆತನು ರೆವಲ್ಯೂಷನ್ ವಿಚಾರವಾಗಿ ಹೀಗೆ ಹೇಳಿದ್ದಾನೆ:

"Electricity should be the watch word for progress."

ಹೀಗೆ ಈ ವಿದ್ಯುಚ್ಛಕ್ತಿಗೆ ಎಷ್ಟು ಪ್ರಾಮುಖ್ಯತೆಯಿರುತ್ತದೆ ಎಂಬುದನ್ನು ಮತ್ತು ಇದು ಹೇಗೆ ಪ್ರಪಂಚದಲ್ಲಿ ಒಂದು ರೆವಲ್ಯೂಷನರಿ ಬದಲಾವಣೆಗಳನ್ನು ತರುತ್ತದೆಂಬ ಅಂಶವನ್ನೂ ಆತ ಬಹಳ ಹಿಂದೆಯೇ ಹೇಳಿದ್ದಾನೆ. ಆದರೆ ನಮ್ಮ ಮೈಸೂರಿನಲ್ಲಿ ಈ ವಿದ್ಯುಚ್ಛಕ್ತಿಯನ್ನು ಒಂದು ಪ್ಲಾನ್ಡ್ ಬೇಸಿಸ್ ಮೇಲೆ ಹಂಚಬೇಕಾಗಿದೆಯೆಂದು ಹೇಳಿದರೆ, ಅದಕ್ಕೆ ಒಂದು ಪ್ಲಾನ್ ಮತ್ತು ಎಸ್ಟಿಮೇಟುಗಳನ್ನು ತಯಾರಿಸಿ ಆ ಪ್ರಕಾರ ಇದನ್ನು ಹಂಚಬೇಕೆಂದು ಹೇಳುವಂಥ ಒಂದು ಪ್ಲಾನ್ ಅಲ್ಲ. ಈ ದಿವಸ ಈ ವಿದ್ಯುಚ್ಛಕ್ತಿ ಈ ಆಧುನಿಕ ಪ್ರಪಂಚದಲ್ಲಿ ಏನೇನು ಕೆಲಸಗಳನ್ನು ಮಾಡುತ್ತಿದೆ, ಇದರಿಂದ ಎಂಥೆಂಥ ವಿಚಿತ್ರ ಕೆಲಸಗಳು ನಡೆಯುತ್ತಿವೆ ಯೆಂಬುದನ್ನು ನಾವು ಆಲೋಚಿಸಿ, ನಮ್ಮ ವ್ಯವಸಾಯ ಅಭಿವೃದ್ಧಿ ಬಹಳ ಹಿಂದೆ ಬಿದ್ದಿರುವುದರಿಂದ, ಇದನ್ನು ಅಭಿವೃದ್ಧಿ ತರತಕ್ಕ ಬಗ್ಗೆ ನಾವೀದಿವಸ ಈವಿದ್ಯುಚ್ಛಕ್ತಿಯನ್ನು ಹೇಗೆ ಉಪಯೋಗಮಾಡಿ ಕೊಳ್ಳಬೇಕೆಂಬ ಬಗ್ಗೆ ಒಂದು ಖಚಿತವಾದ ತೀರ್ಮಾನಕ್ಕೆಬರಬೇಕಾಗಿದೆ. ಆದರೆ ಜನರು ಈ ದಿವಸ ಒಂದು ಪಾಠಶಾಲೆ ವಿಚಾರ ಬಂದರೆ ಪಾಠಶಾಲೆ ಗಳಿಗಾಗಿ ಹಣವನ್ನು ಹೆಚ್ಚಿಗೆ ಖರ್ಚು ಮಾಡಬೇಕೆಂದು ಕೇಳುತ್ತಿದ್ದಾರೆ. ಮತ್ತೆ ಕೆಲವರು ಆಸ್ಪತ್ರೆ ವಿಚಾರಬಂದರೆ ಆಸ್ಪತ್ರೆಗಳಿಗಾಗಿ ಹೆಚ್ಚು ಖರ್ಚುಮಾಡಬೇಕೆಂದು ತಿಳಿಸುತ್ತಿದ್ದಾರೆ. ಕೆರೆಗಳ ವಿಚಾರ ಬಂದಾಗ ಕೆರೆಗಳಿಗೆ ಹೆಚ್ಚಿನ ಹಣವಿನಿಯೋಗ ಮಾಡಬೇಕೆಂದು ಹೇಳುತ್ತಿದ್ದಾರೆ. ಅದೇ ರೀತಿ ಈ ವಿದ್ಯುಚ್ಛಕ್ತಿ ವಿಚಾರ ಬಂದಿರುವಾಗಲೂ ಕೂಡ ಎಲ್ಲರೂ ಈ ಬಾಬಿಗೂ ಹೆಚ್ಚಿಗೆ ಹಣ ಖರ್ಚುಮಾಡಬೇಕೆಂದು ಹೇಳುತ್ತಿದ್ದಾರೆ. ಇಂಥ ವಾದದಲ್ಲಿ ಯಾವ ಬುದ್ಧಿವಂತಿಕೆಯೂ ಇಲ್ಲವೆಂದು ನಾನು ಹೇಳಬೇಕಾಗಿದೆ. ಈ ಎಲ್ಲ ಬಾಬುಗಳೂ ನಮಗೆ ಬಹಳ ಪ್ರಾಮುಖ್ಯವಾದವುಗಳೇನೋ ಹೌದು. ಆದಾಗ್ಯೂ ನಾವು ತೀರಾ ಹೆಚ್ಚಿನ ಒಂದು ಪ್ರಾಮುಖ್ಯತೆಯನ್ನು ಯಾವುದಕ್ಕೆ ಈ ದಿವಸ ಕೊಡದೆ ಹೋದರೆ, ಅದು ಮುಂದೆ ನಮಗೆ ನಾನಾ ಮುಖವಾಗಿ ಕೊರತೆಗಳಿಗೆ ಅವಕಾಶವನ್ನುಂಟುಮಾಡತಕ್ಕದ್ದಾಗಿದೆಯೋ ಅಂಥ ಬಾಬಿಗೆ ಎಂದರೆ ಈ ವಿದ್ಯುಚ್ಛಕ್ತಿಗೆ ನಾವು ಪ್ರಥಮಸ್ಥಾನದ ಪ್ರಾಮುಖ್ಯತೆ ಕೊಟ್ಟು ಕೇಂದ್ರ ಸರ್ಕಾರ ಹೇಗೆ ಇದಕ್ಕೆ ಅಲ್ಲಿ ಟಾಪ್ ಪ್ರಯೊರ್ಟಿ ಕೊಟ್ಟಿದೆಯೋ ಅದೇ ರೀತಿ ನಾವೂ ಸಹ ಇಲ್ಲಿ ಟಾಪ್ ಪ್ರಯಾರ್ಟಿ ಕೊಡಬೇಕಾದ್ದು ಅಗತ್ಯ. ಈ ವಿಚಾರವಾಗಿ ಈಗಾಗಲೇ ಮಾನ್ಯ ಶ್ರೀ ಟಿ. ಮರಿಯಪ್ಪನವರೂ ಮತ್ತು ಶ್ರೀ ಭೀಮಪ್ಪ ನಾಯಕರೂ ವಿಷಯಗಳನ್ನು ಬಹಳ ಚೆನ್ನಾಗಿ ವಿವರಿಸಿರುತ್ತಾರೆ. ಈ ಹಿಂದೆ ಮಾನ್ಯ ಪಟ್ಟಾಭಿರಾಮನ್‌ರವರು ಮಾತನಾಡುತ್ತ, ಭೂಗರ್ಭದಲ್ಲಿರತಕ್ಕ ನೀರನ್ನೆತ್ತಿ ನಮ್ಮ ವ್ಯವಸಾಯೋದ್ಯಮಗಳನ್ನು ನಾವು ಮುಂದುವರಿಸದೇ ಹೋದರೆ ನಮ್ಮ ದೇಶ ಖಂಡಿತ ಮುಂದೆ ಬರಲಾರದು ಎಂದು ತಿಳಿಸಿದ್ದಾರೆ. ಇತ್ತೀಚೆಗೆ ಮಳೆ ಬರ ಬರುತ್ತ ಕಡಮೆಯಾಗುತ್ತಿದೆ. ಈ ಕಾರಣಗಳಿಂದ ಎಲ್ಲೆಲ್ಲಿ ಅನುಕೂಲವಿದೆಯೋ ಮತ್ತು ಎಲ್ಲೆಲ್ಲಿ ಸಾಧ್ಯವಿರುತ್ತದೋ ಅಲ್ಲೆಲ್ಲಾ ಈ ವಿದ್ಯುಚ್ಛಕ್ತಿಯ ಉತ್ಪನ್ನವನ್ನು ಹೆಚ್ಚಿಸತಕ್ಕದ್ದು ಸರ್ಕಾರದವರ ಮೊದಲನೆಯ ಕರ್ತವ್ಯ. ಇದರ ಅಭ್ಯುದಯಕ್ಕೆ ತಾವು ಎಷ್ಟು ನಿಗಾಕೊಟ್ಟರೆ ಆದು ದೇಶದ ಅಭ್ಯುದಯಕ್ಕೆ ಅಷ್ಟು ಸಹಾಯ ಮಾಡುತ್ತದೆ. ಆದ್ದರಿಂದ ನನಗೆ ಅನಿಸುತ್ತಿದೆ: ತಾವು ಈ ರಸ್ತೆ, ಕೆರೆ, ಆಸ್ಪತ್ರೆ ಇತ್ಯಾದಿಗಳಿಗಾಗಿ ಖರ್ಚುಮಾಡತಕ್ಕ ಹಣವನ್ನೆಲ್ಲಾ ಸ್ವಲ್ಪಕಾಲ ತಾತ್ಕಾಲಿಕವಾಗಿ ನಿಲ್ಲಿಸಿದರೂ ಪರವಾಗಿಲ್ಲ, ಮೊದಲು ಈ ಬಾಬಿಗೆ ಒಂದು ಶಾಶ್ವತವಾದ ತಳಹದಿ ಹಾಕಬೇಕೆಂದು ಹೇಳಲಿಚ್ಛಿಸುತ್ತೇನೆ. ನಮ್ಮ ಮೈಸೂರಿನ ಪ್ರಗತಿಗೋಸ್ಕರವಾಗಿ ತಾವಿದನ್ನು ತಮ್ಮ ನಿತ್ಯಮಂತ್ರವಾಗಿ ಜಪಿಸುತ್ತಿರಬೇಕು. ಈ ಬಾಬಿಗೆ ಸರ್ಕಾರ ತನ್ನಶಕ್ತಿಯನ್ನೆಲ್ಲಾ ಉಪಯೋಗಿಸಬೇಕು. ಈ ಬಗ್ಗೆ ನಾನು ಇನ್ನೂ ಎಷ್ಟೋ ವಿಚಾರಗಳನ್ನು ಈ ಹಿಂದೆಯೇ ತಿಳಿಸಿದ್ದೇನೆ. ಆದರೆ ಹೀಗೆ ಕೋಟ್ಯಾಂತರ ರೂಪಾಯಿಗಳನ್ನು ಹಾಕತಕ್ಕ ಯೋಜನೆಯ ಬಗ್ಗೆ ಒಂದು ಖಚಿತವಾದ ಯೋಜನೆಯನ್ನು ಹಾಕಿಕೊಳ್ಳಬೇಕಾದದ್ದು ಅತ್ಯಾವಶ್ಯಕ. ಈ ಸಾಲಿನಲ್ಲಿ ಇದಕ್ಕಾಗಿ ತಾವು ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಅದು ಬಹಳ ಸಂತೋಷದ ವಿಚಾರ. ಇನ್ನು ಮೈಸೂರು ಜಿಲ್ಲಾ ಬೋರ್ಡಿನಿಂದ ಒಂದು ಸಲಹೆಯೇನೋ ಸರ್ಕಾರಕ್ಕೆ ಬಂದಿದೆಯೆಂದು ಗೊತ್ತಾಯಿತು. ಆದರೆ ತಾವು ಆ ಬಗ್ಗೆ ಆದನ್ನು ಸ್ಪಷ್ಟವಾಗಿ ಮತ್ತು ಕೂಲಂಕಷವಾಗಿ ಪರಿಶೀಲನೆಮಾಡಿ ಮುಂದುವರಿಯುವುದು ಸೂಕ್ತವೆಂದು ಹೇಳುತ್ತೇನೆ.

ಕೊನೆಯದಾಗಿ ನಾನು ಮೊದಲೇ ಹೇಳಿದಹಾಗೆ, ಸರ್ಕಾರದವರು ಇನ್ನಾವುದಕ್ಕೆ ಬೇಕಾದರೂ ಸಾಲ ತೆಗೆಯಲಿ ಅಥವಾ ಬಿಡಲಿ, ಇದಕ್ಕೆ ಸಾಲ ತೆಗೆಯಲೇಬೇಕು. ಯಾವ ಬಾಬಿನಲ್ಲಿ ದುಡ್ಡು ಕಡಮೆಮಾಡಿ ಮಿಗಿಸಿದರೂ ಕೂಡ ಅದನ್ನು ಇನ್ನು ಮೇಲೆ ಬರೀ ವಿದ್ಯುಚ್ಛಕ್ತಿಯ ಉತ್ಪಾದನೆಗಾಗಿ ಹಾಕಿ ಸೂಕ್ತವಾದ ರೀತಿಯಲ್ಲಿ ಉಪಯೋಗಿಸಬೇಕು. Planned economy ಎಂದು ನಾವೇನು ಹೇಳುತ್ತೇವೋ ಅದಕ್ಕೆ ಅನುಗುಣವಾಗಿ ಹಣವನ್ನು ಹಾಕತಕ್ಕ ಮಾರ್ಗ ಇದೇ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಅಧ್ಯಕ್ಷರೇ, ಶ್ರೀ ಟಿ. ಮರಿಯಪ್ಪನವರು ಹೇಳಿದರು, ಈ ಇಲಾಖೆಯು ಮಟ್ಟಿಗೆ ಗೊತ್ತಾದ ಒಂದು ಯೋಜನೆಯನ್ನಿಟ್ಟುಕೊಂಡು ಕೆಲಸ ಮಾಡುತ್ತಿದೆ ಎಂದು. ಅದು ನಿಜ; ಆದರೆ ಆ ಯೋಜನೆಗಳು ಎಷ್ಟರಮಟ್ಟಿಗೆ ಫಲಕಾರಿಯಾಗಿವೆ ಯೆಂಬುದನ್ನೂ ನಾವು ಯೋಚನೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ನಮ್ಮ ಯೋಜನೆ ಏನಾದರೂ ಫಲಕಾರಿಯಾಗಿದೆಯೇ? ಗ್ರಾಮಾಂತರಗಳಿಗಾಗಿ ನೀವು ಯಾವುದೇ ಯೋಜನೆಯನ್ನು ಮಾಡಿದಾಗ್ಯೂ, ಅದನ್ನು ಈ ಸಭೆಯ ಮುಂದಿಟ್ಟು, ಈ ಸಭಾಸದಸ್ಯರ ಅಭಿಪ್ರಾಯವನ್ನು ತೆಗದುಕೊಂಡು ಮುಂದುವರಿಯದಿದ್ದರೆ, ನಿಮ್ಮ ಯೋಜನೆ ಅಷ್ಟಾಗಿ ಫಲಕಾರಿಯಾಗುವುದಿಲ್ಲ. ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುವ ವಿಷಯದಲ್ಲಿ ಸರ್ಕಾರವೇ ಬಹುಮಟ್ಟಿಗೆ initiative

(ಶ್ರೀ ಯು. ಎಂ. ಮಾದಪ್ಪ.)

ತೆಗೆದುಕೊಂಡು ಕೆಲಸಮಾಡಬೇಕು. ಸರ್ಕಾರಕ್ಕೆ ಒಬ್ಬಾನೊಬ್ಬ ವ್ಯಕ್ತಿ ವಿದ್ಯುಚ್ಛಕ್ತಿ ಬೇಕೆಂದು ಅರ್ಜಿ ಹಾಕಬಹುದು. ಅರ್ಜಿ ಹಾಕುವುದೊಂದು ಹೊರತು, ಯಾವ ರೀತಿ ಸರ್ಕಾರವನ್ನು approach ಮಾಡಿ ತನ್ನ ಕಾರ್ಯ ಸಾಧಿಸಿಕೊಳ್ಳಬಹುದೆಂಬುದನ್ನು ಅವರು ತಿಳಿದಿಲ್ಲ. ಗ್ರಾಮವಾಸಿಗಳ ಈ ಪರಿಸ್ಥಿತಿಗೆ ಸರ್ಕಾರವೇ ಕಾರಣವಾಗಿರಬಹುದು, ಇಲ್ಲವೇ, ರೈತರ ಅಜ್ಞಾನವೂ, ಅನಕ್ಷರತೆಯೂ ಕಾರಣವಾಗಿರಬಹುದು. ಆದ್ದರಿಂದ ಸರ್ಕಾರದ ಈ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಗ್ರಾಮಾಂತರಗಳಲ್ಲಿ ಪ್ರವಾಸಮಾಡಿ ಅದು ಲಾಭದಾಯಕವಾಗಿದೆಯೋ ಅಥವಾ ಇಲ್ಲವೇ ಎಂಬುದನ್ನು ನೋಡಬೇಕು. ಹಾಗೆಮಾಡದೆ, ಅಪ್ಲಿಕೇಷನ್‌ನಲ್ಲಿ ಹೇಳಿರತಕ್ಕ ಅಂಶಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಂಡು, ಅದರ ಮೇಲೆ ಎಸ್ಟಿಮೇಟ್‌ಮಾಡಿ 7·5 ಸೇಕಡ ಬರಲಿಲ್ಲವೆಂದು ಹೇಳಿ ಆ ಅರ್ಜಿಯನ್ನು ತಳ್ಳಿಹಾಕುವುದು ಸ್ವಾಭಾವಿಕವಾಗಿದೆ. ಇದು ಇರತಕ್ಕ ಮುಖ್ಯ ಲೋಪದೋಷ. ಅದಕ್ಕೆ ಬದಲು ಅರ್ಜಿ ಬಂದ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಆ ಗ್ರಾಮಕ್ಕೆ ಹೋಗಿ, ಅಲ್ಲಿ ಎಷ್ಟು ಮನೆಗಳಿವೆ, ಇನ್ನೂ ಎಷ್ಟು ಜನರು ತೆಗೆದುಕೊಳ್ಳುವರಾಗಿದ್ದಾರೆಂಬುದನ್ನು ತಿಳಿದುಕೊಳ್ಳಬೇಕು. ಗ್ರಾಮಪಂಚಾಯಿತಿಯವರನ್ನೂ consultಮಾಡಿ, ಅರ್ಜಿಯಲ್ಲಿ ನಮೂದಿಸಿರುವ ಬಾವಿಯ ಹತ್ತಿರವೂ ಹೋಗಿ, ನೀರು ಸಾಕಾದಷ್ಟಿದೆಯೋ ಎಂದು ಪರಿಶೀಲನೆಮಾಡಿ, ಒಟ್ಟಿನಲ್ಲಿ ಆದಾಯಕರವಾಗಿದೆಯೋ ಎಂಬುದನ್ನು ನೋಡಬೇಕು. ಅದು ಬಿಟ್ಟು ಆಫೀಸಿನಲ್ಲಿ ಕುಳಿತು ಎಷ್ಟು ದೀಪ ತೆಗೆದುಕೊಳ್ಳುತ್ತಾರೆ? ಎಷ್ಟು ತೆಗೆದುಕೊಳ್ಳಬಹುದೆಂದುಹೇಳುವುದಕ್ಕೆ ಸಾಧ್ಯವೇ ? ಆದ್ದರಿಂದ ಅಧಿಕಾರಿಗಳೇ ಸ್ಥಳಕ್ಕೆ ಹೋಗಿ ಸುತ್ತ, ಮುತ್ತ, ಇರುವ ಹಳ್ಳಿಗಳ ಗುಂಪನ್ನು ತೆಗೆದುಕೊಂಡು, ಎಲ್ಲೆಲ್ಲಿ ಬಾವಿಗಳನ್ನು ತೆಗೆದಿರಬಹುದು, ಬೀದಿಗಳಿಗೆ ಎಷ್ಟು ದೀಪ ಬೇಕಾಗುತ್ತದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಅಂದಾಜು ತಯಾರು ಮಾಡಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಹಿಂದೆ ಪ್ರಪಂಚದ ಮೊದಲನೆಯ ಯುದ್ಧವಾದ ತರುಣದಲ್ಲಿ, ಅಂದರೆ, 1917ರಿಂದ 1924ರವರೆಗೆ ಸ್ಟ್ಯಾಲಿನ್ನರ ರಷ್ಯಾದೇಶವೂ ಇದೇ ಪರಿಸ್ಥಿತಿಯಲ್ಲಿತ್ತು. ರಷ್ಯಾದಂತೆಯೇ ನಮ್ಮ ಮೈಸೂರು ದೇಶವೂ ಕ್ರಮೇಣ ಉತ್ತಮಗೊಳ್ಳುತ್ತದೆಂಬುದರಲ್ಲಿ ಅನುಮಾನವಿಲ್ಲ. 1917 ರಿಂದಲೂ ನಮ್ಮ ದೇಶದಲ್ಲೂ ಈ ಇಲಾಖೆಯ ಸಂಬಂಧದಲ್ಲಿ ಸತತ ಅಭಿವೃದ್ಧಿ ಯೋಜನೆಗಳು ನಡೆದಿವೆ. ಮೈಸೂರಿನ ಅನೇಕ ಮೇಧಾವಿಗಳು, ಮೈಸೂರಿನ ಅಧಿಕಾರಿಗಳನೇಕರು ಅಮೆರಿಕಾದ ದೇಶಗಳಿಗೆ ಹೋಗಿ ಅಲ್ಲಿ ನಡೆದಿರುವ ಅದ್ಭುತ ಕೆಲಸಕಾರ್ಯಗಳನ್ನು ನೋಡಿಕೊಂಡು ಬಂದು, ಅದೇ ರೀತಿಯಲ್ಲಿ ನಮ್ಮ ದೇಶದಲ್ಲಿಯೂ ಪ್ರಯತ್ನಗಳನ್ನು ನಡೆಸುವವರಾಗಿದ್ದಾರೆ. ಈ ದಿವಸ ನಮ್ಮ ಇಲಾಖೆ ಯಾವ ರೀತಿಯಿದೆಯೆಂದರೆ, ಇಡೀ ಇಂಡಿಯಾದೇಶದ ಪ್ರತಿಯೊಂದು ಪ್ರಾಂತ್ಯದವರೂ ಮೈಸೂರು ದೇಶದ ಅಧಿಕಾರಿಗಳ ಸಲಹೆ ಸಹಾಯಗಳನ್ನು ದೊರಕಿಸಿಕೊಡಿ ಎಂದು ಬೇಡುತ್ತಿದ್ದಾರೆ. ಆದ್ದರಿಂದ ನಮ್ಮ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಅಸಾಮರ್ಥ್ಯವಿದೆಯೆಂದಾಗಲೀ, ಅದರ ಕೆಲಸ ಅಸಮರ್ಪಕವಾಗಿದೆಯೆಂದಾಗಲೀ ಯಾರೂ ಹೇಳುವಹಾಗಿಲ್ಲ.

ಶ್ರೀ ಜೆ. ಮಹಮದ್ ಇಮಾಂ.—ನಾವೂ ಕೂಡ ಯಾರೂ ಹೇಳಲಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್.—ಆದ್ದರಿಂದ ಇದು ಉತ್ತಮವಾದ ಮಾರ್ಗದಲ್ಲಿ, ಪ್ರಗತಿಮಾರ್ಗದಲ್ಲಿ ಮುಂದುವರಿಯುತ್ತಿದೆ ; ಮುಂದೆಯೂ ಅದನ್ನು ಇದೇ ರೀತಿ ಮುಂದುವರಿಸುವುದರಲ್ಲಿ ಯಾವ ಲೋಪವೂ ಬರುವುದಿಲ್ಲವೆಂದು ಹೇಳುತ್ತೇನೆ.

ಎರಡನೆಯದಾಗಿ, ಮೈಸೂರು ದೇಶದಲ್ಲಿ ಜನಜಾಗೃತಿ ಬಹಳವಾಗಿದೆ. ಯಾವ ಹಳ್ಳಿಗೆ ಹೋಗಲಿ ಈ ನಾಲ್ಕು ವಿಷಯಗಳನ್ನು ತಪ್ಪದೇ ಕೇಳುತ್ತಾರೆ: ಒಂದು ರಸ್ತೆ ಮಾಡಿಸಿಕೊಡಿ, ಒಂದು ಸ್ಕೂಲು ಕೊಡಿ, ಒಂದು ಹೆಲ್ತ್ ಯೂನಿಟ್ ಕೊಡಿ, ವಿದ್ಯುಚ್ಛಕ್ತಿ ಕೊಡಿ—ಎಂದು, ಎಲ್ಲರೂ ಕೇಳುತ್ತಿದ್ದಾರೆ. ಇದಕ್ಕಾಗಿ ಇಡೀ ರಾಷ್ಟ್ರ ದೃಷ್ಟಿಯಿಂದ, Nation wide ಆಗಿ ಯೋಜನೆಯಿಟ್ಟುಕೊಂಡು ಕೆಲಸಮಾಡಬೇಕೆಂಬುದು ಹೆಚ್ಚಲ್ಲ. ಅದೇ ರೀತಿ ನಾವುಮಾಡಿಕೊಂಡು ಬಂದಿದ್ದೇವೆ. ಏಕೆಂದರೆ, ಅದರ ಪ್ರಾಮುಖ್ಯತೆಯನ್ನು ಸಾರ್ವಜನಿಕರೂ ಅರಿತಿದ್ದಾರೆ, ಸರ್ಕಾರದವರೂ ಅರಿತಿದ್ದಾರೆ. ಅದನ್ನು ಮುಂದುವರಿಸಬೇಕೆಂಬದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಹೇಗೆಮಾಡುವುದು ? ಇತ್ತಕಡೆ ಜೋಗ್‌ಪವರ್ ಯೋಜನೆಯನ್ನು ಮುಗಿಸಿದೆ. ಅಲ್ಲಿ ಎಲ್ಲಿ ಎಷ್ಟು ತಯಾರುಮಾಡಲು ಅನುಕೂಲವಿದೆಯೋ ಅಷ್ಟುಮಾಡಿದೆ. ಜೋಗ ವಿದ್ಯುಚ್ಛಕ್ತಿಯನ್ನು ನಾವು ಪ್ರಾರಂಭಮಾಡುವಾಗ ನಾವು ಅಷ್ಟನ್ನೂ ಉಪಯೋಗಿಸಬಹುದೇ ಎಂಬ ಅನುಮಾನವೂ ಇತ್ತು. ಆದರೆ ಈಗ ನೋಡಿದ್ದರಲ್ಲಿ 1954ನೆಯ ಇಸವಿಯ ಹೊತ್ತಿಗೆ ಅದೂ ಸಾಕಾಗದೆ ಹೋಗಬಹುದೆಂದು ಕಂಡುಬಂದಿದೆ. ಇದನ್ನು ಕಂಡು ಈಗ ಷಿಂಷಾ ಪ್ರಾಜೆಕ್ಟು, ಹೊನ್ನೆಮರಡು ಪ್ರಾಜೆಕ್ಟುಗಳನ್ನು ಕೈಕೊಳ್ಳಬೇಕೆಂದು ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡುತ್ತಿದ್ದೇವೆ. ಹೆಚ್ಚಿಗೆ ಖರ್ಚಾಗುತ್ತದೆಂದು ತಿಳಿದು ಸದ್ಯಕ್ಕೆ ಇವುಗಳ ಬೆಳವಣಿಗೆ ಸ್ವಲ್ಪ ಸ್ಥಗಿತವಾಗಿದೆ.

ಒಬ್ಬ ಸದಸ್ಯರು.—ಮೇಕೆದಾಟು ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೇಕೆದಾಟಿನ ವಿಷಯವನ್ನೂ ವಿಚಾರಮಾಡಿದೆ. ಅಲ್ಲಿ ಉತ್ಪತ್ತಿಮಾಡುವುದಕ್ಕೆ ಹೆಚ್ಚಿಗೆ ಖರ್ಚಾಗುವುದೊಂದು, ಕೊನೆಗೆ ಉತ್ಪತ್ತಿಮಾಡಿದರೂ, ಅಲ್ಲಿ ಉತ್ಪತ್ತಿಯಾದ ವಿದ್ಯುಚ್ಛಕ್ತಿಯಲ್ಲಿ ಹೆಚ್ಚು ಭಾಗವನ್ನು ಹೊರಗಡೆಗೆ ಕೊಡಬೇಕಾಗುತ್ತದೆ. ಏಕೆಂದರೆ, ಅಲ್ಲಿಗೆ ಬರುವ ನೀರನ್ನು ಎರಡು ಪ್ರಾಂತ್ಯಗಳವರು ಹಂಚಿಕೊಳ್ಳಬೇಕಾಗಿದೆ. ಈ ಕಾರಣದಿಂದ, ಷಿಂಷಾವನ್ನು ಕೈಕೊಂಡು ಅದನ್ನು intensive ಆಗಿ develop ಮಾಡುವುದೂ, ಹೊನ್ನೆಮರಡು ಕೈಕೊಳ್ಳುವುದೂ ನಮಗೆ ಪ್ರಾಮುಖ್ಯವಾಗಿದೆ.

ಶ್ರೀ ಜೆ. ಮಹಮದ್ ಇಮಾಂ.—ಹಿಂದಿನ ಸರ್ಕಾರದವರು ಮೇಕೆದಾಟು ವಿಷಯ ಬಹಳ ಹೇಳುತ್ತಿದ್ದರು !

ಶ್ರೀ ಎ. ಜಿ. ರಾಮಚಂದ್ರರಾವ್.—ಇಂದಿನ ಸ್ಥಿತಿ ತಮಗೆ ಹೇಳಿದ್ದೇನೆ. ಆದ್ದರಿಂದ ಮುಂದಿನ ಬೆಳವಣಿಗೆ ಹೇಗೆ ಆಗಬೇಕೆಂಬ ವಿಷಯದಲ್ಲಿ ತಾತ್ಸಾರ ತೋರಿಲ್ಲ ; ಮತ್ತು ಅವರು Planned Basis ಎಂದು ಹೇಳಿದರು ; ಅದರಂತೆ Planned Basis ಸಹ ಇದೆ. ಈಗ ನಮ್ಮಲ್ಲಿ urban consumption ಯಾವ ರೀತಿ ಆಗುತ್ತಿದೆಯೆಂಬುದೂ, Industrial consumption ಯಾವ ರೀತಿ ಆಗುತ್ತಿದೆಯೆಂಬುದೂ ಗೊತ್ತಿದೆ. ಈಗ ಯಾವ ಕೈಗಾರಿಕೆಗಳು develop ಆಗಿವೆ, ಅವುಗಳ ಪ್ರಾಮುಖ್ಯತೆ ಏನು, ಅವುಗಳಿಗೆ ಎಷ್ಟರಮಟ್ಟಿನ ರಕ್ಷಣೆಕೊಡಬೇಕಾದ

ಅವಶ್ಯಕತೆ ಇನ್ನೂ ಇದೆ ಎಂಬುದನ್ನೆಲ್ಲಾ ನೋಡಿಕೊಂಡು, ಸಮಯ ಸಂದರ್ಭ ಅರಿತು, ಅವುಗಳಿಗೆ ಚಾರ್ಜ್ ಜಾಸ್ತಿ ಮಾಡುತ್ತಿದ್ದೇವೆ. ಆದರೆ ಎಲ್ಲಾ ಕೈಗಾರಿಕೆಗಳಿಗೂ ಒಂದೇ ಸಾರಿ ಜಾಸ್ತಿ ದರ ಹಾಕಬೇಕೆಂಬುದು ಸರಿಯಲ್ಲ. ಅದಲ್ಲದೆ ಕೆಲವು ಸಂದರ್ಭಗಳಲ್ಲಿ ಒಪ್ಪಂದದ ಮೇಲೆ ವಿದ್ಯುಚ್ಛಕ್ತಿ ಕೊಡುತ್ತಿರುತ್ತೇವೆ. ಅಂಥ ಸಮಯದಲ್ಲಿ ನಾವು ಏಕದಂ unilateral ಆಗಿ ದರ ಜಾಸ್ತಿ ಮಾಡುವುದಕ್ಕೂ ಆಗುವುದಿಲ್ಲ. ವಿದ್ಯುಚ್ಛಕ್ತಿ ಸರಬರಾಯಿ ಮಾಡುವುದರಲ್ಲೂ ನೀರಾವರಿ ಪಂಪುಗಳಿಗೆ ಮೊದಲನೆಯ ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ.

ಆ ಮೇಲೆ, ಇನ್ನೊಂದು ಉತ್ತೇಜನಕರವಾದ ವಿಷಯವೇನೆಂದರೆ, ಟಿ. ಟಿ. ಕೃಷ್ಣಮಾಚಾರಿ ಕಮಿಟಿಯವರು ಕೊಟ್ಟಿರುವ ವರದಿಯಲ್ಲಿ ಮೈಸೂರು ದೇಶದ ಸನ್ನಿವೇಶ, ಪರಿಸ್ಥಿತಿ ನೋಡಿ ಭೂಗೋಳಿಕ ದೃಷ್ಟಿಯಿಂದಲೂ ಇದು ಬಹಳ ಪ್ರಾಶಸ್ತ್ಯವಾಗಿದೆಯೆಂದು ಹೇಳಿ, ಅದಕ್ಕೆ ಹೆಚ್ಚು ಸಾಲಕೊಟ್ಟು ಮುಂದುವರಿಸುವುದು ಸೂಕ್ತವೆಂದು ಸಲಹೆಮಾಡಿರುವುದಲ್ಲದೆ, ಕ್ಷಾಮಪೀಡಿತ ಪ್ರದೇಶಗಳೆಲ್ಲಿವೆ, ಅಲ್ಲಿಗೇ ಹೆಚ್ಚಿನ ವಿದ್ಯುಚ್ಛಕ್ತಿ ಸೌಲಭ್ಯಗಳನ್ನೂ ದೊರಕಿಸಿಕೊಡುವುದಕ್ಕೆ ಸಹಾಯಮಾಡಬೇಕೆಂದು ಹೇಳಿದ್ದಾರೆ.

ಆದ್ದರಿಂದ ಈ ವಿಷಯವನ್ನು ಯಾವ ಯಾವ ವಿಧದಲ್ಲಿ tackle ಮಾಡಬೇಕೋ ಆ ರೀತಿಯಲ್ಲೆಲ್ಲಾ ಮಾಡುತ್ತಿದ್ದೇವೆಂಬುದನ್ನು ತಾವೆಲ್ಲರೂ ನೋಡಬಹುದು. ನೀರಾವರಿ ಪಂಪುಗಳ ವಿಷಯದಲ್ಲಿಯೂ ಸಹ ನಾವು ಎಷ್ಟು ಮಟ್ಟಿನ ಪ್ರಾಮುಖ್ಯತೆ ಕೊಟ್ಟಿದ್ದೇವೆಂಬದನ್ನೂ ನೋಡಬಹುದು. ಸಾಮಾನ್ಯವಾಗಿ ಮೊದಲು ಸೇಕಡಾ 10 ರಷ್ಟು gross ನಫೆ ಬಂದರೇನೇ ಕೆಲಸ ತೆಗೆದುಕೊಳ್ಳಬೇಕೆಂಬ ನಿಯಮವಿತ್ತು. ಅದನ್ನು ತಪ್ಪಿಸಿ, ಮೈಸೂರು ದೇಶದಲ್ಲಿ ಇದೊಂದು ಮುಖ್ಯವಾದ ಸಾರ್ವಜನಿಕರ ಕೈಗಾರಿಕೆ ಮತ್ತು ಎಲ್ಲಾ ಕೈಗಾರಿಕೆಗಳಿಗಿಂತಲೂ ಹೆಚ್ಚಿನ ರಕ್ಷಣೆ ಕೊಡಬೇಕಾದ ಅವಶ್ಯಕತೆಯಿದೆಯೆಂದು ಹೇಳಿ ಹೆಚ್ಚು ಹೆಚ್ಚು ನೀರಾವರಿ ಪಂಪುಗಳನ್ನು ಕೊಡುತ್ತಿರುವುದಲ್ಲದೆ, ಕ್ಷಾಮಪೀಡಿತ ಪ್ರದೇಶಗಳಲ್ಲಿ ಇದಕ್ಕೆ ಮೊದಲು ಪ್ರಾಮುಖ್ಯತೆಕೊಟ್ಟಿದ್ದೇವೆ. ಇನ್ನೊಂದು ವಿಷಯವೇನೆಂದರೆ, ಈ ಡಿಸ್ಟ್ರೆಸ್ ಪ್ರದೇಶಗಳಲ್ಲಾದರೂ ನೀರು ಮೇಲೆ ಸಿಕ್ಕುತ್ತದೆಂದು ಹೇಳಬಹುದು. ಆದರೆ ಮಧುಗಿರಿ, ಚಳ್ಳಕೆರೆ ಮುಂತಾದ ಕೆಲವು ಭಾಗಗಳಲ್ಲಿ 50, 60 ಅಡಿಗಳಷ್ಟು ಹೋದರೂ ನೀರೇ ಸಿಕ್ಕುತ್ತಿರಲಿಲ್ಲ. ಅಂಥ ಕಡೆಗಳಿಗೆಲ್ಲಾ ಅನುಕೂಲಮಾಡಿಕೊಡುತ್ತಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ರೂರಲ್ ಎಲೆಕ್ಟ್ರಿಫಿಕೇಷನ್ ಮಾಡುವಾಗ ಯಾವ ಗ್ರಾಮದಲ್ಲಿ ನೀರಿನ ಸೌಕರ್ಯವಿದೆ, ಎಂಬುದನ್ನು ನೋಡಿ ನೀರಿಲ್ಲದ ಪ್ರದೇಶಕ್ಕೆ Priority ಕೊಟ್ಟು ಪಂಪು ಹಾಕಿಕೊಳ್ಳುವುದಕ್ಕೆ ಮೊದಲು ಅವಕಾಶಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನೂ ಗಮನದಲ್ಲಿಟ್ಟುಕೊಂಡಿದ್ದೇವೆ. ಸ್ಥೂಲವಾಗಿ ನಮ್ಮ ನೀತಿಯನ್ನು ತಮ್ಮಗಳಿಗೆ ತಿಳಿಸಿದ್ದೇನೆ. ಇನ್ನು ಕೆಲವು ಅಂಕಿಅಂಶಗಳ ವಿಚಾರ ಪ್ರಸ್ತಾಪಿಸಬೇಕೆಂದಿದ್ದೇನೆ. ಗೋರಿಬಿದನೂರಿನಿಂದ ಸೇಕಡಾ 200 ರಷ್ಟು ಲಾಭ ಬರುತ್ತಿದೆಯೆಂದು ಮಾನ್ಯ ಮಿತ್ರರುಗಳು ಹೇಳಿದರು. ಅದು ನಿಜವಲ್ಲ. ಸೇಕಡಾ 6·7 ರಷ್ಟು ಮಾತ್ರ ಬರುತ್ತದೆ. ಉತ್ಪ್ರೇಕ್ಷಿತವಾದ ಹೇಳಿಕೆಗಳನ್ನು ನಂಬಿಕೊಂಡರೆ ಹೋಲಿಕೆ ಮಾಡುವುದು ಸರಿಬರುವುದಿಲ್ಲ. 1952—53ನೆಯ ಇಸವಿಗೆ ಬರುವ ವರಮಾನ authorised version ಪ್ರಕಾರ Gross income 15·8 ಲಕ್ಷ. Net in-come 8·05 ಲಕ್ಷ ಮಾತ್ರ. I. P. ಸೆಟ್ಟುಗಳಿಂದ Gross income 8·5 ಲಕ್ಷ ಮಾತ್ರ. (Net in-come ಎಷ್ಟೆಂಬುದು ಗೊತ್ತಿಲ್ಲ). ಏನೇ ಆದರೂ ಯಾವುದನ್ನೂ ನಿಲ್ಲಿಸದೆ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ.

ಆಮೇಲೆ, ಬೆಂಗಳೂರಿನಲ್ಲಿ ವಿದ್ಯುಚ್ಛಕ್ತಿ ಸರಬರಾಜು ಬಹಳ ಅಸಮರ್ಪಕವಾಗಿದೆಯೆಂದು ಹೇಳಿದರು. ಸ್ವಲ್ಪ ಮಟ್ಟಿಗೆ ಆ ರೀತಿ ಆಗುವುದಕ್ಕೆ ಕಾರಣವಿದೆ. ಮೊದಲನೆಯದಾಗಿ ಮೆಷಿನರಿ ಹಳೆಯವು. ಎರಡನೆಯದಾಗಿ 25 ಸೈಕಲ್ಲುಗಳನ್ನು 50 ಸೈಕಲ್ಲುಗಳಿಗೆ conversion ಮಾಡುವ ಕೆಲಸ ಈಗ ತ್ವರೆಯಿಂದ ಸಾಗುತ್ತಿದೆ. ಮಧ್ಯೆ ಮಧ್ಯೆ Shut down ಆಗುವುದು ಅನಿವಾರ್ಯವಾಗಿ ಅನಾನುಕೂಲವಾಗುವುದಕ್ಕೆ ಕಾರಣವಾಗಿದೆ. ಆದ್ದರಿಂದ ಅನಿವಾರ್ಯದಿಂದಲ್ಲದೆ ಅಸಾಮರ್ಥ್ಯದಿಂದ ಹೀಗೆ ತೊಂದರೆಯಾಗುತ್ತಿಲ್ಲವೆಂಬುದನ್ನು ತಿಳಿಸಲಿಚ್ಛಿಸುತ್ತೇನೆ.

ಶ್ರೀ ವಿ. ಮಸಿಯಪ್ಪ.—ವಿದ್ಯುಚ್ಛಕ್ತಿ ದರದ ವಿಷಯ !

ಶ್ರೀ ಎ. ಜಿ. ರಾಮಚಂದ್ರರಾವ್.—We are examining it. ಮಾನ್ಯ ಸದಸ್ಯರು ಫೋನ್ ಮಾಡಿ ಹೇಳಿಬಿಟ್ಟಿದ್ದಾರೆಂದು ಹೇಳಿದರು, ಅದು ನಿಜವಲ್ಲ. ಈಗ ತಾನೆ ಆ ವಿಷಯ ಪರ್ಯಾಲೋಚನೆಗೆ ಬಂದು ಮುಖ್ಯಮಂತ್ರಿಗಳ ಅವಗಾಹನೆಗಾಗಿ ಇಟ್ಟಿದ್ದೇವೆ. ಪರಿಹಾರ ಕೊಡುವುದಕ್ಕೆ ಯೋಚನೆಮಾಡುತ್ತಿದ್ದೇವೆ.

Mr. DEPUTY-SPEAKER.—The question is :

"That a sum not exceeding Rs. 1,37,42,000 be granted to the Government to defray the charges which will come in course of payment during the year ending 31st day of March 1954 in respect of 'Receipts from Electricity Schemes—Working Expenses'."

The motion was adopted.

Mr. DEPUTY-SPEAKER.—The question is :

"That the respective sums not exceeding the amounts shown in the List of Demands for grants for the year 1953-54 circulated among members be granted to defray the charges which will come in course of payment during the year ending 31st March 1954 in respect of Demand Nos. 39, 40, 41, 42, 43, 44 and 45."

The motion was adopted.

(As directed by the Deputy Speaker, the motions for demands passed as above are reproduced below).

DEMAND No. 39.—ROAD TRANSPORT SCHEMES.

XLVI. A. RECEIPTS FROM ROAD TRANSPORT SCHEMES—WORKING EXPENSES.

"That a sum not exceeding Rs. 44,90,000 be granted to the Government to defray the charges which will come in course of payment during the year ending 31st day of March 1954, in respect of 'Receipts from Road Transport Schemes—Working Expenses'."

DEMAND No. 40—IRRIGATION.

68. CONSTRUCTION OF IRRIGATION, NAVIGATION, EMBANKMENT AND DRAINAGE WORKS OUTSIDE THE REVENUE ACCOUNT.

"That a sum not exceeding Rs. 1,56,61,000 be granted to the Government to defray the charges which will come in course of payment during the year ending 31st day of March 1954, in respect of 'Construction of Irrigation, Navigation, Embankment and Drainage Works outside the Revenue Account'."

DEMAND No. 41—INDUSTRIAL DEVELOPMENT.

72. CAPITAL OUTLAY ON INDUSTRIAL DEVELOPMENT.

"That a sum not exceeding Rs 1,80,66,000 be granted to the Government to defray the charges which will come in course of payment during the year ending 31st day of March 1954, in respect of 'Capital Outlay on Industrial Development'."

DEMAND No. 42—ELECTRICITY SCHEMES.

81-A. CAPITAL OUTLAY ON ELECTRICITY SCHEMES.

"That a sum not exceeding Rs. 1,50,00,000 be granted to the Government to defray the charges which will come in course of payment during the year ending 31st day of March 1954, in respect of 'Capital Outlay on Electricity Schemes'."

DEMAND No. 43—MISCELLANEOUS CAPITAL ACCOUNT.

82-B. CAPITAL OUTLAY ON ROAD TRANSPORT SCHEMES.

"That a sum not exceeding Rs. 5,00,000 be granted to the Government to defray the charges which will come in course of payment during the year ending 31st day of March 1954, in respect of 'Capital Outlay on Road Transport Schemes'."

DEMAND No. 44—SCHEMES CONNECTED WITH STATE TRADING.

85-A. CAPITAL OUTLAY ON SCHEMES OF STATE TRADING.

"That a sum not exceeding Rs. 50,00,000 be granted to the Government to defray the charges which will come in course of payment during the year ending 31st day of March 1954, in respect of 'Capital Outlay on Schemes of State Trading'."

DEMAND No. 45—ADVANCES AND LOANS.

R. LOANS AND ADVANCES BY THE STATE GOVERNMENT.

"That a sum not exceeding Rs. 2,07,51,000 be granted to the Government to defray the charges which will come in course of payment during the year ending 31st day of March 1954, in respect of 'Loans and Advances by the State Government'."

Mr. DEPUTY-SPEAKER.—The House will now rise for the day to meet again tomorrow at 8-30 A.M.

The House adjourned at Five Minutes past One of the Clock to meet again at Thirty Minutes past Eight of the Clock on Sunday the 29th March 1953.

WD 4516—GPB—500—6-1-54